

ವಸಂತ ಸಂಚಿಕೆ ಏಪ್ರಿಲ್ ೧೯೭೨

ಸಾಕ್ಷಿ

ಪ್ರೌಢ ಅನುಭವಗಳಿಗೆ ವಿಚಾರಗಳಿಗೆ
ಮೀಸಲಾದ ತ್ರೈಮಾಸಿಕ ಪತ್ರಿಕೆ

ಸಂಪಾದಕ ಗೋಪಾಲಕೃಷ್ಣ ಅಡಿಗ

ಸಾಕ್ಷಿ ತ್ರೈಮಾಸಿಕ

ಸಂಚಾಲಕ ಕೆ ವಿ ಸುಬ್ಬಣ್ಣ
ಪ್ರಕಾಶಕರು ಅಕ್ಷರ ಪ್ರಕಾಶನ
ಮುದ್ರಕರು ಸಾಗರ ಮುದ್ರಣ
ಸ್ಥಳ ಸಾಗರ ಮೈಸೂರು ರಾಜ್ಯ
ಶರತ್ ಹೇಮಂತ ವಸಂತ ವರ್ಷ
ಈ ನಾಲ್ಕು ಸಂಚಿಕೆಗಳು ಕ್ರಮವಾಗಿ
ಅಕ್ಟೋಬರ್ ಜನವರಿ ಏಪ್ರಿಲ್ ಜುಲೈ
ತಿಂಗಳುಗಳಲ್ಲಿ ಪ್ರಕಟವಾಗುತ್ತವೆ
೭೧ ಅಕ್ಟೋಬರ್—೭೨ ಜುಲೈ ಈ
ವರ್ಷಕ್ಕೆ ಚಂದಾ ಹನ್ನೆರಡು ರೂ

ಈ ಸಂಚಿಕೆಯ ಲೇಖಕರು ●

○ ಎಚ್. ಎಮ್. ಪಂಡಿತಾರಾಧ್ಯ, ಕೇರ್ ಶ್ರೀ ಎಚ್. ಎಮ್. ರೇವಾಣಾರಾಧ್ಯ, ಎಮ್.ಬಿ. ಬಿ.ಎಸ್., ಬುದ್ಧ ಸರ್ಕಲ್ ಸಮೀಪ, ಪೋಲಿಸ್ ಸ್ಕೇರ್ಪ ರೋಡ್, ಕೊಟ್ಟೂರು (ಬಳ್ಳಾರಿ ಜಿಲ್ಲೆ)

○ ಡಿ. ಎನ್. ರಾಯಕರ್ ಎಮ್. ಎ., ಉಪನ್ಯಾಸಕರು ವಿಜಯ ಕಾಲೇಜ್, ಮೂಲ್ಕಿ, ದ. ಕ.

○ ವೇಣುಗೋಪಾಲ ರಾವ್ ಸೊರಬ, ಎಮ್. ಎ., ನಂ. 54. ಪೋರ್ಟ್, ಕನಕಪುರ, ಬೆಂಗಳೂರು ಜಿಲ್ಲೆ.

○ ಡಿ. ಕೆ. ಸೀತಾರಾಮಶಾಸ್ತ್ರಿ, ಇಂಗ್ಲಿಷ್ ಉಪನ್ಯಾಸಕರು, ಡಿ. ಆರ್. ಎಮ್. ಕಾಲೇಜ್, ದಾವಣಗೆರೆ-2.

○ ಜವರನಹಳ್ಳಿ ಸಿದ್ದಪ್ಪ, ಎಸಿಟೇಟ್ ನಗರ, ಮಂಡ್ಯ-4.

○ ಜಿ. ಎಸ್. ಸದಾಶಿವ, ಎಮ್.ಎ., ನಂ. 647, 10 ನೇ ಮೈನ್, IV ಬ್ಲಾಕ್, ಜಯನಗರ ಬೆಂಗಳೂರು-11.

○ ಕೆ. ಎನ್. ಶಿವತೀರ್ಥನ್, ಎಮ್. ಎ., ಕನ್ನಡ ಡಿಪಾರ್ಟ್‌ಮೆಂಟ್, ಡಿ. ಬನುಮಯ್ಯ ಕಾಲೇಜ್, ಮೈಸೂರು.

○ ಬಿ. ನಿಜಲಿಂಗಪ್ಪ, ಎಂ. ಎ., ಬಿ. ಎಲ್., II/೧-೩ ನೇ ಕ್ರಾಸ್, ಬೆಂಗಳೂರು-3

○ ಆರ್. ಮೋಹನ್, 6, 4, 494, ಕೃಷ್ಣನಗರ ಕಾಲೋನಿ, ಬೋಲಕ್‌ಪುರ್, ಸಿಕಂದರಬಾದ್, (ಎ. ಪಿ.)

○ ಅಶೋಕ ಕುಲಕರ್ಣಿ, ವೆಂಕಟೇಶ ನಿವಾಸ, ನ್ಯೂ ಎಕ್ಸ್‌ಟೆನ್‌ಷನ್, ಗದಗ

○ ಪಿ. ಲಂಕೇಶ್, ಇಂಗ್ಲೀಷ್ ಡಿಪಾರ್ಟ್‌ಮೆಂಟ್, ಸೆಂಟ್ರಲ್ ಕಾಲೇಜ್, ಬೆಂಗಳೂರು-1.

○ ಕೆ. ಜಿ. ರಂಗಯ್ಯ, ನಂ. 94. ಸಿಂಡಿಕೇಟ್ ಬ್ಯಾಂಕ್ ಸಮೀಪ, ಕ್ಯಾತಸಂದ್ರ, ತುಮಕೂರು ಡಿ.

○ ಬರಗೂರು ರಾಮಚಂದ್ರಪ್ಪ, ಎಂ. ಎ., ಕನ್ನಡ ವಿಭಾಗ, ಸರ್ಕಾರಿ ಕಾಲೇಜು, ಬೆಂಗಳೂರು-1

○ ನಾ. ಮೊಗಸಾಲೆ, ಕರ್ಣಾಟಕ ಕ್ಲಿನಿಕ್, ಕಾಂತಾವರ, ಕಾರ್ಕಳ, ಎಸ್. ಕೆ.

○ ಊರ್ಮಿಳಾ ಸೋಮಯಾಜಿ, D/o. ಬಿ. ಪಿ. ಸೋಮಯಾಜಿ, ವಿದ್ಯಾದಾಯಿನಿ ಹೈಯರ್ ಸೆಕೆಂಡರಿ ಸ್ಕೂಲ್, ಸುರತ್ಕಲ್, (ದ. ಕ.)

○ ಕೆ. ಮಧುಸೂದನ, ಬಿ.ಎ., (ಆನರ್ಸ್) ಕನ್ನಡ ನಿಘಂಟು ಕಚೇರಿ, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮.

○ ಟಿ. ಆರ್. ಮೋಹನ, ಅಂತಿಮ ಬಿ. ಎಡ್., ರೀಜನಲ್ ಕಾಲೇಜ್ ಆಫ್ ಎಜ್ಯುಕೇಷನ್, ಮೈಸೂರು-೬

ಸಂಪಾದಕ : **ಎಂ. ಗೋಪಾಲಕೃಷ್ಣ ಅಡಿಗ,** ಎಂ. ಎ.,
ಡೆ. ಡೈರೆಕ್ಟರ್. (ಸಂ)., ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ಎ. 5. ಗ್ರೀನ್ ಪಾರ್ಕ್, ನ್ಯೂ ಡೆಲ್ಲಿ-16

ಮಾಸ್ತಿಯವರ ಕವಿತೆ :

('ರಾಮನವಮಿ'ಯನ್ನು ಕುರಿತು ವಿಶೇಷವಾಗಿ)

ಗೋಪಾಲಕೃಷ್ಣ ಅಡಿಗ

ಕನ್ನಡ ಸಾಹಿತ್ಯದ ಆಧುನಿಕಯುಗದ ಇತಿಹಾಸದಲ್ಲಿ ಮಾಸ್ತಿಯವರ ಹೆಸರು ಬಹಳ ದೊಡ್ಡದು. ಸಾಹಿತ್ಯದಲ್ಲಿ ಅವರು ಮಾಡುತ್ತ ಬಂದಿರುವ ಕೆಲಸ ಎರಡು ರೀತಿಗಳಿಂದ ತುಂಬ ಪ್ರಾಮುಖ್ಯವುಳ್ಳದ್ದು : ಗಾತ್ರದಲ್ಲೂ ಗುಣದಲ್ಲೂ ವೈವಿಧ್ಯದಲ್ಲೂ ಇವರ ಸಾಹಿತ್ಯಸೃಷ್ಟಿ ಅದ್ವಿತೀಯವಾದದ್ದು ; ಆಧುನಿಕ ಸಾಹಿತ್ಯ ರಚನೆಯು ಆರಂಭಕಾಲದಲ್ಲಿ ಕೈಕೊಂಡ ಹೊಸ ಪ್ರಯೋಗಗಳಿಗೆ ತಕ್ಕ ವಿಮರ್ಶೆಯು ತಾತ್ವಿಕ ತಳಪಾಯವನ್ನು ತಮ್ಮ ವಿಮರ್ಶ ಲೇಖನಗಳಿಂದ ಸಿದ್ಧಪಡಿಸಿದ್ದು. ಸಣ್ಣಕಥೆ, ಕಾವ್ಯ, ನಾಟಕ, ಕಾದಂಬರಿ, ಜೀವನ ಚರಿತ್ರೆ, ವಿಮರ್ಶೆ ಹೀಗೆ ಹೊಸಗನ್ನಡ ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಅಭಿವ್ಯಕ್ತಿಗೊಂಡದ್ದು ಅಪೂರ್ವವಾದೊಂದು ಜೀವನಸತ್ವ. ಈ ಸತ್ವ ನಮ್ಮ ದೇಶದಲ್ಲಿ ಯಾವುದನ್ನು ಸನಾತನ ಧರ್ಮ ಎಂದು ಯುಗಯುಗಗಳಿಂದಲೂ ಒಪ್ಪಿ ನಂಬಿಕೊಂಡು ಬರಲಾಗಿದೆಯೋ ಆ ಧರ್ಮದ ಸಾರ. ಬಾಳಿನ ವೈವಿಧ್ಯದಲ್ಲಿ, ಸುಖ ದುಃಖಗಳಲ್ಲಿ, ಉಬ್ಬರ ಇಳಿತಗಳಲ್ಲಿ, ಏರು ತಗ್ಗುಗಳಲ್ಲಿ ಎಲ್ಲೂ ತೂಕ ತಪ್ಪದಂತೆ, ಧೃತಿಗೆಡದಂತೆ ಶಾಂತವಾಗಿ, ಪ್ರಜ್ಞೆಯ ಬೆಳಕಿನಲ್ಲಿ ಶುದ್ಧವಾಗಿ, ಸಮೃದ್ಧವಾಗಿ ವ್ಯಕ್ತವಾಗುವ ಮಾಸ್ತಿಯವರ ಅಂತರಂಗದ ಅನುಭವದ ಅಭಿವ್ಯಕ್ತಿಗೆ ಬೆಳುದಿಂಗಳ ಪ್ರಶಾಂತಿ, ಹೂವುಗಳ ಮೃದುತ್ವ, ಬಯಲಲ್ಲಿ ಹರಿಯುವ ಅಗಲ ಕಿರಿದಾದ ಹೊಳೆಯ ಸ್ಫಟಿಕ ನಿರ್ಮಲ ಜಲದ ಪಾರದರ್ಶಕತೆ ಇದೆ. ಇವರ ಸಾಹಿತ್ಯಕ್ಕೆ ಮನಸ್ಸನ್ನು ಉಲ್ಲೋಲಕಲ್ಲೋಲ ಗೊಳಿಸಬಲ್ಲ ಯುಗಾಂತರಕಾರಕ ಆವೇಶ, ತೀವ್ರತೆ, ತಲಸ್ಪರ್ಶಿತ್ವ, ಆಕಾಶೋಡ್ಡಯನ ಇಲ್ಲ. ಅದು ಪುರಾತನವಾದೊಂದು ಸಮಾಜದ ಸ್ಥಿರ ಮೌಲ್ಯಗಳಲ್ಲಿ ಬೇರೂರಿ ನಿಂತದ್ದು.

ಸಜ್ಜನನೊಬ್ಬನ ತುಂಬು ಬದುಕಿನ ಕೊಂಬೆ ಕೊಂಬೆಗಳಲ್ಲೂ ತುಂಬಿ ಮಾಗಿ ಹಣ್ಣಾಗಿರುವ ರೀತಿಯ ಕೃತಿರಾಶಿ ಇದು. ಮನಸ್ಸು ಮಾಗದೆ, ಸಮಸ್ಥಿತಿಯ ಕಲ್ಪನೆಯೂ ಇಲ್ಲದೆ ಈ ಕೃತಿಗಳನ್ನು ಮೆಚ್ಚುವುದು ಸುಲಭವಲ್ಲ. ಇವಕ್ಕೆ ಕಣ್ಣಿಗೆ ಹೊಡೆಯುವ ರೂಪವಿಲ್ಲ, ಸ್ಫೂರ್ತಿಗೊಳಿಸಬಲ್ಲ ಮಾಂತ್ರಿಕತೆ ಇಲ್ಲ. ಭಾವೋದ್ವೇಗ ಸ್ಥಿತಿಯಾಗಲೀ, ಅಂಥ ಉದ್ವೇಗವನ್ನು ಹುಟ್ಟಿಸುವ ಶಕ್ತಿಯಾಗಲೀ ಇವರ ಸಾಹಿತ್ಯಕ್ಕೆ ಇಲ್ಲ. ಅಪಾರವಾದ ಅನುಕಂಪ, ವ್ಯಾಪಕವಾದ ಸಹಾನುಭೂತಿ, ಇವರ ಸಾಹಿತ್ಯದಲ್ಲಿ ಅನುಸ್ಯೂತವಾಗಿ ಕಂಡುಬಂದರೂ ಅಲ್ಲಿ ದುರಂತದೃಷ್ಟಿ ಇಲ್ಲ. ಆದಕಾರಣ ಈ ಕೃತಿಗಳಲ್ಲಿ ಕಂಡುಬರುವ ಶಾಂತತೆ ಜಾಗ್ರತ ಮನಸ್ಸಿನ ವಿಚಾರಸ್ಥಲದಿಂದ ಹೊಮ್ಮಿದಂತೆ ಕಾಣುತ್ತದೆಯಲ್ಲದೆ ಆಳದಿಂದೆದ್ದು ಬಂದು ಅಶಾಂತಿಯ ಬಿರುಗಾಳಿಯನ್ನನುಭವಿಸಿ, ಹಡಗೊಡೆದು ಪಾಡುಪಟ್ಟು ಬದುಕಿನ ಅರ್ಥವನ್ನು ಅನುಭವಿಸಿದ ಬಳಿಕ ಸಂಪಾದಿಸಿಕೊಂಡ ಶಾಂತಿಪರ್ವದ ಹಾಗೆ ಕಾಣುವುದಿಲ್ಲ: ಇದು ಇವರ ಸಾಹಿತ್ಯದ ಪರಿಮಿತಿ : ಪ್ರಜ್ಞಾಬದ್ಧತೆ ; ದ್ವಂದ್ವಗಳ ಚಿತ್ರವಿಲ್ಲದ ದ್ವಂದ್ವ ಸಮನ್ವಯ.

ಈ ಗುಣಗಳು ಚೆನ್ನಾಗಿ ಎದ್ದು ಕಾಣುವುದು ಇವರ ಕಾವ್ಯದಲ್ಲಿ. ಇಲ್ಲಿ ಭಾರತೀಯ ಕಾವ್ಯ ಸಂಪ್ರದಾಯವನ್ನು ಇಂಗ್ಲಿಷ್ ರೊಮ್ಯಾಂಟಿಕ್ ಕಾವ್ಯ ಸಂಪ್ರದಾಯದೊಡನೆ ಹೊಂದಿಸಿಕೊಂಡ ರೀತಿ ಅಭ್ಯಾಸಯೋಗ್ಯವಾಗಿದೆ. ಕಾಳಿದಾಸನಿಂದ ಟಾಗೂರರವರೆಗೂ ಹರಿದು ಬಂದ ಭಾರತೀಯ ಕಾವ್ಯ ಸಂಪ್ರದಾಯ ತನ್ನ ಮೌಲ್ಯಗಳಲ್ಲಿ ಮುಖ್ಯವಾಗಿ ಸಾಮಾಜಿಕವಾದದ್ದು. ತನ್ನ ಸ್ವಂತ ಅನುಭವದ ವಿಶೇಷವನ್ನು ತನ್ನ ಸತ್ವದ ವೈಶಿಷ್ಟ್ಯವನ್ನು ಕಾವ್ಯವಾಗಿಸಬೇಕೆನ್ನುವುದಕ್ಕಿಂತ ಒಂದು ಆಖ್ಯಾನವನ್ನೋ ಪುರಾಣ ಕಥೆಯನ್ನೋ ಎತ್ತಿಕೊಂಡು ತನ್ನ ವೈಯಕ್ತಿಕ ವಿಶೇಷ ಏನಾದರೂ ಇದ್ದರೆ ಅದನ್ನು ಶೈಲಿ ಉಪಮೆ ಮುಂತಾದ ಅಂಶಗಳಲ್ಲಿ ತೋರಿಸಿದರೆ ಸಾಕು ಎನ್ನುವುದು ಈ ಸಂಪ್ರದಾಯದ ಸಾಮಾನ್ಯ ಧೋರಣೆ. ಅನುಭವದ ಫಲವನ್ನು ಮಾತ್ರ ಹೇಳುವ ಆದರೆ ಅದರ ಸಹಜ ರೂಪವನ್ನು—ಅದರ ತುಮುಲ, ಸಂಘರ್ಷ ಕ್ಲೇಶ ಇವುಗಳನ್ನು—ಹೊರತುಪಡಿಸುವ ಧೋರಣೆ ಅದು. ಈ ಧೋರಣೆ ಮನಸ್ಸಿನ ಆಳಗಳನ್ನಾಗಲೀ ಕೆಡುಕಿನ ಭೀಕರತೆಯನ್ನಾಗಲೀ ಗಮನಿಸದೆ ಸಾಮಾಜಿಕ ಮೌಲ್ಯಗಳಿಗೇ ಅಂಟಿಕೊಳ್ಳುವುದರಲ್ಲಿ ವ್ಯಕ್ತವಾಗುತ್ತದೆ. ವೇದ, ಉಪನಿಷತ್ತು, ಮಹಾಭಾರತ, ಪುರಾಣಗಳನ್ನು ಕಾವ್ಯವೆಂದು ಪರಿಗಣಿಸದ ಈ ಸಂಪ್ರದಾಯ ಬದುಕಿನ ಒಳಪದರುಗಳಿಗೆ ತಕ್ಕ ಮಹತ್ವ ಕೊಡದೆ ಕಾವ್ಯೋದ್ದೇಶವನ್ನೇ ಸಂಕುಚಿತಗೊಳಿಸಿ ಜೀವನವನ್ನೆಲ್ಲ ತುಂಬ ಸರಳಗೊಳಿಸಿಕೊಂಡು ಬಂದಿದೆ ಎಂದು ತೋರುತ್ತದೆ. ಶೃಂಗಾರ ರಸಕ್ಕೇ ತೀರ ಪ್ರಾಧಾನ್ಯ ಕೊಟ್ಟು ಒಟ್ಟಿನಲ್ಲಿ ಕಾವ್ಯವನ್ನು ಮನೋರಂಜನ ಸಾಧನವನ್ನಾಗಿ ಮಾಡಿತು. ಈ ಶತಮಾನದ ಆದಿಭಾಗದಲ್ಲಿ ಕಾವ್ಯವೆಂದರೆ ಇದೇ, ಪದ್ಯರೂಪದಲ್ಲಿದ್ದದ್ದೆಲ್ಲ ಕಾವ್ಯ ಎಂದು ಸಾಮಾನ್ಯ

ಭಾವನೆ ಇತ್ತು. ಸ್ವಂತ ಅನುಭವಕ್ಕೂ ಬರೆಯುವ ಕಾವ್ಯಕ್ಕೂ ಮೂಲಭೂತ ಸಂಬಂಧ ಅಗತ್ಯ ಎಂಬ ವಿಚಾರ ಸ್ಪಷ್ಟವಾದದ್ದು, ಕವಿಯ ವ್ಯಕ್ತಿತ್ವದ ಬಗ್ಗೆ, ಅವನ ಸ್ವಾನುಭವದ ಬಗ್ಗೆ ನಿಚ್ಚಳವಾದ ವಿವೇಚನೆ ನಡೆಯತೊಡಗಿದ್ದು ಇಂಗ್ಲಿಷ್ ಕಾವ್ಯದ ಪ್ರಭಾವ ನಮ್ಮ ವಿದ್ಯಾವಂತ ಸಾಹಿತ್ಯಪ್ರೇಮಿಗಳ ಮೇಲೆ ಬಿದ್ದ ಅನಂತರವೇ. ವರ್ಡ್ಸ್‌ವರ್ಥ್ ಕವಿಯ ಕಾವ್ಯಸೂತ್ರಗಳನ್ನು ಚೆನ್ನಾಗಿ ಅರಿತು ಅವುಗಳನ್ನು ತಮ್ಮದಾಗಿಯೂ ಆ ಮೂಲಕ ಕನ್ನಡದ್ದನ್ನಾಗಿಯೂ ಮಾಡಿಕೊಂಡವರು ನಮ್ಮಲ್ಲಿ ಶ್ರೀ ಮಾಸ್ತಿಯವರೊಬ್ಬರೇ ಎನ್ನಬಹುದು. ವರ್ಡ್ಸ್‌ವರ್ಥ್ ಕವಿಯ ಕಾವ್ಯಸೂತ್ರಗಳಲ್ಲಿ ಮಾಸ್ತಿಯವರು ಕನ್ನಡಕ್ಕೆ ಅರಗಿಸಿಕೊಂಡ ಅಂಶಗಳು ಮುಖ್ಯವಾಗಿ ಇವು : ಮನಸ್ಸಿನ ಕ್ರಿಯೆಗಳಿಗೆ ತಕ್ಕ ಕನ್ನಡಿಯಾಗಬಲ್ಲ, ಕಾವ್ಯಮಯತೆಯಿಂದ ಕವಿಸಮಯಗಳಿಂದ ಸಂಪೂರ್ಣ ಮುಕ್ತವಾದ, ಶಬ್ದಾಡಂಬರದ ಸೋಂಕೂ ಇಲ್ಲದ ಜನಸಾಮಾನ್ಯದ ಆಡುಮಾತಿನ ಧಾಟಿಗೆ ತುಂಬ ಹತ್ತಿರವಾದ ಭಾಷಾ ಶೈಲಿ ; ಅಶಿಕ್ಷಿತರು ಗ್ರಾಮಸ್ಥರು ಮುಂತಾಗಿ ಕಾವ್ಯ ಅಲ್ಲಿಯವರೆಗೆ ಕಡೆಗಣಿಸಿದ್ದ ಸಮಾಜವರ್ಗಗಳಲ್ಲಿ ಆಸಕ್ತಿ ; ಅವರ ಬದುಕಿನಲ್ಲಿ ಮಥನಗೊಂಡು ವ್ಯಕ್ತವಾಗುವ ಜೀವನದರ್ಶನದ ಬಗ್ಗೆ ಕುತೂಹಲ ; ಕಾವ್ಯವೆಂದರೆ "ಪ್ರಶಾಂತ ಸ್ಥಿತಿಯಲ್ಲಿ ಮರುಕೊಳಿಸುವ ಭಾವ" ಎಂಬ ಧೋರಣೆ. ಆದರೆ ವರ್ಡ್ಸ್‌ವರ್ಥ್‌ನ ಕಾಲದಲ್ಲೇ ತೀವ್ರವಾಗುತ್ತಿದ್ದ, ಆತನ ಕಾವ್ಯಕ್ಕೂ ಮುಖ್ಯ ಪ್ರೇರಕವಾಗಿದ್ದ ಏಕಾಂಗಿತನದ ಪ್ರಜ್ಞೆ, ಸ್ವಾನುಭವ ವಿಶ್ಲೇಷಣೆ ಮಾಸ್ತಿಯವರ ಕಾವ್ಯದಲ್ಲಿ ಇಲ್ಲ. ಹೊಸ ನಾಗರಿಕತೆಯ ಧರ್ಮಬಾಹಿರ ಧನದಾಹವನ್ನು ಮಾಸ್ತಿಯವರು ಖಂಡಿಸುತ್ತಾರಾದರೂ ಒಟ್ಟಿನಲ್ಲಿ ಇವರ ಸಂಬಂಧ ಸಮಾಜದ ಜೊತೆಗೆ ಅನ್ಯೋನ್ಯವಾದದ್ದು. ನಮ್ಮ ಧರ್ಮದ ಉತ್ತಮ ಮೌಲ್ಯಗಳನ್ನು ಹೃತ್ಪೂರ್ವಕವಾಗಿ ಸ್ವೀಕರಿಸಿ, ಸಹಿಷ್ಣುತೆಯನ್ನು ತಮ್ಮ ಅಂತರಂಗದ ಅವಿಭಾಜ್ಯಾಂಶವನ್ನಾಗಿ ಮಾಡಿಕೊಂಡು, ಈ ಪ್ರಪಂಚವೆಲ್ಲವೂ ಪರಮಾತ್ಮನ ಲೀಲೆ ಎಂಬ ಶ್ರದ್ಧೆಯ ಭದ್ರ ಬುನಾದಿಯ ಮೇಲೆ ಇವರು ತಮ್ಮ ಭಾವ ವಿಚಾರಗಳ ಹಂದರವನ್ನು ಹಬ್ಬಿಸುತ್ತಾರೆ. ಹೀಗಾಗಿ ಇವರ ಕಾವ್ಯ ಮೌಲ್ಯಸಂಶೋಧಕವಲ್ಲ, ಮೌಲ್ಯನಿಷ್ಠ.

ಕಾವ್ಯದಲ್ಲಿ ಮಾಸ್ತಿಯವರ ದೃಷ್ಟಿ ಧಾರ್ಮಿಕವಾದದ್ದು, ಆಧ್ಯಾತ್ಮಿಕವಾದದ್ದಲ್ಲ. ತನ್ನನ್ನು ಮೀರಿ ವಿಶ್ವದೊಡನೆ ಬೆರೆಯುವ ಆಶೆ—ಇದು ರೊಮ್ಯಾಂಟಿಕ್ ಕಾವ್ಯಕ್ಕೆ ಮೂಲಭೂತವಾದದ್ದು—ಮಾಸ್ತಿಯವರ ಕಾವ್ಯದಲ್ಲಿ ಇಲ್ಲ. ಬದಲಾಗಿ ನಾವು ಕಾಣುವುದು ನಮ್ಮ ಧರ್ಮದ 'ಸಹಿಷ್ಣುತೆ' ಎಂಬ ಮೌಲ್ಯದಲ್ಲಿ ಅಡಕವಾಗಿದ್ದು, ಪ್ರಜಾಪ್ರಭುತ್ವ ತತ್ವದ ಸೂತ್ರಗಳ ಅರಿವಿನಿಂದ ಸ್ಫುಟಗೊಂಡ 'ಲಿಬರಲ್'—ಉದಾರವಾದಿ—ದೃಷ್ಟಿ. ಅದರಿಂದಲೇ ಇವರಿಗೆ ತಮ್ಮ ಸ್ವಂತ ನಂಬಿಕೆಗಳಲ್ಲಿ ನಿಷ್ಠೆ ದೃಢವಾಗಿದ್ದರೂ ಅದೇ ಪರಮ ಎಂಬ ಮತಚ್ಛಲ ಇವರ ಕಾವ್ಯದಲ್ಲಿ ಎಲ್ಲೂ

ಕಾಣಿಸುವುದಿಲ್ಲ. ಪ್ರತಿಯೊಬ್ಬನೂ ತನ್ನ ತನ್ನ ನಂಬಿಕೆಗನುಗುಣವಾಗಿ ಬದುಕುವುದೇ ಸರಿ ; ಆದರೆ ಆ ನಂಬಿಕೆ ಬಾಳನ್ನು ಬೆಳಗುವಂಥದೂ, ನಮ್ಮ ಜೀವವನ್ನು ಮೆಟ್ಟಿಲು ಮೆಟ್ಟಿಲುಗಳಾಗಿ ದೇವರ ಕಡೆ ಏರಿಸುವಂಥದೂ ಆಗಿರಬೇಕು.

ಬಾಳನು ಬೆಳಗಲು ಬಲ್ಲ ನಂಬಿಕೆಯು
ನಾನು ಸತ್ಯ ಎಂಬೆ ;
ಇದ ಮಾಡದ ನುಡಿ ಏತರ ಸತ್ಯ ?
ಅದು ಸತ್ಯದ ಗೊಂಬೆ
....
ಮುದುಪನ ನಂಬಿಕೆ ನನ್ನಲಿ ಮೊಳೆಯದು ;
ನನ್ನದು ನಿಮಗಲ್ಲ :
ಮೊಗದಲಿ ಮನದಲಿ ದೇವಸೃಷ್ಟಿಯಲಿ
ಇವನವೊಲವನಿಲ್ಲ.

('ರಾಮನವಮಿ')

ಬೇಂದ್ರೆ ಪುಟ್ಟಪ್ಪನವರ ಕವಿತೆಗಳಲ್ಲಿ ಕಾಣುವ ಆಧ್ಯಾತ್ಮಿಕ ಎನ್ನಬಹುದಾದ ದೃಷ್ಟಿ ಮಾಸ್ತಿಯವರದ್ದಲ್ಲ. ತನಗಿಂತ ಭಿನ್ನವಾದದ್ದರಲ್ಲಿ ತನ್ಮಯವಾಗುವ ಪ್ರವೃತ್ತಿಗಿಂತ ಹೆಚ್ಚಾಗಿ ನಾವು ಇವರ ಕವಿತೆಗಳಲ್ಲಿ ಕಾಣುವುದು ತನ್ನತನವನ್ನು ಚೆನ್ನಾಗಿ ಅರಿತು ಅದು ಉಳಿದವುಗಳ ಜೊತೆ ಹೇಗೆ ಸರಿಯಾಗಿ ಇರಲು ಸಾಧ್ಯ ಎಂದು ಚಿಂತನ ನಡೆಸುವ ಆಸಕ್ತಿ. ಇದರಿಂದ ಇವರ ಕಾವ್ಯ ತಕ್ಕಷ್ಟು ಆಳವಾದದ್ದಲ್ಲ ಎನಿಸುತ್ತದೆ. ಆದರೆ ಆ ಕಾರಣದಿಂದಲೇ ಇದು ಎಲ್ಲ ಮಿಥ್ಯಾ ಆಧ್ಯಾತ್ಮಿಕತೆಯಿಂದಲೂ ಭಾವ ಸಮಾಧಿಯ ಆಭಾಸದಿಂದಲೂ ಮುಕ್ತವಾಗಿದೆ. ಕೇವಲ ಮಾತುಗಳಲ್ಲಿ ಮಾತ್ರ ಹರಿದೋಡುವ ಆಧ್ಯಾತ್ಮಿಕತೆಯ ಸೋಗು ಇವರ ಕಾವ್ಯದಲ್ಲಿ ಎಲ್ಲೂ ಇಲ್ಲ. ತನ್ನ ಆಳಕ್ಕೆ ಮೀರಿದ್ದನ್ನೂ ತನ್ನ ತೆಕ್ಕೆಗೆ ಸಿಕ್ಕದ್ದನ್ನೂ ಹಿಡಿಯಲು ಇಲ್ಲಿ ಹೋರಾಟವೇ ನಡೆಯುವುದಿಲ್ಲವಾಗಿ ಇವರ ಕವಿತೆ ತೆಳ್ಳಗೆ ಎನ್ನಿಸಿದರೂ ಕೃತಕ ಎನ್ನಿಸುವುದಿಲ್ಲ. ಅದು ಸಪ್ಪೆಯಾಗದೆ ಇರುವುದಕ್ಕೆ ಮಾಸ್ತಿಯವರ ನಿಲುವಿಗೆ ಸಹಜವಾಗಿರುವ ಚತುರೋಕ್ತಿ, ನರ್ಮಹಾಸ್ಯ, ನಿರ್ಮಲ ಬುದ್ಧಿಪ್ರಕಾಶ ಇವು ಕಾರಣವೆಂದು ತೋರುತ್ತದೆ. ಒಟ್ಟಿನಲ್ಲಿ ಈ ಕವಿತೆ ತನ್ನ ಅನಿಸಿಕೆಗಳಿಗೆ ಬದ್ಧವಾಗಿರುವ ಕಲಾಪ್ರಾಮಾಣಿಕತೆಯಿಂದ, ಎಂದರೆ ತಾನು ಹೇಳಬೇಕೆಂದಿದ್ದುದಕ್ಕಿಂತ ಕೊಂಚವೂ ಹೆಚ್ಚು ಎನಿಸದ ಮಾತುಗಳ ಜೋಡಣೆಯಿಂದ, ಆಡುಮಾತಿಗೆ ಸಹಜವಾದ ಲಯದಿಂದ, ತನ್ನ ತೂಕದಿಂದ, ಗಾಂಭೀರ್ಯದಿಂದ, ಸಹಜತೆಯಿಂದ ಹೃದ್ಯವಾಗುತ್ತದೆ. ಮಾತಿನ ದುಂದುಗಾರಿಕೆಯಿಂದ ಮುಕ್ತವಾಗಿ, ತನ್ನ

ಪ್ರಭಾವಸಿದ್ಧಿಗೆ ಸಂಗೀತ ಗತಿಯನ್ನು ಆಶ್ರಯಿಸದೆ, ಗದ್ಯದಲ್ಲೂ, ಪದ್ಯದಲ್ಲೂ ಒಂದೇ ರೀತಿ ಬಳಸಬಹುದಾದ ಉಭಯ ಸಮಾನ ಶೈಲಿಯಲ್ಲಿ ರಚಿತವಾಗಿರುವ ಇವರ ಕವಿತೆ ಈ ದೃಷ್ಟಿಯಿಂದ ಮುನ್ನೋಟವುಳ್ಳದ್ದಾಗಿಯೂ, ಸಂಪ್ರದಾಯ ಮೌಲ್ಯಗಳಲ್ಲಿ ಶ್ರದ್ಧೆಯಿರುವ ಜೀವನ ದೃಷ್ಟಿಯಿಂದಾಗಿ ಪ್ರಜ್ಞಾಬದ್ಧವಾಗಿರುವುದರಿಂದ ಹಿನ್ನೋಟ ವುಳ್ಳದ್ದಾಗಿಯೂ ಇದ್ದು ನಮ್ಮ ದೇಶದ ಆಧುನಿಕೀಕರಣದ ಒಂದು ಹಂತವನ್ನು ತುಂಬ ಚೆನ್ನಾಗಿ ಪ್ರತಿನಿಧಿಸುತ್ತದೆ.

ಈ ಎಲ್ಲ ಅಭಿಪ್ರಾಯಗಳ ಸಮರ್ಥನೆಗಾಗಿ ಮಾಸ್ತಿಯವರ ಅತ್ಯುತ್ತಮ ದೀರ್ಘ ಕವನ ಗಳಲ್ಲಿ ಒಂದಾದ 'ರಾಮನವಮಿ' ಎಂಬ ಕವನವನ್ನು ಪರಿಶೀಲಿಸಬಹುದು. ೧೮೨ ಚತುಷ್ಪದಿಗಳಲ್ಲಿ ಅಂತ್ಯಪ್ರಾಸ ಸಹಿತವಾಗಿ ಬರೆದ ಈ ಕವನ ತುಂಬ ಮಹತ್ವವುಳ್ಳ ಕೃತಿ ಎಂದು ನನಗೆ ತೋರುತ್ತದೆ. ಈ ಕವನದ ಭಾಷೆ ಶೈಲಿ ನಿಲುವುಗಳಿಂದ ನಾವು ಕಲಿಯಬೇಕಾದ್ದು ಬಹಳವಿದೆ ಎಂದು ನನಗೆ ಅನ್ನಿಸುತ್ತದೆ. ನಾಲ್ಕು ಮಾತ್ರೆಗಳ ಗಣ ದಿಂದ ಕೂಡಿರುವ ಚೌಪದಿಗಳಲ್ಲಿ ಆಡುಮಾತಿನ ಗತಿಯನ್ನು ತರುವುದು, ನೇರವಾದ ಸಂಭಾಷಣೆಯ ಮಾತುಗಳನ್ನೂ ಅಳವಡಿಸಿಕೊಳ್ಳುವುದು, ಸಂಗೀತಗತಿಯ ಕಡೆಗೆ ಓಲದೆ ಭಾವಾನುಸಾರಿ ಗತಿಯಲ್ಲಿ ಅಭಿವ್ಯಕ್ತಿ ಸಾಧಿಸುವುದು ಆಶ್ಚರ್ಯಕರವಾದ ಸಾಧನೆ :

> ನುಡಿಸಿದುದಾತಗೆ ಬಹು ಸಂತೋಷ,
>   "ಕೈ ಮುಗಿದೆ, ಒಡೆಯ,
> ಎತ್ತ ಹೊರಟಿರಿ" ಎಂದನು ಮುದುಪ
>   ನಿಲಿಸಿ ನನ್ನ ನಡೆಯ,
> ....
> ವಿದೇಹರಾಜತನೂಜೆ ದಶರಥ
>   ಚಕ್ರೇಶ್ವರನ ಸೊಸೆ,
> ಈ ಕ್ಲೇಶವ ತಡೆವಳೆ ? ಸರಿಯೇ ಈ
>   ತನ್ವಿಗೆ ಇಂಥ ದೆಸೆ ?

ಈ ಕವನ ಒಂದು ಕಥನಕವನವೇ. ಕವಿ ಕಥೆಯನ್ನು ಬಳಸಿಕೊಳ್ಳುವ ರೀತಿಯಿಂದ ಅತ್ಯಂತ ಸರಳವಾಗಿ ಕಾಣುವ ಈ ಪದ್ಯಗಳಲ್ಲಿ ತಕ್ಕಷ್ಟು ಸಂಕೀರ್ಣವಾದೊಂದು ಅನುಭವ ಪಡಿಮೂಡುತ್ತದೆ. ಇದು ಒಂದು ರಾಮನವಮಿಯ ದಿನವೇ ನಡೆಯುವ ಸಂಗತಿ. ಕಥಕ ಪಟ್ಟಣವನ್ನು ಬಿಟ್ಟು ಬೋವನಹಳ್ಳಿಯ ಮುಂಗಡೆ ನಡೆಯುತ್ತಿರಲು

ಒಂದು 'ಬಸರಿಯ ಮರದಡಿ' ಹಳ್ಳಿಯ ಮುದುಕ ಗೌಡನೊಬ್ಬನನ್ನು ಕಾಣುತ್ತಾನೆ. ಮುದುಕನ ಕರೆಯಂತೆ ಹೋಗಿ ಮರದಡಿ ಕುಳಿತಾಗ ಮುದುಕ ಈತನಿಗೆ ಆ ಸ್ಥಳದ ಮಹಿಮೆಯನ್ನು ಕುರಿತು ಹಳೆಯ ಕತೆಯೊಂದನ್ನು ಹೇಳುತ್ತಾನೆ. ಅದು ರಾಮ, ಸೀತೆ, ಲಕ್ಷ್ಮಣರಿಗೆ ಸಂಬಂಧಪಟ್ಟ ಕಥೆ. ತನ್ನ ವನವಾಸ ಕಾಲದಲ್ಲಿ ಅಲ್ಲಿಲ್ಲಿ ಸಂಚರಿಸುತ್ತ ಈ ಕಡೆಗೆ ಬಂದಾಗ ಸೀತೆ ಬಿಸಿಲಲ್ಲಿ ಬೆಂದು ಬಳಲಿ ಕ್ಲೇಶಪಡುತ್ತಿರುವುದನ್ನು ಗಮನಿಸಿದ ಶ್ರೀರಾಮ ಅಲ್ಲಿ ಆ ಮರದಡಿಯಲ್ಲಿ ವಿಶ್ರಾಂತಿಗೆಂದು ಕುಳಿತಾಗ ಹಠಾತ್ತನೆ ಸೀತೆಗೆ ಅದು ಶ್ರೀರಾಮನ ಜನ್ಮದಿನ ಎಂಬುದು ನೆನಪಿಗೆ ಬರುತ್ತದೆ. ಹಣ್ಣು ಹಂಪಲುಗಳನ್ನು ಆಯ್ದು ತಂದು ಆ ಮರದಡಿಯಲ್ಲೇ ಹಬ್ಬದ ಅಡುಗೆಯನ್ನು ಮಾಡಿ ಊಟ ಮಾಡಿ ವಿಶ್ರಮಿಸಿ ಅಲ್ಲಿಂದ ಹೊರಟು ಮುನ್ನಡೆಯುತ್ತಾರೆ. ಆ ಸ್ಥಳದ ಚಂದ ಸೀತೆಯ ಮನಸ್ಸಿಗೆ ತುಂಬ ಹಿಡಿಸುತ್ತದೆ. ಹೊರಡುವಾಗ ಸೀತಾದೇವಿ ಈ ಮರವನ್ನು ಹರಸುತ್ತಾಳೆ—'ಬಾಡಬೇಡ ನೀ' ಎಂದು. ಹಾಗೆಯೇ ಅಡುಗೆಗೆ ನೆರವಾದ ಬಾವಿಗೆ 'ಬತ್ತದಿರು' ಎನ್ನುತ್ತಾಳೆ. ಪ್ರತಿ ವರ್ಷವೂ ರಾಮನವಮಿಯ ದಿವಸ ಅಲ್ಲಿಗೆ ಸೀತೆ ರಾಮ ಲಕ್ಷ್ಮಣ ಬರುತ್ತಾರೆ, ಬಂದು ಮೂರು ಗಳಿಗೆ ಸುಳಿದಾಡುತ್ತಾರೆ ಎಂದು ಹಳ್ಳಿಗರ ನಂಬಿಕೆ. ಆ ಮರವೇ ಇಂದಿಗೂ ಇದೆ ಎಂಬುದೂ ಅವರ ನಂಬಿಕೆಯ ಒಂದು ಅಂಶ. ಅಂತೂ ಅಲ್ಲಿ ಮರವಿಲ್ಲದೆ ಇದ್ದದ್ದನ್ನು ಎಂದೂ ಯಾರೂ ಕಂಡಿಲ್ಲ. ಅದನ್ನು ಯಾರೂ ಕಡಿಯುವುದಿಲ್ಲ. ಅದು ಒಣಗುವಷ್ಟಕ್ಕೆ ಒಂದು ಕೊಂಬೆಯನ್ನು ಅಲ್ಲಿಯೇ ನೆಡುವ ಬುದ್ಧಿ ಜನಕ್ಕೆ ಎಂದಿಗೂ ಇರಲಿ ಎಂದು ಗೌಡ ಹಾರಯಿಸುತ್ತಾನೆ. ಈ ಗೌಡನ ತಾತ, ಹೆತ್ತಾತ, ರಾಮ ಲಕ್ಷ್ಮಣ ಸೀತೆಯರು ಆ ಮರದಡಿ ರಾಮನವಮಿಯ ದಿವಸ ಸುಳಿದಾಡುವುದನ್ನು ಕಂಡಿದ್ದಾರೆ :

ಪುಣ್ಯವಂತರಿಗೆ ಕಾಣುವರೆಂದು
 ಹೇಳಿ ಕೇಳಿ ಬಲ್ಲೆ ;
ಕರುಣಿಸೆ ಕಾಂಬರು ; ಪುಣ್ಯವೆ ? ದೇವರ
 ಕೃಪೆಗೆ ಏಕೆ ಎಲ್ಲೆ ?

ತನಗೂ ಎಂದಾದರೂ ಕಾಣಬಹುದೆಂದು ಪ್ರತಿ ವರ್ಷವೂ ಈ ಮುದುಕ ಗೌಡ ರಾಮನವಮಿಯ ದಿವಸ ಮಧ್ಯಾಹ್ನದ ಹೊತ್ತು ಅಲ್ಲಿಗೆ ಬಂದು ಕಾದಿರುತ್ತಾನೆ. ಕಾಣಿಸುತ್ತಾರೆ ಎಂದೇ ಈ ಗೌಡ ನಂಬಿದ್ದಾನೆ—ಇನ್ನೂ ಕಂಡಿಲ್ಲ. ಅವನಿಗೆ ನಂಬಿಕೆ ಇದೆ :

ಕಾಣುವರೆಂದೇ ನಂಬಿಹೆ ನಾನು
 ಹಿರಿಯರ ನುಡಿ ಹಿಡಿದು ;

ಕಾಂಬರೆ ಇಲ್ಲವೆ ನೋಡಬೇಡವೇ
ನಂಬಿಕೆಯಲಿ ನಡೆದು ?
ಕಣ್ಣಿಗೇನು ಕಾಣುವುದೆ ಗಾಳಿ ? ಕೈ
ಆಡಿಸೆ ಮೈ ಸೋಕಿ
ತಾನಿಹೆನೆಂಬುದು ; ಅಂತೆಯೆ ದೇವರು ;
ಕಾಣರು ಏಕಾಕಿ.
ತೆಳುವಾಗಿರುವರು ; ಬುದ್ಧಿಯನಾಡಿಸೆ
ಮನಸಿಗೆ ತಟ್ಟುವರು.
ಸೈಪುಳ್ಳವರಿಂತಿದಿರಲಿ ನಡೆಯುವ
ದೇವರ ದಿಟ್ಟಿಪರು.

ಎಂದೂ ಗೌಡ ತಿಳಿಯಬಲ್ಲ. ನಾಕ, ನರಕ ಇವು ನಮ್ಮೆದುರಲ್ಲೇ ಇವೆ. ಅವುಗಳಲ್ಲಿ ಯಾವುದು ಬೇಕೋ ಅದನ್ನು ನಾವು ನಮ್ಮ ಕೆಲಸದಲ್ಲಿ ಕಾಣಬಹುದು. ಒಂದೇ ಬಲಗೈಯಿಂದ ಹೊಡೆದರೆ ನರಕ, ನೀಡಿದರೆ ನಾಕ. ಈ ನಮ್ಮ 'ಹೊಲಮೈ' ಕೂಡ 'ತೊಳೆದರೆ ದೇಗುಲ, ಬಿಟ್ಟರೆ ನಾರುವ ಬುದ್ದಲಿ'. ಹೀಗೆ ಸ್ವರ್ಗ ನರಕಗಳು ಎಲ್ಲ ಕಡೆಗಳಲ್ಲೂ 'ಹೆಣೆದಿವೆ'—'ಕಲಿಯಬೇಕು ಮನುಜರು ಒಂದರಲೇ। ಕಾಣಲು ಇಮ್ಮಡಿಯ'.

ಈ ಮಾತುಗಳು ನಮ್ಮ ಧರ್ಮದ ಸಾರ ಎಂಬುದು ಮಾತ್ರವಲ್ಲ, ಎಲ್ಲ ಕಾಲಕ್ಕೂ ಸಲ್ಲುವಂಥ ದೊಡ್ಡ ಮಾತುಗಳು. ಇವು ಗೌಡನ ಬಾಯಿಯಲ್ಲಿ ಬರುವುವಾದರೂ ಕಥನಕಾರನವೇ. ಆದರೆ ಈ ಜ್ಞಾನದ ಮಾತುಗಳ ಹಿಂದಿರುವ ಅನುಭವ ಯಾವುದು ? ಇದು ಪರಂಪರಾಗತವಾಗಿ ಬಂದ ಮಾತುಗಳ ಪುನರುಚ್ಚಾರಣೆಯೋ ಅಥವಾ ಆ ಹಳ್ಳಿಯ ಮುದುಕನ ಜೀವನಾನುಭವದಲ್ಲಿ ಸಿದ್ಧವಾದ ಮಾತುಗಳೊ ? ಈ ಸಂದೇಹ ನಮಗೆ ಉಳಿಯುತ್ತದೆ. ಆದರೆ ಇಂಥ ಮಾತುಗಳು ಅವಿದ್ಯಾವಂತನಾದರೂ ಬುದ್ಧಿವಂತನಾದ, ಅನುಭವದ ಅರ್ಥವನ್ನು ಚಿಂತಿಸುವ ಶಕ್ತಿಯುಳ್ಳ ಹಳ್ಳಿಯವನಿಗೂ ಅಸಹಜ ಎನ್ನಿಸುವುದಿಲ್ಲ.

ಆದರೆ ಕಥೆ ಇಲ್ಲಿಗೆ ಮುಗಿಯುವುದಿಲ್ಲ. ಕೇವಲ ಹಳೆಯ ಕಥೆಯೊಂದರ ಪುನರುಚ್ಚಾರವೇ ಈ ಕವನದ ಉದ್ದೇಶವಲ್ಲ. ಆ ಹಳೆಯ ಕಥೆಯ ಸತ್ವವೇ ಹೇಗೆ ಮತ್ತೆ ಮತ್ತೆ ಎಲ್ಲ ಕಾಲದಲ್ಲೂ ಪುನರಾವೃತ್ತಿ ಪಡೆಯುತ್ತದೆ, ಸಾರ್ವಕಾಲಿಕ ಸತ್ಯವನ್ನು ಹೇಗೆ ಸಂಕೇತಿಸುತ್ತದೆ ಎನ್ನುವುದನ್ನು ಕವಿ ಸೂಚಿಸುತ್ತಾರೆ. ಗೌಡ ಕಥೆ ಹೇಳುತ್ತಿರುವಾಗಲೇ

ಕಥಕ ದೂರದ "ತಗ್ಗಿನ ಮರದಡಿಗೆ" ಒಬ್ಬ ಹುಡುಗ ನಿಂತಿರುವುದನ್ನೂ ಒಬ್ಬಳು ಹುಡುಗಿ ಕುಳಿತಿರುವುದನ್ನೂ ಕಾಣುತ್ತಾನೆ. "ಸೀತಾರಾಮರೆ ಬಂದರೊ ಹೇಗೆ" ಎಂದು ಆತನ ಎದೆ ತುಡಿಯುತ್ತದೆ. ಮುದುಕನನ್ನು ಮೆಚ್ಚಿ ಬಂದರೂ ಆಶ್ಚರ್ಯವಿಲ್ಲ ಎನ್ನಿಸುತ್ತದೆ. ಅಲ್ಲಿ ಕಂಡವರು ಗೌಡನನ್ನು ಕರೆಯಲು ಬಂದ ಅವನ ಮಗ ಮತ್ತು ಸೊಸೆ. ಮಗನ ಹೆಸರು ರಾಮು, ಸೊಸೆ ಈರವ್ವ. ಇವರೂ ಕೂಡ ರಾಮ ಸೀತೆಯರೇ ಅಲ್ಲವೆ ?

ಮಾತಿನ ಜಾಣರು ಮನೆಮಗ ರಾಮು,
    ಎಲ್ಲ ಹೆಣ್ಣು ಸೀತೆ,
ಎಂದು ಹೇಳುವುದ ಕೇಳಿದೆ ನಾನು,
    ಇದೇನು ಬರಿ ಮಾತೆ ?
ದೇವರೆ ನಿಜ , ಹೆತ್ತಾತನು ಎದುರಲಿ
    ಆ ದಿನ ರಾಮನಿರೆ
ಮಗನನು ಕಂಡನು ದೇವರ ಕಾಣನು ;
    ಮಾಯೆಗೆ ನಾವಿದಿರೆ ?

ಗೌಡನ ಮಾತುಗಳನ್ನು ಕೇಳುತ್ತ ಕೇಳುತ್ತ ಕಥಕನಿಗೆ ಒಂದು ಭಾವನೆ ಹೊಳೆಯುತ್ತದೆ :

ದಶರಥ ಸೀತಾರಾಮರು ಇವರು,
    ನಾನೆ ಆದೆ ಜನಕ :
ಮನದಿಂದಿಳಿಯದು ಇನ್ನಾ ಚಿತ್ರ
    ಈ ಉಸಿರಿರುವನಕ.

ಪುರಾಣದ ಕಥೆ ಹೀಗೆ ಇಂದಿನ ವಾಸ್ತವದಲ್ಲೂ ಮನಸ್ಸನ್ನು ತಿದ್ದುತ್ತದೆ. ತಿದ್ದಬೇಕು ಎನ್ನುವುದು ಮಾಸ್ತಿಯವರ ದೃಷ್ಟಿ. ಈ ಅಭಿಪ್ರಾಯವನ್ನು ಹೇಗೆ ಯಾವ ರೀತಿ ರೂಪಿಸಿದ್ದಾರೆ ಎನ್ನುವುದು ತುಂಬ ಮುಖ್ಯವಾದುದು. ಇದು ಮುದುಕನ ಅಭಿಪ್ರಾಯ, ತನ್ನದಲ್ಲ ಎಂದು ಹೇಳುತ್ತ—"ನನ್ನದು ನಿಮಗಲ್ಲ : । ಮೊಗದಲಿ ಮನದಲಿ ದೈವ ಸೃಷ್ಟಿಯಲಿ। ಇವನಪೊಲವನಿಲ್ಲ." ಇದು ಆ ಗೌಡನ ನಂಬಿಕೆ. ಅಂಥ ನಂಬಿಕೆಯಿಂದ ಅವನ ಆತ್ಮ ಹಸನಾಗುತ್ತದೆ. ಅಲ್ಲದೆ ಸೀತಾರಾಮರನ್ನು ಎಲ್ಲ ಲೋಕವೂ ಪೂಜಿಸಲಾರದು ; ಇದು ನಮ್ಮ—'ಕರ್ಮದುರ್ವಿಪಾಕ'. ಆದರೆ,

ಹೆಸರನು ಏನೇ ಮಾಡಲಿ ಲೋಕ,
    ಹಿಡಿದಿರಲಿ, ಬಿಡಲಿ,

ಹೆಸರು ಗುರುತಿಸಿದ ಸತ್ಯದ ಬಿತ್ತನು
ಬಿಡದೆ ಒಳಗೆ ನೆಡಲಿ ;

ಘಾಸ್ಪಿಯುವರ ಧರ್ಮದ ಕಲ್ಪನೆ ತುಂಬ ಆರೋಗ್ಯಕರವಾದದ್ದು, ಅದು ಯಾವ ಮಾನವ ಪ್ರವೃತ್ತಿಯನ್ನಾಗಲೀ ಅಲ್ಲಗಳೆಯುವಂಥದಲ್ಲ ; ಸಂಪೂರ್ಣ ನಿಗ್ರಹದ ಅಸಹಜತೆಯನ್ನೂ ಭೀಕರತೆಯನ್ನೂ ಅರಿತಂಥದು ; ಧರ್ಮದ ಸೂತ್ರಗಳಿಗೆಲ್ಲ ನಮ್ಮಲ್ಲಿರುವ ಸತ್ಪ್ರವೃತ್ತಿಗಳೇ ಮೂಲವೆಂಬುದನ್ನು ಮರೆಯದಂಥದು. ರಾಮ ಸೀತೆಯರ ದಾಂಪತ್ಯಜೀವನದ ಚಿತ್ರಣದಲ್ಲಿ ಈ ದೃಷ್ಟಿ ತುಂಬ ಹೃದಯಂಗಮವಾಗಿ ನಿರೂಪಿತವಾಗಿದೆ. ರಾಮ ಸೀತೆ ಒಬ್ಬರನ್ನೊಬ್ಬರು ಚೆನ್ನಾಗಿ ಬಲ್ಲವರು. ಸೀತೆ ತಾನು ರಾಮನನ್ನು ಹಿಂಬಾಲಿಸಿ ಕಾಡಿಗೂ ಬರುವುದು ತನ್ನ ಧರ್ಮ ಎನ್ನುತ್ತಾಳೆ. ಆದರೆ,

ತನ್ನ ಜೊತೆಗೆ ಇರಬೇಕೆಂಬಾಸೆಗೆ
ಧರ್ಮದ ಹೆಸರಿಟ್ಟು
ಸತಿ ಪಡುತಿಹ ಹಿರಿಯಾಯಸ ನೋಡಿದ
ರಾಘವ ಬಸಗೆಟ್ಟು

ಸೀತೆ ತಾನು ಆಯಾಸಪಟ್ಟುದನ್ನು ಮರೆಸಲು ಬೇರೆ ಮಾತು ತೆಗೆಯುತ್ತಾಳೆ. ಸುತ್ತಲಿನ ಚಂದವನ್ನು ನೋಡಿ "ರಾಮಾ, ಎಂತಹ ಸಿಂಗರ" ಎನ್ನುತ್ತಾಳೆ. ರಾಮನೂ ವಿರಸವನ್ನಾಡಲಾರದೆ 'ಎಂತಹ ಸಿಂಗರ' ಎನ್ನುತ್ತಾನೆ. ಆದರೆ ತನ್ನ ಹೆಂಡಿರು ಆಯಾಸ ಪಟ್ಟುದನ್ನು ಮರೆಯಲಾರ. ಅವನ ಪೊಟಕು ಮಾತಿನಿಂದ ಸೀತೆಗೆ ತೃಪ್ತಿ ಆಗುವುದಿಲ್ಲ. ತನ್ನ ಆಣ್ಮನ ಚಿಂತೆಯನ್ನು ಕಳೆಯಲು ಯತ್ನಿಸುತ್ತಾಳೆ. "ಕಾಡಿನ ಕಷ್ಟವನ್ನು ನೀನು ಬಹಳ ಬಣ್ಣಿಸಿದೆ, ಬರಲೇಬಾರದು ಎಂದು ನನ್ನನ್ನು ಎಷ್ಟೋ ತಡೆದೆ. ಆದರೆ ಇಲ್ಲಿಗೆ ಬರದಿದ್ದರೆ ಈ ಬನಸಿರಿಯನ್ನು ಕಾಣುವುದಾದರೂ ಹೇಗೆ ? ಹತ್ತು ವರ್ಷ ನಿಂತರೂ ಇದನ್ನು ನೋಡಿ ತಣಿಯಲು ಆಗದು—

ದಿನ ದಿನವೂ ಅಲ್ಲಿ ಅಯೋಧ್ಯೆಯಲಿ
ಇದೇ ಚಂದ್ರ, ಸೂರ್ಯ
ಇದ್ದರು ; ಏತಕೆ ಇಂತಂ ಕಾಣರು ?
ಇದು ಎನಗಾಶ ಚರ್ಯ

ಎನ್ನುತ್ತಾಳೆ, ಅನುಭವಿಸುತ್ತಿರುವ ಸುಖವನ್ನು ಸೀತೆ ಬಣ್ಣಿಸುತ್ತಾಳೆ—'ಅರ್ಧ ನಿಜದಿ'

ಎಂದು ಸೇರಿಸುತ್ತಾರೆ ಮಾಸ್ತಿ. ತನಗಾಗಿ ದೊರೆಗೆ ಚಿಂತೆ ಬೇಡ ಎಂದು ಅರ್ಥವನ್ನು ಮರೆಸುತ್ತಾಳೆ. ರಾಘವನೂ ಇದನ್ನು ಬಲ್ಲ. ತನ್ನ ಸತಿಯ ಸ್ನೇಹದ ಈ ಅಭಿವ್ಯಕ್ತಿಯನ್ನು ಕಂಡು ಅವನಿಗೆ ಯಾವಾಗಲೂ ಆಶ್ಚರ್ಯ. ದಂಪತಿಗಳ ಈ ಅನ್ಯೋನ್ಯ, ಆ ಅನ್ಯೋನ್ಯದಲ್ಲೂ ಇರುವ, ಬಹುಶಃ ಇರಲೇಬೇಕಾದ ಮರಸು, ಈ ಅರೆ ನಿಜ ಇವುಗಳನ್ನೂ ಗುರುತಿಸುತ್ತಾರೆ. ಒಲಿದವರ ಪರಿಯೇ ಹೀಗೆ. ಗೌಡನ ಮಗ ಸೊಸೆಯರ ಬಗೆಯೂ ಇಂಥದೇ. ಕಥಕ, ದೂರದಿಂದ ನೋಡಿದಾಗ ಹೆಣ್ಣು ನಗುತ್ತಿರುತ್ತಾಳೆ :

ಏನೊ ಹೇಳುವಳು ; ಏನೂ ಕೇಳದೆ
ಗಂಡು ಬರಿಯ ಕಣ್ಣು.

ಗೌಡನೂ ಚಿಕ್ಕವಯಸ್ಸಿನ ಗಂಡ ಹೆಂಡಿರ "ಕೂರ್ಜಿನ ಮಾತು ಹೆರರು ಕೇಳತಗವು" ಎಂದು ಬಲ್ಲ. ಗಂಡನಿಗೆ ಹೇಳುವ ಮಾತನ್ನು ಹುಡುಗಿ ಮನೆಯಲ್ಲಿ ಹೇಳುವುದು ಹೇಗೆ ? ಕಣ್ಣು ಸನ್ನೆಯಲ್ಲಿ ಅವನನ್ನು ಕರೆದು ಕೊಳದ ಕಡೆಗೆ ಒಯ್ಯುತ್ತಾಳೆ ; ಹಗ್ಗವನ್ನು ಹೊಸೆಯುವ ನೆಪದಲ್ಲಿ. ಬಟ್ಟೆ ಒಗೆಯುವ ನೋಗಿನಲ್ಲಿ ಸ್ವಲ್ಪ ಹೊತ್ತು ಜೊತೆಗಿದ್ದು ಪ್ರೀತಿಯಿಂದ ನಗುತ್ತಾರೆ, ನುಡಿಯುತ್ತಾರೆ. ಹೀಗೆ ರಾಮಸೀತೆಯರನ್ನೂ ಗೌಡರ ಸೊಸೆ ಮಗನನ್ನೂ ಸಮೀಕರಿಸುವುದರಿಂದ ದೇವರು ನಮಗಿಂತ ಬೇರೆ ದೂರದಲ್ಲಿರುವವನಲ್ಲ, ಪ್ರೀತಿಯಲ್ಲಿ ಸ್ನೇಹದಲ್ಲಿ ಇಲ್ಲಿ ಸದಾಕಾಲವೂ ಪ್ರತ್ಯಕ್ಷವಾಗಿರುವ ಸತ್ಯ ಎಂಬುದನ್ನು ಸೂಚಿಸುತ್ತಾರೆ. ಆದಕಾರಣ ಈ ಕವನದ ಮಧ್ಯದಲ್ಲಿ ಬರುವ ಈ ಮಾತುಗಳು,

ದೇವರ ಆಟದ ಮನೆ ಈ ಲೋಕ :
ಇಲ್ಲಿ ದನಿಗೆ ಕೊರೆಯೆ ?
ಕಂಪಿಗೆ ? ರುಚಿಗೆ ? ಮನುಜಗೆ ಸಾಧ್ಯವೆ
ಇಹ ಬಣ್ಣವ ಬರೆಯೆ ?
ಇನಿದೆಲ್ಲಾ ಸ್ವರ ; ಎಲ್ಲವೂ ದೇವರು
ನಮ್ಮ ಕರೆವ ರೀತಿ ;
ಒಮ್ಮೆ ಒಂದು ತೆರ, ಮತ್ತೆ ಬೇರೆ ತೆರ,
ಹರಿವುದವನ ಪ್ರೀತಿ.

ಎಂಬ ಈ ಸಾಲುಗಳು ಈ ಕವನ ಸೃಷ್ಟಿಸುವ ವಾತಾವರಣದಲ್ಲಿ ನಿಜ ಎನಿಸುತ್ತವೆ. ಹೃದ್ಯವಾಗಿ ಕಣ್ಣನ್ನು ಒದ್ದೆಮಾಡುತ್ತವೆ. ಇವೆಲ್ಲ ಕೇವಲ ಸ್ವಭಾವೋಕ್ತಿಯ ವಾಚ್ಯದಿಂದಲೇ ಸಾಧಿಸುವಂಥದು—ನಿಜ. ರೂಪಕ ಪ್ರಯೋಗದಿಂದ, ಪ್ರತಿಮಾ ಸೃಷ್ಟಿ

ಯಿಂದ ಬರುವ ಅರ್ಥದ ದಟ್ಟಣೆ ಇಲ್ಲಿ ಇಲ್ಲ. ಉಪಮೆ ರೂಪಕಗಳು ಬಂದರೂ ಮುಖ್ಯವಾಗಿ ಇದು ಸ್ವಭಾವೋಕ್ತಿ ಪ್ರಧಾನವಾದ ಕಾವ್ಯ. ಹೀಗಿದ್ದರೂ ಇದು ನಮ್ಮ ಮನಸ್ಸನ್ನು ಮುಟ್ಟಿ ತಟ್ಟಿ ಭಾವಗಳನ್ನು ಎಬ್ಬಿಸುವುದು ಹೇಗೆ ?

ಮಾಸ್ತಿಯವರ ಕಾವ್ಯ ನಮಗೆ ಹೃದ್ಯವಾಗುವುದು ಅದರ ಮಾತಿನ ಹದದಿಂದ, ಅರ್ಥಾನುಸಾರಿಯಾದ ಶುದ್ಧ ಗತಿಯಿಂದ. ವಾಕ್ಯಪರಿಷ್ಕಾರದಿಂದ ಈ ಮಾತಿನ ಗತಿಯೊಡನೆ ಬೆರೆಯಲು ಅಗತ್ಯವಾದದ್ದು ಶ್ರುತಿ ಸೂಕ್ಷ್ಮತೆ. ಇಂಥದನ್ನು ಸೃಷ್ಟಿಸುವ ಪ್ರತಿಭೆಗೆ ಶ್ರಾವಣಪ್ರತಿಭೆ ಎನ್ನಬಹುದು. ಕೇವಲ ಶಬ್ದಗಳ ಲಯದ ಮೂಲಕವೇ, ಗತಿಯ ಸೂಕ್ಷ್ಮಾತಿಸೂಕ್ಷ್ಮ ಏರಿಳಿತಗಳ ಮೂಲಕವೇ ಈ ಕಾವ್ಯ ನಮ್ಮಲ್ಲಿ ಭಾವ ಪ್ರಬೋದನೆಯನ್ನು ಉಂಟುಮಾಡುತ್ತದೆ.

ಮಾಸ್ತಿಯವರ ಕವಿತೆ ತಣಿಸುವ ಕವಿತೆ. ಇದು ಬಹಳ ಆಳಕ್ಕೆ ಇಳಿದು ಮನಸ್ಸಿನ ಮೂಲವನ್ನು ಕೆದಕಿ ಬೆದಕಿ ನೋಡುವುದಿಲ್ಲ ; ಪ್ರಜ್ಞೆಯ ಕೆಳಕ್ಕೆ ಇರುವ ದಾನವತ್ವ ಪಶುತ್ವಗಳಿಗೆ ಮುಖಾಮುಖಿ ಆಗುವುದಿಲ್ಲ ; ಕನಸುಗಳ ರೆಕ್ಕೆ ಬಿಚ್ಚಿ ನಮಗೆ ದೂರದ ಅಂತರಾಳಗಳ ಯಾತ್ರೆ ಮಾಡಿಸುವುದಿಲ್ಲ. ರುದ್ರವೂ ಭೀಕರವೂ ಆದ ತಮಸ್ಸನ್ನು ಮರಸಿ ಬದುಕಿನಲ್ಲಿರುವ ಚೆಲುವನ್ನೂ ನಲಿವನ್ನೂ ನಗುವನ್ನೂ ಬೆಳಕನ್ನೂ ತೋರಿಸುತ್ತದೆ. ಆದಕಾರಣವೇ ಈ ಕವಿತೆ ನಮಗೆ ಸಂಪೂರ್ಣ ತೃಪ್ತಿಯನ್ನು ಕೊಡುವುದಿಲ್ಲ. ಆದರೆ ಎಷ್ಟನ್ನು ಕೊಡಲು ಉದ್ದೇಶಿಸಿರುತ್ತದೋ ಅಷ್ಟನ್ನು ಮಾತ್ರ ಕೊಟ್ಟೇ ಕೊಡುತ್ತದೆ. ಅದು ಎಷ್ಟನ್ನು ನೀಡುತ್ತದೋ ಅಷ್ಟೂ ಮಹತ್ವದ್ದು, ಮರೆಯಬಾರದ್ದು. ಆದ ಕಾರಣ ಮಾಸ್ತಿಯವರ ಕಾವ್ಯಾಭ್ಯಾಸ ಮನಸ್ಸಿಗೆ ತಂಪನ್ನು ನೀಡುವುದಲ್ಲದೆ ನಮ್ಮ ಅರಕೆಗಳನ್ನೆಷ್ಟೋ ತುಂಬಲೂ ಸಮರ್ಥವಾಗಿದೆ. ಎಲ್ಲ ಕಾಲಗಳಲ್ಲೂ ಕಾವ್ಯಾಭ್ಯಾಸಿಗಳು ಸಾಹಿತ್ಯಪ್ರಿಯರು ಮತ್ತೆ ಮತ್ತೆ ಮಾಸ್ತಿಯವರ ಕವಿತೆಗಳ ಕಡೆಗೆ ಬರುತ್ತಾರೆ ಎನ್ನುವುದರಲ್ಲಿ ಸಂದೇಹವಿಲ್ಲ.

●

ಶ್ರೀ ಮಾಸ್ತಿಯವರ ಸಂಭಾವನಾಗ್ರಂಥ 'ಶ್ರೀನಿವಾಸ'ಕ್ಕಾಗಿ ಬರೆದದ್ದು.

ಮೃಗಜಲ

ಹೊ. ಮ. ಪಂಡಿತಾರಾಧ್ಯ

ಮುಗಿಲಂಚಿನವರೆಗೆ ನಿಚ್ಚಣಿಕೆಯನಿಟ್ಟು
ಸೂರ್ಯಚಂದ್ರ ತಾರೆಗಳನೆಲ್ಲಾ ಕಿತ್ತು
ಒಮ್ಮೊಂದೊಮ್ಮೆಲೇ ಅಲ್ಲಿಂದ ಜಿಗಿದು
ನನ್ನ ಜಂಘಾಬಲವನೆಲ್ಲಾ ಪ್ರದರ್ಶಿಸಿ
ಅವಳ ಮುಂದೆ ಬಿದ್ದೇಳುವ ಬಯಕೆ
ಗಿರಿ–ಶಿಖರಗಳನೆಲ್ಲಾ ಬುಡಸಹಿತ ಕಿತ್ತು ತಂದು
ಕೆಳಮೇಲ್ಮಾಡಿ ಅವಳ ಮುಂದೆಸೆದು
ನನ್ನ ಭುಜಬಲವನೆಲ್ಲಾ ತೋರಿಸಿಬಿಡುವಾಸೆ
ಈ ಭೂಮಿಯ ಹಿಡಿತದಿಂದ ಚಟ್ಟನೆ
ಅವಳೊಡನೆ ದೂರ ಸಿಡಿದು
ಬೆರಳ ತುದಿಯಲಿ ಭೂಮಿಯ ಹಿಡಿದು
ತಿರುಗಿಸಿ ಚೆಂಡಾಡುವ ಆಸೆ
ಆದರೆ ನಾನೇನು ಮಾಡಲಿ ನೋಡಿ
ತುಡುಗು ಹಟದ ದನವ ಗೂಟಕ್ಕೆ ಕಟ್ಟಿ
ಕೊಟ್ಟಿಗೆಯಲಿ ಕೊಳೆ ಹಾಕಿರುವಂತೆ
ನಾ ಮನೆಯೊಳಗೇ ಕೊಳೆಯುತಲಿರುವೆ
ಹಗಲಿರುಳುಗಳನೆಲ್ಲಾ ಕಳೆಯುತಲಿರುವೆ
ಹೊರಗೆ ಕಂಡರೆ ಹುಡುಗರು ಕಿಸಕ್ಕನೆ ನಕ್ಕಾರೆಂದು
ಮನೆಯೊಳಗೇ ಅವಿತಿರುವೆ ; ನಾ ಕುಂಟ ಇರುವೆ.

ಯಶವಂತ ಚಿತ್ತಾಲರ 'ಸೆರೆ'

ಡಿ. ಎಸ್. ರಾಯಕರ

ಮನಸ್ಸಿನ ಮೂಲೆಯಲ್ಲೆಲ್ಲೋ ಅಡಗಿಸಿಕೊಂಡಿದ್ದ ಆಸೆಗೆ ತಕ್ಕ ಪರಿಸ್ಥಿತಿ ಮತ್ತು ವಾತಾವರಣಗಳು ನಿರ್ಮಾಣಗೊಂಡಾಗ ಅಂತಃಸತ್ವದ ಗಟ್ಟಿತನವಿಲ್ಲದೆ ಅನ್ಯರ ವ್ಯಕ್ತಿತ್ವ ಇಲ್ಲವೆ ಆದರ್ಶಗಳನ್ನು ತನ್ನದಾಗಿಸುವ ಪ್ರಯತ್ನ ವಿಫಲಗೊಳ್ಳುತ್ತದೆ ಎನ್ನುವದನ್ನು ಸಾಬೀತು ಮಾಡಬೇಕೆನ್ನುವ ಚಿತ್ತಾಲರ ಉದ್ದೇಶ 'ಸೆರೆ'[1] ಕಥೆಯ ಮೂಲಕ ಸಾಧಿಸಿದೆ. ಹೊನ್ನಪ್ಪಾಚಾರಿಯ ಹೆಂಡತಿಯ ಕಣ್ಣುಗಳನ್ನು ಮತ್ತು ದೇವಿಯ ತೊಡೆ ಮೊಲೆಗಳನ್ನು ಮೆಲಕು ಹಾಕುತ್ತಿದ್ದ 'ಬರ್ಮಚಾರಿ ಒಡೆದಿರ' ಮನಸ್ಸಿನಲ್ಲಿ ದೇವಿ ಗಲಭೆ ಎಬ್ಬಿಸಿ ಒಡೆದಿರನ್ನು ಸಂಪೂರ್ಣವಾಗಿ 'ಸೆರೆ' ಹಿಡಿಯುವ ಸಂದರ್ಭದಲ್ಲಿ ಇದು ನಡೆಯುತ್ತದೆ. ಒಂದು ಕಡೆ, 'ಬರ್ಮಚಾರಿ ಒಡೆದಿರು' ಮದುವೆಯಾಗದೇ ಇರುತ್ತೇನೆಂದು ಘನ ಪ್ರತಿಜ್ಞೆಯನ್ನೇ ಗೈದು, ನಿತ್ಯ ಜೀವನದಲ್ಲಿ ಅದನ್ನು ಜಾರಿಗೆ ತರಲು ಮತ್ತು ಋಜುವಾತುಗೊಳಿಸಲು ಅಸಾಧ್ಯವಾಗುವುದರಿಂದ ಅದು ಆದರ್ಶವಾಗಿ, ಅಸಹಜವಾಗಿ ಮತ್ತು ಸೋಗು ಆಗಿ ನಿಲ್ಲುತ್ತದೆ. ಇನ್ನೊಂದು ಕಡೆ "ಮೈಯಲ್ಲಿ ಪ್ರಾಯ ತುಂಬಿ ಮುಸು ಮುಸು" ಎನ್ನುತ್ತಿದ್ದ ದೇವಿಯೊಡನೆ ಸಮಾಗಮ ಸುಖ ಪಡೆಯಬೇಕೆಂಬ ತೀವ್ರ ಆಸೆ ಪ್ರಾಯಭರಿತ ಒಡೆದಿರಿಗೆ ಸಹಜವಾಗುತ್ತದೆ. ಸಹಜ ಮತ್ತು ಅಸಹಜಗಳ ನಡುವೆ ಸಂಘರ್ಷ ಉಂಟಾಗಿ ಯಾವದು ಸರಿ ಯಾವದು ತಪ್ಪು ಎನ್ನುವ ದ್ವಂದ್ವ ಪ್ರಶ್ನೆಗೆ ಒಡೆದಿರು ಗುರಿಯಾದಾಗ ಅಂತಿಮವಾಗಿ ಸಹಜವಾದದ್ದು ಗೆಲ್ಲುತ್ತದೆ ಮತ್ತು ಅಸಹಜವಾದದ್ದು ಸೋಲುತ್ತದೆ ಎನ್ನುವ ಸಾರ್ವಕಾಲಿಕ ಸತ್ಯದ ಶೋಧನೆ ಮಾಡಲು 'ಸೆರೆ' ಕತೆಯ ಮೂಲಕ ಪ್ರಯತ್ನಿಸಿದ್ದಾರೆ ಚಿತ್ತಾಲರು. ನಮ್ಮ ಸುತ್ತಮುತ್ತಲೂ ಒಳಗೊಂದು ಹೊರಗೊಂದು ವ್ಯಕ್ತಿತ್ವದ ಅಂದರೆ ಒಳಗೆ ಹೆಣ್ಣಿನ ಸಮಾಗಮ ಸುಖದ

1—ನೋಡಿ: ಆಟ (ಕಥಾಸಂಕಲನ) ಪಾಪ್ಯುಲರ್ ಪ್ರಕಾಶನ, ಮುಂಬೈ.

ಆಶೆ ಹೊರಗೆ ಮಾತ್ರ ಬ್ರಹ್ಮಚರ್ಯದ ಸೋಗು ಹಾಕಿದ 'ಬರ್ಮಚಾರಿ ಒಡೆದಿರ'ನೇಕರು ಕಾಣಿಸುವದರಿಂದ 'ಬರ್ಮಚಾರಿ ಒಡೆದಿರು' ಇಂಥ ಇಬ್ಬಗೆಯ ವ್ಯಕ್ತಿತ್ವವನ್ನು ಪಡೆದ ಜನರ ಸಂಕೇತವಾಗಿ ನಿಲ್ಲುತ್ತಾರೆ.

ಮೃತ್ಯುಪ್ರಜ್ಞೆಯ ಹಿನ್ನೆಲೆಯಲ್ಲಿ ಕಥಾನಾಯಕನ ಸಹಜ–ಅಸಹಜ ಪ್ರವೃತ್ತಿಗಳಲ್ಲಿ ಉಂಟಾಗುವ ಆಂತರಿಕ ಆಂದೋಲನವೇ ಈ ಕತೆಗೆ ವೈಚಾರಿಕ ತಳಹದಿಯನ್ನು ಒದಗಿಸುತ್ತದೆ. ಮೃತ್ಯುಪ್ರಜ್ಞೆಯ ಕೇಂದ್ರ ವ್ಯಕ್ತಿಯಾದ ಸೋದರತ್ತೆ ಮದುವೆಯಾದ ಎರಡು ವರ್ಷಗಳಲ್ಲೇ ಗಂಡನನ್ನೂ ಕಳೆದುಕೊಂಡು ಬೋಳಿಯಾಗಿ ಅತೃಪ್ತ ಕಾಮ ವಾಸನೆಯಿಂದ ನವೆನವೆದು ಕೆಟ್ಟ ಗಳಿಗೆಯಲ್ಲಿ ಸಾಯುವದರಿಂದ ಮನೆ ಬಿಡಬೇಕಾಗುತ್ತದೆ. ಈ ಬಿಟ್ಟ ಹಳೆಯ ಮನೆಯಲ್ಲಿ ವಸ್ತುತಃ ಭೋಗಾಸಕ್ತಿ ಸಹಜವಾಗಿದ್ದ ಆದರೆ ಬ್ರಹ್ಮ ಚರ್ಯದ ಆದರ್ಶ ಆಕರ್ಷಣೆಗೆ ಸಿಕ್ಕು ಒಳಗೊಳಗೆ ಕೊರಗುತ್ತಿದ್ದ ತರುಣ ಕಥಾ ನಾಯಕ. ಈ ಕಥಾನಾಯಕ ಬಿಟ್ಟ ಹಳೆ ಮನೆಯ ಕತ್ತಲಲ್ಲಿ ಮನೋನಿಗ್ರಹಕ್ಕಾಗಿ ಪರದಾಡುತ್ತಿರುವಾಗ, ಚಡಪಡಿಸುತ್ತಿರುವಾಗ ಈ ಬಿಟ್ಟ ಹಳೆ ಮನೆಯ ಹೊರ ಜಗಲಿಯ ಮೇಲೆ ಒಲೆ ಹೂಡಿದ, ಮದುವೆಯಾದ ಕೆಲವು ದಿನಗಳಲ್ಲೇ ಗಂಡ ಓಡಿ ಹೋದುದರಿಂದ ಅತೃಪ್ತ ಕಾಮವಾಸನೆಯಿಂದ ನವೆಯುತ್ತಿರುವ ಮತ್ತು ಭೋಗ ಕುತೂಹಲೆಯಾದ ದೇವಿ. ಇಲ್ಲಿ ಈ ಮೂವರೂ ಅಸಂತೃಪ್ತರೇ. ಈ ಮೂವರ ಸಂಬಂಧವನ್ನೂ ಕಲ್ಪಿಸಿದ್ದೂ ಕತೆಯ ಬೆಳವಣಿಗೆಯ ದೃಷ್ಟಿಯಿಂದ ಗಮನಾರ್ಹವಾಗಿದೆ. ಕತೆಯ ನೆಯ್ಗೆಯಲ್ಲಿ ಇದು ಅನಿವಾರ್ಯ ಅಂಗವಾಗಿದೆ. "ಸೋದರತ್ತೆ ಸತ್ತ ವೇಳೆ ಕೆಟ್ಟದಾಗಿತ್ತೆಂದು ಬಿಟ್ಟ ಹಳೆಯ ಮನೆ ; ಮೂರುಸಂಜೆಯ ಹೊತ್ತಿನಲ್ಲಿ ಮನೆ ತುಂಬ ಹಬ್ಬಿಕೊಂಡ ಮಬ್ಬುಗತ್ತಲೆ ; ತಿಂಗಳಿಡೀ ಕದಗಳನ್ನೆಲ್ಲ ಮುಚ್ಚಿಕೊಂಡು ಗಾಳಿಯಾಡದ ಮೈಯಲ್ಲಿ ನೆರೆನಿಂತ ಎಂತಹದೋ ಹಳಿತ ವಾಸನೆ. ಕಾಲಿಟ್ಟಲ್ಲೆಲ್ಲ ಧೂಳು : ತಾನು ಇದ್ದ ಪರಿಸ್ಥಿತಿಯ ಅರಿವು ಈಗ ಆಯಿತೆನ್ನುವಂತೆ ಸ್ಟೂಲಿನ ಮೇಲೆ ಕುಳಿತಲ್ಲೇ ನಡುಗಿದ. ಇಷ್ಟೆಲ್ಲ ಆದದ್ದು ಆ ಹಾಳು ದೇವಿಯಿಂದ. ಹಿಂದಿಲ್ಲ ಮುಂದಿಲ್ಲದ ಹುಡುಗಿ. ಥೂತ್ ಎಂದು ಅಂಗಳದಲ್ಲೇ ಪ್ರಕಟವಾಗಿ ಮಾತನಾಡಿಸಿದ. (ಮೊಲೆ ತೋರಿಸಿದ) ಅವಳಿಗೆ ಹೆದರಿಯೇ ಅಲ್ಲವೆ ತಾನು ಇಲ್ಲಿಗೆ ಬಂದು ಸಿಕ್ಕಿಕೊಂಡದ್ದು. ಆ ಇಲ್ಲದ ವೈಯಾರದ ಹೆಣ್ಣು—ಪೊನ್ನಪ್ಪಾಚಾರಿಯ ಹೆಂಡತಿ—ದೇವಿಯ ಬಗ್ಗೆ ಮಾತ ನಾಡುತ್ತ "ಹಾಗೆ ಮುಗುಳುನಕ್ಕಿರದಿದ್ದರೆ ಇಷ್ಟೆಲ್ಲ ಆಗುತ್ತಿರಲಿಲ್ಲವೇನೋ" (ಆಟ, ಪುಟ–೨೦) ಇಲ್ಲಿ ತನ್ನ ವ್ರತನಿಷ್ಠೆ ಭಂಗಗೊಂಡೀತೆನ್ನುವ ಭೀತಿ ಕಥಾನಾಯಕನಿಗೆ ಇದೆ. ತನ್ನ ವ್ರತನಿಷ್ಠೆಗೆ ಯಾವದೇ ರೀತಿಯಿಂದ ಚ್ಯುತಿ ಬರಬಾರದೆಂದು ವಿಷಯಾ ಸಕ್ತ ವಾತಾವರಣ ಮತ್ತು ಸನ್ನಿವೇಶಗಳಿಂದ ದೂರವಿರಲು ಬಯಸುವ ಅವನಿಗೆ ಅಚ್ಚರಿಯಾಗಿ ಮನುಷ್ಯಸಹಜವಾದ ಕಾಮಕ್ಕೆ ಆಸರೆಯನ್ನು ಹೆಣ್ಣಿನೊಡನೆ ಪಡೆಯು

ವದು ಅನಿವಾರ್ಯವಾಗುತ್ತದೆ.

ಕತೆಯ ಬೆಳವಣಿಗೆ ಇರುವದು ದ್ವಂದ್ವ ಸೆಳೆತಕ್ಕೆ ಒಳಗಾದ ಕಥಾನಾಯಕನಲ್ಲಿ ಇಕ್ಕಟ್ಟಿನ ತಿಳುವಳಿಕೆ ಬೆಳೆಯುವುದರಲ್ಲಿ ; ಪರಸ್ಪರ ವಿರುದ್ಧ ಆಕರ್ಷಣೆಗಳ ವಿಪರೀತ ಒತ್ತಡಕ್ಕೆ ಬಲಿಯಾದ ಸಂದರ್ಭದಲ್ಲಿ ಆಖೈರಾಗಿ ಯಾವದು ನೈಜವೋ ಸತ್ಯವೋ ಮತ್ತು ಸಹಜವೋ ಅದರೊಂದಿಗೆ ಒಪ್ಪಂದ ಮಾಡಿಕೊಳ್ಳುವುದರಲ್ಲಿ ; ಪ್ರಪ್ರಥಮವಾಗಿ ಸ್ವೀಕರಿಸಿದ ಆದರ್ಶದಿಂದ ಪಲಾಯನಮಾಡುವದರಲ್ಲಿ.

ವಂಶಪ್ರಜ್ಞೆಯ ತೀವ್ರ ಕಾಳಜಿಯಿಂದ ಕೊರಗುತ್ತಿದ್ದ 'ತಾಯಿ' ಪಿತೃಪಕ್ಷದಲ್ಲಿ ಶ್ರಾದ್ಧ ನಡೆಸಲು ಬಂದ ಪುರೋಹಿತ ಭಟ್ಟನೊಡನೆ ಬಿಚ್ಚಿದ ತನ್ನ ಮದುವೆಯ ಪುರಾಣ ಕೇಳಿ ಕಿಡಿಕಿಡಿಯಾಗಿ ಹಳೆ ಮನೆಯ ರಿಪೇರಿಗೆಂದು ಹೊರಟ ಕಥಾನಾಯಕ ಹಳೆ ಮನೆಯ ಹಿತ್ತಲಲ್ಲಿ ಕಾಲಿಟ್ಟದ್ದೇ "ಬೇಡ ಬೇಡ ಎಂದರೂ ದೇವಿಯ ಬತ್ತಲೆ ಮೊಲೆಗಳಿಂದ ಗೊಂದಲಿಸುತ್ತಾನೆ". ನುಣುಪಾದ ಮಾಂಸಲ ಬತ್ತಲೆ ತೊಡೆಗಳನ್ನು ಆಶ್ಚರ್ಯಚಕಿತನಾಗಿ ನೆಟ್ಟ ದೃಷ್ಟಿಯಿಂದ ನೋಡುತ್ತ ನಿಂತವನು ಎಚ್ಚರಗೊಂಡದ್ದು 'ಇದೆ, ಅದೇನು ಹಾಗೆ ನೋಡ್ತೀರಾ' ಎಂದು ದೇವಿ ಕೇಳಿದ ಮೇಲೆ (ಆಟ, ಪುಟ : ೧೪). ಹೊನ್ನಪ್ಪಾಚಾರಿಯ ಮನೆಗೆ ಕರಗಸ ತರಲು ಹೋದಾಗ ಅವನ ಹೆಂಡತಿಯ ಕಣ್ಣುಗಳನ್ನು ಕಂಡು, "ಅಬ್ಬಾ ಅವಳ ಕಣ್ಣುಗಳೇ" ಎನ್ನುತ್ತಾನೆ (ಆಟ, ಪುಟ : ೮). ದೇವಿಯ ಮೊಲೆ, ತೊಡೆ ಮತ್ತು ಹೊನ್ನಪ್ಪಾಚಾರಿಯ ಹೆಂಡತಿಯ ಕಾಮುಕ ಕಣ್ಣುಗಳು ಅವನ "ತಲೆಯಲ್ಲೆಲ್ಲ ಗೊಂದಲ" ವೆಬ್ಬಿಸುತ್ತವೆ. ಅವನ ಸುಪ್ತಕಾಮವನ್ನು ಕೆರಳಿಸುತ್ತವೆ. ಬಿಟ್ಟ ಹಳೆ ಮನೆಯ ಒಳಗೆ ದನ ನುಗ್ಗುವದನ್ನು ತಡೆಗಟ್ಟಲು ಮೊಳೆ ಹೊಡೆಹೊಡೆದು ರಿಪೇರಿ ಕೆಲಸ ನಡೆಸಿದ ಕಥಾ ನಾಯಕನ ಹರಕು ಮುರುಕು ಮನದ ಬಾಗಿಲನ್ನು ಒಡೆದು ಒಳಹೊಕ್ಕ ದೇವಿಯನ್ನು ಹೊರಕ್ಕೆ ಹಾಕಲು ಆಗದು. ಅವನ ಮನಸ್ಸಿನ ಒಳಕ್ಕೆ ನಿದನಿದಾನವಾಗಿ ಹಳೆ ಮನೆಯ ಹೊರಗಿದ್ದ ದೇವಿ ಹೇಗೆ ಒಳ ಬರುತ್ತಿದ್ದಾಳೆ ಮತ್ತು ಬ್ರಹ್ಮಚಾರಿಯಾಗಿಯೇ ಉಳಿಯ ಬೇಕೆನ್ನುವ 'ಬರ್ಮಚಾರಿ ಒಡೆದಿರ' ಆದರ್ಶ ವಿಚಾರ ನಿದನಿದಾನವಾಗಿ ಹೇಗೆ ಹೊರಗೆ ಹೋಗುತ್ತಿದೆ ಎನ್ನುವದನ್ನು ಪರಿಣಾಮಕಾರಿಯಾಗಿ ಸೃಷ್ಟಿಸಲು ಚಿತ್ತಾಲರು ನಿರ್ಮಿಸುವ ವಾತಾವರಣ, ಸನ್ನಿವೇಶ, ದುಡಿಸಿಕೊಂಡ ಭಾಷೆ ಮತ್ತು ಉಪಯೋಗಿಸಿಕೊಂಡ ಸಂಕೇತಗಳು ಕತೆಯ ನೆಯ್ಗೆಯಲ್ಲಿ ಅನಿವಾರ್ಯವೆಂಬಂತೆ ಸೇರಿಕೊಂಡಿವೆ.

ದೇವಿಯ 'ಸೆರೆ'ಯಿಂದ ತಪ್ಪಿಸಿಕೊಳ್ಳಬೇಕೆಂದು ಮಾಡುತ್ತಿರುವ ಪ್ರಾಮಾಣಿಕ ಮತ್ತು ನಿಷ್ಠುರ ಪ್ರಯತ್ನವೆಲ್ಲವೂ ದೇವಿಯೊಂದಿಗೆ ಸಮಾಗಮ ಸುಖ ಪಡೆಯಬೇಕೆಂಬ ಆಸೆಯನ್ನು ಬಲವತ್ತರಗೊಳಿಸುತ್ತ ಮತ್ತು ದೃಢಗೊಳಿಸುತ್ತ ಹೋಗುತ್ತದೆ. "ಬತ್ತಲೆ

ಕವಿಯುವ ಹೊತ್ತಿಗೆ ಈ ಬಿಟ್ಟ ಮನೆಯಲ್ಲಿ ಸಿಕ್ಕುಬಿದ್ದೆನಲ್ಲ!" (ಆಟ, ಪುಟ-೧೧) ಎನ್ನುವ ಕಥಾನಾಯಕ ಒಂದು ಕ್ಷಣ ಹಳೆಯ ಮನೆಯಿಂದ ಹೊರಟು ಹೋಗಬೇಕೆಂದು ಯೋಚಿಸಿ, ಬಿಟ್ಟ ಮನೆಯ ಹೆದರಿಕೆಯನ್ನು ದೇವಿ ಹುಟ್ಟಿಸಿದಾಗಲೂ ಹೆದರದೆ ಮರು ಕ್ಷಣ ಹಳೆ ಮನೆಯ ರಿಪೇರಿ ಕೆಲಸ ಪ್ರಾರಂಭಿಸಲು ನಿಶ್ಚಯಿಸಿದಾಗ "ಹಿಂದಿನ ಜಗಲಿಯ ಮೇಲೆ ಹೆಜ್ಜೆಗಳ ಸದ್ದು, ಬಳೆಗಳ ಕಿಂಕಿಣಿ. ದೇವಿ ಅಲ್ಲಿಗೆ ಬಂದಿರಬೇಕೆಂದೆನಿಸಿತು. ಮರುಗಳಿಗೆ ಹೊಸತೇ ಒಂದು ಪೇಚು ಮುಂದೆ ಬಂದು ನಿಂತಿತು". (ಆಟ, ಪುಟ-೧೨) ದೇವಿಯ ಸಾಮೀಪ್ಯ ಅವನ ಮನಸ್ಸನ್ನು ಚಂಚಲಗೊಳಿಸುತ್ತಿದೆ. ಅವಳಿಂದ ದೂರವಿರ ಬೇಕೆಂದರೆ ಅವಳು ಸಮೀಪಕ್ಕೆ ಬರುತ್ತಿದ್ದಾಳೆ. ನಿಗ್ರಹಕ್ಕಾಗಿ ನಿಷ್ಠುರ ಪ್ರಯತ್ನ ಸಾಗಿದೆ. "ಈ ವಿಷಯವಾಗಿ ಅವನ ಮನಸ್ಸಿನಲ್ಲಿದ್ದ ರೊಚ್ಚು ಕರಗಸದ ಬೊಡ್ಡು ಹಲ್ಲುಗಳ ಕೆಳಗೆ ಹಲಗೆ ಮಾಡುತ್ತಿದ್ದ ಕರ್ಕಶದನಿಯಲ್ಲಿ, ಮೈ ಮೇಲೆ ಹನಿಗೂಡುತ್ತಿದ್ದ ದೊಡ್ಡ ಬೊಕ್ಕೆಗಳಲ್ಲಿ ವ್ಯಕ್ತವಾಗಿತ್ತು." (ಆಟ, ಪುಟ :-೧೨-೧೩).

ನಿಗ್ರಹ ಸಾಧ್ಯವಾಗುತ್ತಿಲ್ಲ : "ಸಿದ್ಧವಾದ ಕಟ್ಟಿಗೆಯ ಪಟ್ಟಿಗಳಲ್ಲೊಂದನ್ನು ಎತ್ತಿ ಕದದ ಮೇಲೆ ಅಡ್ಡ ಹಿಡಿದು ಮೊಳೆ ಹೊಡೆಯುವ ತಯಾರಿ ಮಾಡುವಾಗ ಪಟ್ಟಿಯನ್ನು ಹಿಡಿಯಲು ಯಾರಾದರೂ ಇದ್ದರೆ ಒಳಿತಾಗುತ್ತಿತ್ತಲ್ಲ ಎಂದುಕೊಳ್ಳುತ್ತಿರುವಾಗಲೆ ಹೊರಗಿನಿಂದ ದೇವಿಯ ಕೆಮ್ಮಿನ ದನಿ ಬಳೆಗಳ ಸದ್ದು ಕೇಳಿಬಂದವು. ಹಾಳಾದವಳು ಇನ್ನೂ ಇಲ್ಲೇ ಇದ್ದಾಳೇನೋ. ಹರಕು ಮುರುಕಾದ ಬಾಗಿಲು ಸಂದಿಗಳೊಳಗಿಂದ ಒಳಗೆ ಇಣಿಕಿ ನೋಡುತ್ತಿಲ್ಲವಷ್ಟೇ ? ನಾಚಿಕೆ ಬಿಟ್ಟವಳು. ಯಾರಾದರೂ ನೋಡಿದರೆ ?" ......(ಆಟ, ಪುಟ : ೧೩) ನಾಚಿಕೆ ಬಿಟ್ಟ ದೇವಿಯಲ್ಲಿ ಸಮಾಗಮ ಸುಖ ಸುಲಭ ಸಾಧ್ಯ ಎಂದು ಅವನಿಗೆ ಅನಿಸುತ್ತದೆ. ಇಲ್ಲಿ ಕಥಾನಾಯಕ ಹೇಗೆ ದೇವಿಮಯನಾಗು ತ್ತಿದ್ದಾನೆನ್ನುವವರ ಸೂಚನೆ ಇದೆ. "ಹೊರಗೆ ಮತ್ತೆ ಬಳೆಗಳ ಕಿಂಕಿಣ. 'ಏಕೋ ಈಗ ದೇವಿ ಇನ್ನೂ ಇಲ್ಲೇ ಇದ್ದಾಳೆ' ಎಂಬ ಅನಿಸಿಕೆಯಿಂದ ತುಸು ಧೈರ್ಯವೆನಿಸಿತು. ಕದದ ಹೊರಗೆ ಆಗಲೊಲ್ಲದೇಕೆ ಇನ್ನೊಂದು ಮನುಷ್ಯಜೀವ ಹತ್ತಿರವಿದೆಯಲ್ಲ ಎಂಬ ಭಾವನೆ ಯಿಂದ ಸಮಾಧಾನವೆನಿಸಿತು" (ಆಟ, ಪುಟ : ೧೨). ಮೊದಲು ದೇವಿಯಿಂದ ದೂರ ಉಳಿಯಬೇಕು, ತನ್ನ ವ್ರತ ದೇವಿ ಭಂಗ ಮಾಡಿಯಾಳು ಎನ್ನುವ ಭೀತಿ ಇದ್ದ ಕಥಾ ನಾಯಕನಿಗೆ ಈಗ ದೇವಿಯ ಸಾಮೀಪ್ಯ ಹಿತ ಎನಿಸುತ್ತದೆ. ಆತ ಭ್ರಮನಿರಸನಗೊಳ್ಳು ತ್ತಿದ್ದಾನೆ. ಆತನ ಒಳಗೊಳಗೆ ದೇವಿಯನ್ನು ಬಯಸುವ ಪ್ರವೃತ್ತಿ ಬೆಳೆಯುತ್ತ ಮತ್ತು ಬಲಗೊಳ್ಳುತ್ತ ಹೋಗುತ್ತದೆ.

ಕತ್ತಲೆ, ಭೀತಿ ಮತ್ತು ಕಾಮದ ಸಂಕೇತವಾದ ಹಾವು ಕೆರಳಿದ ಕಾಮಕ್ಕೆ ಪುಟಕೊಡುತ್ತಿವೆ. ಅವನ ಕಾಮಸೀಮಿತ ಅನುಭವವನ್ನು ಸಂಕೀರ್ಣಗೊಳಿಸುತ್ತಿವೆ, ಸಾಂದ್ರಗೊಳಿಸಂ

ತ್ತಿವೆ, ಗಂಭೀರಗೊಳಿಸುತ್ತಿವೆ. "ಕೊನೆಗೊಮ್ಮೆ ಮೊಳೆ ಹೊಡೆಯುವ ಕೆಲಸ ಮುಗಿದು 'ಹುಸ್ಸಪ್ಪಾ' ಎನ್ನುತ್ತ ಮೊಳೆ ಹೊಡೆಯಲು ಎತ್ತಿಕೊಂಡ ಕಲ್ಲನ್ನು ಕೆಳಗಿಡುತ್ತಿದ್ದಂತೆ ಮನೆಯೊಳಗಿನ ಕತ್ತಲೆ ಒಮ್ಮೆಗೆಲೇ ಹೆಚ್ಚಿದರ ಅರಿವು ಬಂದು ತಣ್ಣಗಿನ ಭೀತಿಯಿಂದ ನಡುಗಿದ. ಅಗಳಿ ಮುರಿದು ಹೋಗಿ ಹರಕು–ಮುರುಕಾದ ಕದಗಳನ್ನು ಜೋಡಿಸಿ ಪಟ್ಟಿ ಹೊಡೆಯುವ ವರೆಗೂ ಇದ್ದ ಧೈರ್ಯ ಪಟ್ಟಿ ಹೊಡೆದು ಕದಗಳನ್ನು ಭದ್ರ ಮಾಡಿದ್ದೇ ಉಡುಗಿಹೋಗಿದೆ. ಯಾವದೋ ಸಿಟ್ಟಿನ ಭರದಲ್ಲಿ ಅನಿಸಿದ್ದ ಧೈರ್ಯ, ಸಿಟ್ಟು ತನ್ನ ಗುರಿಯನ್ನು ಕಂಡಾದುದೇ ಅವ್ಯಕ್ತ ಭೀತಿಗೆ ಎಡೆಕೊಟ್ಟಿದೆ. ಈಗ ತಾನು ಹೊರಗೆ ಹೋಗಬೇಕು ಎನ್ನುವ ವಿಚಾರಕ್ಕೆ ಹೆದರಿದ್ದಾನೆ. ಕತ್ತಲೆ ತುಂಬಿದ ದೇವರ ಕೋಣೆ. ಇವೆಲ್ಲವುಗಳನ್ನು ದಾಟಿ ಒಳಜಗಲಿ ಆಮೇಲೆ ಹೊರಜಗಲಿ : ಇವೆಲ್ಲವುಗಳನ್ನು ಹಾದು ಹೇಗೆ ಹೊರಗೆ ಹೋಗಬೇಕೋ ! ಯಾವದೋ ಆವೇಶದ ಭರದಲ್ಲಿ ಅಡುಗೆ ಮನೆಯ ವರೆಗೆ ಬಂದವನು ಈಗ ತಾನು ತಿರುಗಿ ಹೋಗುವ ದಾರಿಯ ಉದ್ದ ಹೇಗೋ ಒಮ್ಮೆಗೆಲೇ ಬೆಳೆದಿದೆ ಎಂಬ ಅನಿಸಿಕೆಯಿಂದ ತಲ್ಲಣಗೊಂಡಿದ್ದಾನೆ. ದೇವರ ಕೋಣೆ ದಾಟುವಾಗ ಕಾಲಡಿಯಲ್ಲಿ ಆಗಿನಂತೆ ಇಲಿಯೋ ಚುಚ್ಚುಂದಿರಿಯೋ ಹಾದು ಹೋದರೆ ! (ಹಿತ್ತಿಲ ಮೂಲೆಯಲ್ಲಿಯ ಬಿದಿರಿನ ಹಿಂಡಿನಲ್ಲಿ ಹಾವು ಹೊಕ್ಕಿದ್ದು ಕಂಡಿತಂತೆ ಭಟ್ಟರೆ) ಅದರಾಚೆಯ ಕೋಣೆಯನ್ನು ದಾಟುವಾಗ ಸೋದರತ್ತೆಯೇ ಕಣ್ಣುಮುಂದೆ ನಿಂತಂತಾದರೆ ! "(ಆಟ, ಪುಟ : ೧೫–೧೬). ಇಲ್ಲಿ ಕಥಾನಾಯಕನ ಆಂತರಿಕ ಆಂದೋಲನವನ್ನು ಗಮನಿಸಬಹುದು. ತನ್ನ ವ್ರತಭಂಗ ಮಾಡಬಯಸುವ ಶಕ್ತಿಗಳ ಮೇಲೆ ಅವನು ಸಿಟ್ಟು ಕಾರುತ್ತಾನೆ. ಈ ಶಕ್ತಿಗಳ ವಿರುದ್ಧ ಹೋರಾಡಿ ನಿಗ್ರಹಕ್ಕಾಗಿ ನಿಷ್ಠುರವಾಗಿ ಪ್ರಯತ್ನಿಸಿದ್ದಾನೆ. "ಸಿಟ್ಟು ತನ್ನ ಗುರಿಯನ್ನು ಕಂಡಾದುದೇ ಅವ್ಯಕ್ತ ಭೀತಿಗೆ ಎಡೆಕೊಟ್ಟಿದೆ." ಕೇವಲ ಮೊಳೆ ಹೊಡೆಹೊಡೆದು ದೇವಿಯಿಂದ ದೂರ ಉಳಿದು ತಾನು ನಿಗ್ರಹಿಸಲು ಸಾಧ್ಯವಿಲ್ಲ ಎಂದು ಅವನಿಗೆ ಅನಿಸುತ್ತಿದೆ. ಒಳಗೊಳಗೆ ಆತನಿಗೆ ದೇವಿ ಬೇಕೆಂದೆನಿಸಿದರೂ ಹೊರಗೆ ಎಲ್ಲ ಮೈಛಳಿಯನ್ನು ಬಿಟ್ಟು ಅವಳನ್ನು ಕೂಡಲು ಧೈರ್ಯವಿಲ್ಲ. ಅವಳನ್ನು ಎದುರಿಸಲು ಆಗದೇ ತಲ್ಲಣಗೊಂಡಿದ್ದಾನೆ. ಆದ್ದರಿಂದ "ತಾನು ತಿರುಗಿ ಹೋಗುವ ದಾರಿಯ ಉದ್ದ ಹೇಗೋ ಒಮ್ಮೆಗೆಲೇ ಬೆಳೆದಿದೆ" ಎಂದು ಅನ್ನಿಸುತ್ತದೆ. ಹೀಗೆ ಬೆಳೆದ ದಾರಿಯನ್ನು ನಿಶ್ಚಯಮಾಡಿ ದಾಟಬೇಕು ಎಂದಾಗಲೇ ಅವನು ತನ್ನ ಆದರ್ಶ ನಿರ್ಧಾರದಲ್ಲಿ ಚಂಚಲನಾಗಿದ್ದಾನೆ. ಸಂಪೂರ್ಣ ದೇವಿಮಯನಾದ ಅವನಿಗೆ ಈಗ ಹೊಳೆಯುವದು ದೇವಿ, ಅವನ ಬ್ರಹ್ಮಚರ್ಯದ ಆದರ್ಶವಲ್ಲ.

"ಕದಕ್ಕೆ ಮೊಳೆ ಹೊಡೆದಾದ ಮೇಲೂ ಇವರು ಒಬ್ಬರೇ ಏನುಮಾಡುತ್ತಿರಬಹುದೇನೋ. ಪಟ್ಟಿ ಹೊಡೆದು ಭದ್ರ ಮಾಡಿದ ಕದವನ್ನು ದೂಡಿ ನೋಡಿದಳೇನೋ ದೇವಿ. ಕೈ ಮುಟ್ಟಿಗೆಯಿಂದ "ಟಕ್–ಟಕ್" ಎಂದು ಬಡಿದಂತೆಯೂ ಕೇಳಿಸಿತು. ಇವನು

ಒಮ್ಮೆಲೇ ಎಚ್ಚರಗೊಂಡು ಕೊರಳ ಮೇಲೆ ಮೂಡಿದ ಬೆವರಿನ ಹನಿಗಳನ್ನು ಅಂಗಿಯು ತುದಿಯಿಂದಲೇ ಒರೆಸಿಕೊಂಡ. ಕರಗಸವನ್ನು ಗಟ್ಟಿಯಾಗಿ ಹಿಡಿದ. ಓಡುತ್ತ ಹೋಗ ಬೇಕು ಎನ್ನುವ ನಿಶ್ಚಯಮಾಡಿ, ಅವಡುಗಚ್ಚಿ ಭರಭರನೆ ಹೆಜ್ಜೆಯಿಡುತ್ತ ದೇವರ ಕೋಣೆಗೆ ಬಂದದ್ದೇ 'ಔಕ್' ಎಂದ. ಭೀತಿಯಿಂದ ಚೀರಿಕೊಳ್ಳಬಾರದೆನ್ನುವಂತೆ ಬಲ ಗೈಯಿಂದ ಬಾಯನ್ನು ಮುಚ್ಚಿಕೊಂಡ: ದೇವರ ಕೋಣೆಯಿಂದ ಆಚೆಯು ಕೋಣೆಗೆ ಹೋಗುವ ಹೊಸತಿಲಲ್ಲಿ, ಇವನತ್ತ ಬೆನ್ನು ಮಾಡಿ ಕುಳಿತಿದೆ—ದೊಡ್ಡದೊಂದು ಮಂಗ ನಂತಹ ಆಕೃತಿ! ....ಕತ್ತಲೆಯ ಹೊತ್ತು! ಬಿಟ್ಟ ಮನೆ! ದೇವರ ಕೋಣೆಯಿಂದ ಮುಂದೆ ಹೋಗುವ ದಾರಿಗಟ್ಟಿ ಎಲ್ಲಿಂದಲೋ ಓಡಿಬಂದ ಮಂಗ ಕುಳಿತಿದೆ.......ತನ್ನ ಮೈಯೆಲ್ಲ ಧಾರಾಳವಾಗಿ ಬೆವತಿದೆ ಎಂಬ ಅರಿವಿನಿಂದ ಇನ್ನಷ್ಟು ಹೆದರಿದ. ಹೊತ್ತು ಹೋದಂತೆ ಒಳಗಿನ ಕೋಣೆಯ ಹೊಸತಿಲಲ್ಲಿ ಕೂತ ಮಂಗ ದೊಡ್ಡದಾಗುತ್ತಾ ನಡೆದಿದೆ ಎಂಬ ಭಾಸವಾಗುತ್ತಿದ್ದಂತೆ ಮಂಗ 'ಘ್ರೂಽಽಕ್' ಎಂದಿತು. ಎದೆಯಲ್ಲಿ ಭೀತಿಯ ತೆರೆ ಎದ್ದಿತು. ಓಡೋಡಿ ಕಿಟಕಿಗೆ ಬಂದ...........ಹಿಂದು ಮುಂದಿನ ವಿಚಾರ ಮಾಡದೆ "ದೇವಿ" ಎಂದು ಕರೆದ." (ಆಟ. ಪುಟ : ೧೬–೧೭) ಕಾಮಪ್ರವೃತ್ತಿಯನ್ನು ಅಸಹಜವಾಗಿ ಅಸಫಲವಾಗಿ ಹತ್ತಿಕ್ಕುವ ನಿಷ್ಠುರ ಪ್ರಯತ್ನದ ಹಿಂದೆ ಅವಿತುಕೊಂಡಿದ್ದ ಕಥಾನಾಯಕನ ಆಂತರಿಕ ಆಂದೋಲನ ಹಂತ ಹಂತವಾಗಿ ಸಂಕೀರ್ಣವಾಗುತ್ತ ನಡೆದು ಅಂತಿಮವಾಗಿ ಅವನ ನಿರ್ಧಾರ ಚಂಚಲಗೊಂಡದ್ದನ್ನು ಮಂಗ ಸಂಕೇತದ ಮೂಲಕ ಧ್ವನಿಸಲಾಗಿದೆ. ಬರ್ಮಚಾರಿ ಒಡೇದಿರ ಅಂತರಂಗದ ಆಂದೋಲನದ ಸೂಕ್ಷ್ಮಾತಿಸೂಕ್ಷ್ಮ ಎಳೆಗಳನ್ನು, ಮೊನೆಗಳನ್ನು ತಾರ್ಕಿಕ ಬುದ್ಧಿಯಿಂದ ಮತ್ತು ಪೂರ್ವಚಿಂತನೆಯಿಂದ ಅನ್ವೇಷಿಸಿ ಅವು ಗಳಿಗೆ ಕಲಾತ್ಮಕ ಅಭಿವ್ಯಕ್ತಿ ನೀಡಿ ಅವುಗಳೆಲ್ಲವನ್ನೂ ಓದುಗರು ಅನುಭವಿಸುವಂತೆ ಮಾಡಿದ್ದಾರೆ ಚಿತ್ತಾಲರು. ಗೋಪಾಲಕೃಷ್ಣ ಅಡಿಗರು ಹೇಳಿದ ಮಾತು ಇಲ್ಲಿ ಸ್ಪಷ್ಟ ವಾಗುತ್ತದೆ: "ಅಂತರಂಗವನ್ನೆಲ್ಲ ತುಂಬಿ ಹೃದಯವನ್ನೆಲ್ಲ ಅಮುಕಬರುವ ಕಾಮ ಪ್ರವೃತ್ತಿಯ ಉಬ್ಬರವನ್ನು ನಿಗ್ರಹಿಸುವ ಪ್ರಯತ್ನದಿಂದ ಹುಟ್ಟುವ ಕಾವು, ಬಿಗಿತ, ಸೆಡೆತ ತನ್ನ ಮನಸ್ಸನ್ನು ಮುಷ್ಟಿಯೊಳಗಿಟ್ಟುಕೊಳ್ಳಲು ಹೋರಾಡುವ 'ಬರ್ಮಚಾರಿ ಒಡೇದಿರ' ನಿಷ್ಠುರ ಪ್ರಯತ್ನ, ಆ ಪ್ರಯತ್ನದ ಅಸಹಜತೆ, ಅದರ ಅನಿವಾರ್ಯ ವಿಫಲತೆ ಇವು ಹೊರಗೆ ನಡೆಯುವ ಘಟನೆಗಳಲ್ಲಿ ಮುಖ್ಯ ಪಾತ್ರದ ಪ್ರತಿಯೊಂದು ನಡೆ ನುಡಿಯಲ್ಲಿ ಮಾತಿನ ಪ್ರತಿಯೊಂದು ಗತಿಯಲ್ಲಿ ತಿರುವಿನಲ್ಲಿ ಯಥವತ್ತಾಗಿ ರೂಪು ಗೊಂಡಿರುವ ಈ ಸೋಜಿಗ ಕನ್ನಡಕ್ಕೆ ಹೊಸತು ಎನ್ನಿಸುತ್ತದೆ". (ಆಟ, ಮುನ್ನುಡಿ ಪುಟ : iv)

"ದೇವೀ" ಎಂದು ಕರೆಯುವ ತನಕ ನಿಗ್ರಹಕ್ಕಾಗಿ ಪ್ರಯತ್ನಿಸುತ್ತಿರುವ ಕಥಾನಾಯಕ ಬೆವರು ಸುರಿಸುತ್ತ ಮೊಳೆ ಹೊಡೆಹೊಡೆದು ಗಟ್ಟಿಯಾಗಿ ಜೋಡಿಸಿದ್ದ ಕದಗಳನ್ನು

ತೆಗೆಯಲು, ಎರಡು ಕದಗಳು ಹೊಂದಿಕೊಳ್ಳುವ ಸಂಧಿಭಾಗದಲ್ಲಿ ಪಟ್ಟಿಗಳನ್ನು ಕರಗಸದಿಂದ ಕೊಯ್ಯುತ್ತಾನೆ. "ಆಗಿನಿಂದಲೂ ಭದ್ರವಾಗಿ ಮುಚ್ಚಿಕೊಂಡಿದ್ದ ಕದಗಳು ಮೆಲ್ಲನೆ ತೆರೆದಿದ್ದವು. ಗಾಳಿಯಾಡದೇ ಉಸಿರುಗಟ್ಟುವ ಕತ್ತಲೆ ತುಂಬಿದ ಅಡುಗೆ ಮನೆಯಲ್ಲಿ ಹೊರಗಿನ ತಂಪು ಸ್ವಚ್ಛಗಾಳಿಯ ಸುಳಿ ಬಂತು. ಅದರ ಹಿಂದೆಯೇ ದೇವಿ ಬಂದಳು...ಕದ ಮುಚ್ಚಿಕೊಂಡಳು". (ಆಟ, ಪುಟ : ೧೬) ಇಲ್ಲಿ ಕಥಾನಾಯಕ ದೇವಿ ಯನ್ನು ಕೂಡುತ್ತಾನೆ.

ಕದ ಮುರಿದ ಹಳೆಯ ಮನೆ, ಹೊನ್ನಪ್ಪಾಚಾರಿಯ ಮನೆಯಿಂದ ತಂದ ಕರಗಸ, ಏಕನಾಥ ಶೆಟ್ಟಿಯ ಅಂಗಡಿಯಿಂದ ತಂದ ಮೊಳೆಗಳು, ಪಿತೃಪಕ್ಷ ಶ್ರಾದ್ಧ. ಪುರೋಹಿತ ಭಟ್ಟ. ತಾಯಿ, ಹೊನ್ನಪ್ಪಾಚಾರಿಯ ಹೆಂಡತಿ, ೀವಿ, ದೆಸತ್ತ ಸೋದರತ್ತೆ, 'ಬರ್ಮಚಾರಿ ಒಡೆದಿರು', ಕತ್ತಲೆ, ಹಾವು, ಚುಚ್ಚುಂದರಿ, ಮಂಗ ಇತ್ಯಾದಿಗಳು ಚಿತ್ತಾಲರು ಕಲಾತ್ಮಕ ತಿಳುವಳಿಕೆಯಿಂದಲೇ ಆರಿಸಿಕೊಂಡ ಈ ಕತೆಯ ಪರಿಕರಗಳು. ಈ ಪರಿಕರ ಗಳನ್ನೆಲ್ಲ ಚಿತ್ತಾಲರು ಕಲಾಸೂಕ್ಷ್ಮದಲ್ಲಿ ಜೋಡಿಸಿ ಅವುಗಳಲ್ಲಿ ಆಂತರಿಕ ಸಂಬಂಧವನ್ನು ಕಲ್ಪಿಸಿ ನಿರ್ಮಿಸುವ ವಾತಾವರಣ ಮತ್ತು ಸನ್ನಿವೇಶಗಳೆಲ್ಲ ಕಥಾನಾಯಕನ ಅಂತರಂಗದ ಕಾಮಸೀಮಿತ ಅನುಭವವನ್ನು ಅದರ ಎಲ್ಲ ಸಂಕೀರ್ಣತೆಯಲ್ಲಿ ಹಿಡಿದಿಡುವುದರಲ್ಲಿ ಸಾರ್ಥಕವಾಗಿದೆ.

ಈ ಕಥೆಯ ಉದ್ದಕ್ಕೂ ಒಂದನ್ನು ಹೇಳಿ ಇನ್ನೊಂದನ್ನು ಧ್ವನಿಸುವ ವಾಕ್ಯಗಳು ಘಟನಾವಳಿಗಳು ಕೇಂದ್ರ ವಸ್ತುವಾದ ಕಾಮದಲ್ಲೇ ಕೇಂದ್ರೀಕೃತವಾಗಿ ಅವುಗಳ ಒಟ್ಟು ಪರಿಣಾಮದಲ್ಲಿ ಕಾಮ ಎಲ್ಲರಿಗೂ ಸಹಜವಾದದ್ದು, ಅದನ್ನು ಅದುಮಿಟ್ಟುಕೊಳ್ಳಲು ಮಾಡುವ ನಿಷ್ಠುರ ಪ್ರಯತ್ನದ ಹೋರಾಟ ವಿಫಲಗೊಳ್ಳುತ್ತದೆ ಎನ್ನುವ ಸಾರ್ವ ಕಾಲಿಕವಾದ, ಸಾರ್ವತ್ರಿಕವಾದ ಮತ್ತು ಸಹಜವಾದ ಸತ್ಯವನ್ನು ಧ್ವನಿಸುತ್ತದೆ. ಆದರೆ ಕಥಾನಾಯಕನ ಸಾಂದ್ರ, ಮತ್ತು ಸಂಕೀರ್ಣ ಅನುಭವ ಅವನು ಒಪ್ಪಿಕೊಂಡ ಮೌಲ್ಯ ಗಳ ಸಂಸ್ಕೃತಿ ಸಂಸ್ಕಾರ ಧರ್ಮಗಳ ಮತ್ತು ಬದುಕುತ್ತಿರುವ ಸಮಾಜದ ಕಟ್ಟು ನಿಟ್ಟುಗಳ ಒಟ್ಟು ಪರಿಪಾಕದಿಂದ ಹೊಮ್ಮಿದ ಅನುಭವವಾಗುವುದಿಲ್ಲ. ಆದ್ದರಿಂದ ವ್ಯಕ್ತಿಜೀವನದ ಗಹನವಾದ ಅನುಭವವನ್ನು ಕಲೆಯಾಗಿಸುವ ಮತ್ತು ಕತೆಯಾಗಿಸುವ ಪ್ರಯತ್ನವಿಲ್ಲಿ ಇಲ್ಲ. ಬರ್ಮಚಾರಿ ಒಡೆದಿರ ಬ್ರಹ್ಮಚರ್ಯದ ಸಂಕಲ್ಪ ಗಾಢವಾದ ನಂಬಿಕೆ ಇಲ್ಲವೆ ಆಳವಾದ ಚಿಂತನೆಯ ಫಲವಾಗಿಲ್ಲದೇ ಇರುವದರಿಂದ ಒಂದು ಸಾಮಾನ್ಯ ವ್ಯಕ್ತಿಯ ಮನಸ್ಸಿನೊಳಗೆ ಕಾಮ ನುಗ್ಗುವದನ್ನು ಚಿತ್ರಿಸುವಂತಾಗುವದರಿಂದ ಇಲ್ಲಿ ಅಚ್ಚುಕಟ್ಟಾದ ಕಲೆಗಾರಿಕೆ ಫಲಿಸಿದೆ ಎಂದೆನಿಸಿದರೂ ಬದುಕಿನ ಬಗೆಗಿನ ನಮ್ಮ ತಿಳುವಳಿಕೆ ಯನ್ನೇ ಎತ್ತರಿಸುವಂತಿರುವ ಶ್ರೇಷ್ಠ ಕತೆ ಎಂದು ಅನಿಸುವದಿಲ್ಲ

ಎರಡು ಕವನಗಳು : ೧. ಬದುಕು

ವೇಣುಗೋಪಾಲ ಸೊರಬ

ಕೀಲಿಕೈ ತೂರಿಸಿ ತಿರುಗಿಸಿ
ನಕ್ಕೆ
ಚಿಕ್ಕೆಗಳ ಹಸಿ ಮೈಯಿ
ಚೆಲ್ಲಿದ ಹಾಸು
ಮೈ ಮೇಲೆರಗಿ
ರೆಕ್ಕೆ ಬಿಚ್ಚಿದ ಪಕ್ಷಿ
ತೆಕ್ಕೆಯಲಿ ಮುಚ್ಚಿ
ಗಾಳಿ ಹಗುರದ ತಾಣ
ಸೇರಿ
ಒಕ್ಕಲನು ಕಾಣದೆ
ಬೆವತು
ಅನುಭವಿಸಲಾರದೆ
ನಡುಗಿದೆ

ಸಡಿಲವಾದ ಬದುಕಿನ
ಸುತ್ತು
ಸರಪಳಿ ಕುಣಿದು
ಗರಗಸ ಮಣಿದು
ಭಾರಕ್ಕೆ
ಬೀಳಲಾರದೆ
ಗಾಳಿಗೇರುವ
ಉಸುಕು

ಆಕಾರ
ತಳೆದೂ
ತಳೆಯಲಾರದೆ
ಫೀನಿಕ್ಸ್
ಕಥಾನಕ
ಒಡ್ಡಿದ
ಮೃಗ ಜಲದ
ಅನ್ವೇಷಣೆಗೆ
ಸೊಂಟ ಬಾಗಿಸಿ
ತೊಡೆ ತುರಿಸಿ
ಕಣ್ಣು
ಬೀಸಾಡಿದೆ

ಬೆಂಕಿ ನಾಲಗೆ
ಮೂಳೆ
ಕತ್ತರಿ
ಯಿಟ್ಟು
ತಲೆಬುರುಡೆ
ಬಿಟ್ಟ
ಬಾಯಲ್ಲಿ
ಜೇನು
ಹಳಹಳಿಸಿ
ಹುಳಿತು
ಸ್ವಸ್ತಿಪಾನಕ್ಕೆ
ಮುಂನ್ನ
ಚಾಚಿದ
ಕೈಯಿ
ಅರೆಬಿರಿದ
ತುಟಿ
ತುಂಬಿದಾಕಾಂಕ್ಷೆ

ಗಂಟಲ
ಲ್ಲಿಳಿದು
ಎದೆ
ಉರಿದು
ಏನು
ಬೆಂಕಿ

ಕುಣಿತದ
ನೆರಳು
ರಘುಲ್ ಎಂದು
ಅಭಿನಯ
ಅನುವರ್ತನೆಗೆ
ತೋರ
ದೆದೆ
ಸ್ಪಷ್ಟ
ಮುತ್ತಿನ ಹಾರ
ಕೊರಳು
ಬಳಸಿ
ಕಿವಿಯೊಡವೆ
ವಿಜೃಂಭಿಸಿ
ಇಳಿದ
ಮೋಜು
ರೋಜು
ವಳಗಳ
ಸಂಪುಟ
ತೆರೆಯು
ಲಾಗದೆ
ಬಿಳುಪಿಗಿಳಿದ
ಬದುಕಿನ
ಛಾಯೆ
ಜಾರಿದಾಗ

ಸಾಕ್ಷಿ / ೨೭

ಏರಿ
ಸೋರಿ
ಒಳಗಿಲ್ಲ
ಬದುಕು
ಹೊರಗಿಲ್ಲ

●

೨. ಬರಹ

ನಿಜಾ
ಹೇಳಬೇಕಂದ್ರೆ
ಯಾರಿಗೆ
ಯಾರೂ
ಬರೆಯುವುದಿಲ್ಲ
ತನಗೂ
ಅಲ್ಲ
ಹೆಂಡತಿ
ಮಕ್ಕಳಿಗೂ
ಅಲ್ಲ
ಅದೆಲ್ಲ
ಯೋಚನೆ
ಮಾಡುವ
ಮಂಕು
ಬರವಣಿಗೆ
ಸಾಧ್ಯ
ವಾಗುವುದಲ್ಲ

ಬರೆದದ್ದು
ಗಹ್ವರದ
ಚಿತ್ರ
ವಾಗುತ್ತದೆ

ಜೀಪಿಪ್ಲಿದ
ಜೀಣ
ಊರಿ
ಕಾರಿ
ಓಡಿಯುತ್ತದೆ
ರಕ್ತದ
ಒತ್ತಡಕ್ಕೆ
ಮಾಂಸ
ಖಂಡಗಳು
ಕುದಿದೆದ್ದು
ಯುದ್ಧ
ವಾಗುವ
ಹೆದರಿಕೆ
ನಿರ್ವೀರ್ಯ
ಗೊಳಿಸುತ್ತದೆ

ಇಲ್ಲ
ಸುಮ್ಮನೆ
ಕೂತು
ಕೋಗಿಲೆಯ
ಕತ್ತು
ಹಿಚುಕಿ
ಉಪ್ಪಿನ
ಕಾಯಿಂಗ
ಣಗೊಳಿಸಿ
ಬೆತ್ತಲೆ
ಕುಣಿವ
ದೈತ್ಯತಾಳಕ್ಕೆ
ಬೆನ್ನು
ಹದಗೊಳಿಸಿ

ವಾಕರಿಸ
ಲಾರದೆ
ಪತ್ರಿಕೆಯಲ್ಲಿ
ಮಡಿಸಿಟ್ಟ
ಕೊಡೆಗಳ
ಸಾಲು
ತೇಲುತ್ತವೆ

ಗೃಧ್ರ
ಘೂಕ
ಸಂತತಿ
ಬೆಳಸಿ
ವೇತಾಲ
ಪಂಚ
ವಿಂಶತಿ
ಕತೆಗಳ
ಕೇಳಿ
ಬ್ರಹ್ಮ
ರಾಕ್ಷಸನಲ್ಲಿ
ಮೊರೆಯಿಡುತ್ತವೆ

ಅಜ್ಜ ನೆಟ್ಟಾಲ

ಡಿ. ಕೆ. ಸೀತಾರಾಮ ಶಾಸ್ತ್ರಿ

"ಅಜ್ಜ ನೆಟ್ಟಾಲ" ಒಂದು ರೀತಿಯಲ್ಲಿ, ಅಡಿಗರ ಹಿಂದಿನ ಕವನವಾದ "ವರ್ಧಮಾನ"ದ ತಿರುವು ಮುರುವು ಎನ್ನಿಸುತ್ತದೆ: "ವರ್ಧಮಾನ"ದಲ್ಲಿ ಕವಿ ಅಪ್ಪನಾಗಿ ಗುರುತಿಸಿಕೊಂಡು ಮಗನ ಬಗ್ಗೆ ಮಾತನಾಡಿದರೆ, "ಅಜ್ಜ ನೆಟ್ಟಾಲ"ದಲ್ಲಿ ಮಗನಾಗಿ ತಮ್ಮನ್ನು ಗುರುತಿಸಿಕೊಂಡು ಅಪ್ಪನ ಬಗ್ಗೆ ಹೇಳುತ್ತಾರೆ. ಮೊದಲನೆಯ ಕವನದಲ್ಲಿ ವರ್ತಮಾನದಲ್ಲಿ ನಿಂತು ಮುಮ್ಮೊಗನಾಗಿ ವರ್ಧಮಾನ ಪ್ರತಿನಿಧಿಸುವ ಮುಂದಿನ ಪೀಳಿಗೆಯ ಬಗ್ಗೆ, ಭವಿಷ್ಯದ ಬಗ್ಗೆ ಚಿಂತನೆ ನಡೆಸಿದರೆ, ಎರಡನೆಯ ಕವನದಲ್ಲಿ ಆಲ ಸಂಕೇತಿಸುವ ಪರಂಪರೆಯ ಬಗ್ಗೆ, ಭೂತದ ಬಗ್ಗೆ ಚಿಂತನೆ ನಡೆಸುತ್ತಾರೆ. ಎರಡೂ ಕವನಗಳಲ್ಲಿಯೂ ಹಿನ್ನೋಟ, ಮುನ್ನೋಟಗಳು ಕೂಡಿ ಸಾಗಿ, ಭೂತ ಮತ್ತು ಭವಿಷ್ಯತ್ತುಗಳ ಮಧ್ಯೆ ಕೊಂಡಿಯನ್ನು ಬೆಸೆದು, ಈ ಎರಡು ಕವನಗಳೂ ಒಂದಕ್ಕೊಂದು ಪೂರಕವೆನ್ನಿಸುವಷ್ಟು ನಿಕಟ ಸಂಬಂಧವನ್ನು, ಸಾಮೀಪ್ಯವನ್ನು ಹೊಂದಿರುವುದರ ಪರಿಣಾಮವಾಗಿ, ಒಂದೇ ವಸ್ತುವಿನ ಎರಡು ಮುಖಗಳನ್ನು ಕವಿ ಇವುಗಳಲ್ಲಿ ತೆರೆದಿಡುತ್ತಿದ್ದಾರೆ ಎಂಬುದು ವೇದ್ಯವಾಗುತ್ತದೆ. ಇಷ್ಟಾದರೂ "ವರ್ಧಮಾನ"ದಲ್ಲಿ ಕಾಣುವ ಭರವಸೆ, ನಂಬಿಕೆ, ನಿಶ್ಚಿತ ಧೋರಣೆ, "ಅಜ್ಜ ನೆಟ್ಟಾಲ"ದಲ್ಲಿ ಸ್ಪಷ್ಟ ರೂಪವನ್ನು ತಳೆದಿದೆಯೆ, ದೃಢವಾಗಿದೆಯೆ, ಅಲ್ಲಿನ ವಿಚಾರ ಇಲ್ಲಿ ಮುನ್ನಡಿಯಿಟ್ಟಿದೆಯೆ ಎನ್ನುವುದು ಪ್ರಶ್ನೆಯಾಗಿ ಉಳಿಯುತ್ತದೆ. "ವರ್ಧಮಾನ"ದ ನಾಯಕನಾದ 'ನಾಣಿಯ ಮಗ ಸೀನಿ'ಯನ್ನು ದೂರದಲ್ಲಿ ನಿಂತು ಮೋಹವರ್ಜಿತರಾಗಿ, ಆದರೂ ಕಳಕಳಿಯಿಂದ ವೀಕ್ಷಿಸುವುದರ ದೆಸೆಯಿಂದ ಜನ್ಯವಾದ ಸ್ಪಷ್ಟತೆ, ತೀವ್ರತೆ, ವಿಚಾರದ ಏಕಮುಖವಾದ ಓಟ, ಕವನದ ಬಿಗಿಯಾದ ಕಟ್ಟಡ ಅಲ್ಲಿದೆ. "ಅಜ್ಜ ನೆಟ್ಟಾಲ"ದಲ್ಲ ಕವನದ ಕೇಂದ್ರಪ್ರಜ್ಞೆ, ನಾಯಕ

ಕವಿಯೆ ಆಗಿರುವುದರಿಂದ, ಹೇಳುವ ವಿಚಾರ ಅನವಶ್ಯಕವಾಗಿ ಅಲ್ಲಲ್ಲಿ ಹರಿದಾಡಿ, ಸ್ವಲ್ಪ ಮಟ್ಟಿನ ಗೋಂದಲಕ್ಕೆ ಕಾರಣವಾಗಿ, ಕವನದ ಬಂಧ ಅಳ್ಳಕವಾಗಿ ಸ್ವಲ್ಪ ಮಟ್ಟಿಗಾದರೂ ಅತೃಪ್ತಿಗೆ ಎಡೆಮಾಡಿಕೊಡುತ್ತದೆ. ಹೀಗಾಗಿಯೆ ಏನೋ, ಅನಂತಮೂರ್ತಿಯವರು 'ಹಿಂದೆ ಹೇಳಿದ್ದೆಲ್ಲವುದಕ್ಕಿಂತಲೂ ಹೆಚ್ಚಿನದೇನನ್ನು ಅಡಿಗರಿಲ್ಲಿ ಹೇಳಿದ್ದಾರೆ ? ಹೇಳಿದ್ದಾರೆಯೆ ? ಎಂಬುದನ್ನು ಯೋಚಿಸುವುದೂ ಅಗತ್ಯವೆನ್ನಿಸುತ್ತೆ' ಎಂಬ ಅನುಮಾನವನ್ನು ವ್ಯಕ್ತಪಡಿಸಿದ್ದಾರೆ.

"ಅಜ್ಜ ನೆಟ್ಟಾಲ"ದಲ್ಲಿ ಎರಡು ಮುಖ್ಯವಾದ ಪ್ರತಿಮೆಗಳು—ಆಲ ಮತ್ತು ಆನೆ—ಬೇರೆ ಬೇರೆ ಸ್ತರದಲ್ಲಿ, ಬೇರೆ ಬೇರೆ ವ್ಯಂಜಕಾರ್ಥಗಳೊಡನೆ ಉಪಯೋಗಿಸಲ್ಪಟ್ಟಿವೆ. ಮೊದಲನೆಯ ಭಾಗದಲ್ಲಿ ಈ ಎರಡು ಪ್ರತಿಮೆಗಳನ್ನೂ ಬಹು ಸಂಕೀರ್ಣವಾದ ರೀತಿಯಲ್ಲಿ ಉಪಯೋಗಿಸಿಕೊಂಡು ಕವಿ ತಮ್ಮ ಬಾಲ್ಯದ ನೆನಪುಗಳನ್ನು ಚಿತ್ರಿಸಿದ್ದಾರೆ. ಮನೆಯ ಮುಂದೆ ತೇರಿನ ಹಾಗೆ ಆಲ ಬಿಣಿಲುಗಳು ತೂಗಿ ಮಣಿದು ಸೊಂಡಿಲಾಡಿಸುತ್ತದೆ ; ಸೊಂಡಿಲಲ್ಲಿ ಕೂರಿಸಿಕೊಂಡು ಮೇಲಕ್ಕೆತ್ತಿ ಕೆಳಕ್ಕಿಳಿಸಿ ಆಟವಾಡಿಸುತ್ತದೆ. 'ಬಿಣಿಲು ಸೊಂಡಿಲುಗಳು' ಎಂಬ ಸಂಯುಕ್ತ ವಿಶೇಷಣ ಈ ಎರಡು ಪ್ರತಿಮೆಗಳು ಕವನದುದ್ದಕ್ಕೂ ಒಂದಕ್ಕೊಂದು ಹೆಣೆದುಕೊಂಡು ಸಂಕೀರ್ಣವಾದ ರೀತಿಯಲ್ಲಿ ಬಳಸಲ್ಪಟ್ಟಿರುವುದನ್ನು ಮುನ್ಸೂಚಿಸುತ್ತದೆ. ಆಲವನ್ನು ಬಾಲಕರಿಗೆ ಪ್ರಿಯವಾದ 'ತೇರು' 'ಆನೆ' ಗಳಿಗೆ ಹೋಲಿಸಿರುವುದು ಕವಿ ತನ್ನ ಬಾಲ್ಯದ ಬಗ್ಗೆ ಹೇಳುತ್ತಿದ್ದಾರೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. "ದೀಪಾವಳಿ" ಕವನದ,

> ಕೋಟೆಯ ಹೆಬ್ಬಾಗಿಲ ಬಳಿ
> 'ಆನೆ ಬಂತೋಂದಾನ'

ಮತ್ತು

> ಸೊಂಡಿಲಾಡಿಸಿ ಬರಲಿ ಆನೆ, ಮುದ ಮದ್ದಾನೆ

ಎಂಬ ಸಾಲುಗಳನ್ನು ನೆನಪಿಗೆ ತಂದುಕೊಂಡರೆ—ಈ ಪ್ರತಿಮೆ ಬಾಲ್ಯದ ಮುಗ್ಧತೆ, ಸಹಜೋತ್ಸಾಹಗಳನ್ನೂ, ಸಂಭ್ರಮ ಸಂತೋಷಗಳಿಗೆ ಕಾರಣವಾದ ಆನೆಯಾಗಿ ಆಲ ಕಾಣುವುದರಿಂದ ಸಂಪ್ರದಾಯ ಬಾಲ್ಯಕ್ಕೆ ಅರ್ಥವಾಗುವ ರೀತಿಯನ್ನೂ ಸಂಕೇತಿಸುತ್ತದೆ ಎಂಬುವುದು ವೇದ್ಯವಾಗುತ್ತದೆ. ಇದರ ತಾತ್ಪರ್ಯ : ಬಾಲ್ಯದಲ್ಲಿ ಸಂಪ್ರದಾಯ ಅಥವಾ ಪರಂಪರೆ ಆ ಅವಸ್ಥೆಗೆ ಸಹಜವಾದ ಸಂಶಯಗಳಿಂದ ನಿರ್ಬಾಧಿತವಾದ ಸ್ವೀಕಾರ ಮನೋಭಾವವನ್ನೂ, ಸಂತೋಷ ಸಂಭ್ರಮಗಳಿಗೆ ಮೂಲಸ್ಫೂರ್ತಿಯಾಗಿರುವು

ದನ್ನೂ ಕವಿ ವ್ಯಕ್ತಪಡಿಸುತ್ತಿದ್ದಾರೆ. 'ರಾಜಕುಮಾರ ಬಂದರೆ ಗಾಳಿಕೀಲುಗುದುರೆ ಸವಾರಿ' ಎಂಬ ಸಾಲು "ಕೂಪಮಂಡೂಕ" ದ ಕವಿಯ ಬಾಲ್ಯದ ದಿನಗಳ ಚಿತ್ರವನ್ನು ನೆನಪಿಗೆ ತಂದು ಅಲ್ಲಿನ ಬಾಲಕ ನಾಯಕನೊಡನೆ ಸಂಬಂಧವನ್ನೇರ್ಪಡಿಸುತ್ತದೆ. 'ಕೋಳಿ, ಕಾಗೆ, ಕರು, ಕುನ್ನಿಗಳು' ಎಂಬ ಸಾಲಿನಲ್ಲಿ 'ಕರು, ಕುನ್ನಿ' ಗಳ ಮೇಲೆ ಒತ್ತು ಬಿದ್ದು ಅವುಗಳು ಅವನ ಒಡನಾಡಿಗಳು ಎಂಬುದು ಹೇಳಲ್ಪಟ್ಟಿದೆ. ಮುಂದೆ ಬರುವ,

ಮುಟ್ಟಾಟ, ಕುಂಟಾಟ, ಕಣ್ಣುಮುಚ್ಚಾಲೆ ;
ವಿಶ್ವಾಮಿತ್ರ ಪ್ರತಾಪ, ಲವಕುಶರ ಕಾಳಗ, ಕೃಷ್ಣಲೀಲೆ.

ಈ ಪ್ರಸಂಗಗಳು ಬಹಳ ಔಚಿತ್ಯಪೂರ್ಣವಾಗಿ ಹೆಸರಿಸಲ್ಪಟ್ಟು ಕವಿಯು ಬಾಲ್ಯಾವಸ್ಥೆಯಲ್ಲಿ ಮತ್ತೊಂದು ಹಂತವನ್ನು ಮುಟ್ಟಿರುವುದನ್ನು ತೋರುವುದರ ಜೊತೆಗೆ, ಈ ಪುರಾಣಕಥೆ ಹೆಸರಿಸಲ್ಪಟ್ಟಿರುವ ರೀತಿ ಬಾಲಕನ ಪ್ರಜ್ಞೆ ಮತ್ತು ಪರಂಪರೆ ಇವುಗಳ ಸಂಬಂಧ ಹೇಗೆ ಬೆಸೆದುಕೊಂಡಿದೆ ಮತ್ತು ಆ ಸಂಬಂಧದ ಬಗೆ, ಅರ್ಥ ಏನು ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಮೇಲೆ ಹೆಸರಿಸಿದ ಪ್ರಸಂಗಗಳು ನಡೆಯುವ ಹೊತ್ತಿನಲ್ಲಿ ಬೆಳಗುವ ದೊಂದಿ, ಮುಂದೆ ಕವಿ ಬೆಳೆದು ದೊಡ್ಡವನಾದಾಗ ಒಬ್ಬಂಟಿತನದ, ಸ್ವ-ಪ್ರಜ್ಞೆಯ (self-awareness) ಸ್ವವಿಮರ್ಶೆಯ ಮಂದ ಬೆಳಕಿನ ಒಳಗಿನ ದೊಂದಿಯಾಗಿ ಪರಿಣಮಿಸುತ್ತದೆ. ಬಾಲ್ಯದ ದೊಂದಿ ಕವಿಯನ್ನೂ, ಪರಂಪರೆಯನ್ನೂ ಒಂದುಗೂಡಿಸುವ ಕೊಂಡಿಯಾದರೆ, ಆ ಮೇಲಿನ ದೊಂದಿ ಕವಿಯನ್ನೂ, ಸಂಪ್ರದಾಯವನ್ನೂ ಬೇರ್ಪಡಿಸುವ ಪ್ರತ್ಯೇಕತೆಯಾಗಿ ಅರ್ಥಗೊಳ್ಳುತ್ತದೆ. ಈಗ ಕೇಳುವುದು ಬಾಲ್ಯದಲ್ಲಿ ಕೇಳಿದ ನಿಜವಾದ ಚಂಡೆಯ ಸದ್ದಲ್ಲ, ಒಳಗಿನ ತುಡಿತ, 'ಗುಂಡಿಯ ಚಂಡೆ'. ಬಾಲ್ಯದ ಸದ್ದು, ಗೋಜು, ಗದ್ದಲ, ಸಂಭ್ರಮ,ಸಡಗರ ಎಲ್ಲ ಅಡಗಿದಂತಾಗಿ, ಮಾಯವಾಗಿ, ಶೂನ್ಯ ನಿಶ್ಯಬ್ದ ಕವಿದು, ಬಾಲ್ಯ ನಿನ್ನೆ ತಾನೇ ಕಳೆದುಹೋಯಿತೇನೊ ಎನ್ನಿಸುವಷ್ಟರ ಹತ್ತಿರದ ಭಾವನೆಯನ್ನು ಹತ್ತಿಕ್ಕಿ, ಅಮುಕಿ, ತನ್ನಲ್ಲಿ ತನ್ನ ಸುತ್ತಲ್ಲಿ ಆಗಿರುವ ಬದಲಾವಣೆ ಅದ್ಭುತವಾದದ್ದಾಗಿ ಬೆರಗುಗೊಳಿಸುತ್ತದೆ. 'ಒಂದು ದಿವಸಕ್ಕೇನೆ ಎಷ್ಟು ಅಬ್ಬ' ಎನ್ನುವಲ್ಲಿನ ಸರಳವಾದ ಮಾತುಗಳು ಈ ಬದಲಾವಣೆಯ ಪೂರ್ಣವಾದ ಘಾತವನ್ನು ಸೆರೆಹಿಡಿಯುತ್ತವೆ, ಘನೀಭೂತವಾಗಿಸುತ್ತವೆ.

ಸಂಜೆಯ ಹೊತ್ತು ಹೊನ್ನ ಹುಸಿ ಮಳೆಯಲ್ಲಿ
ನಿತ್ಯಪೂಜೆ

ಎಂಬ ಸಾಲುಗಳಲ್ಲಿನ 'ಪೂಜೆ' ಮೊದಲನೆಯ ಸಾಲಿನ 'ತೇರಿ' ನೊಡನೆ ಕೂಡಿಕೊಂಡು ಸಂಪ್ರದಾಯ ಹಬ್ಬ, ಪೂಜೆ, ಪ್ರಸಂಗ, ರಥೋತ್ಸವಗಳ ರೂಪದಲ್ಲಿ ಜೀವಂತವಾಗಿ. ಬಾಲಕನ ನಿತ್ಯಜೀವನದ ಅಂತರಂಗದ ಅವಿಭಾಜ್ಯ ಅಂಶವಾಗಿ ಅರ್ಥಪೂರ್ಣವಾಗು ವುದನ್ನು ಸ್ಪಷ್ಟಪಡಿಸುತ್ತದೆ.

ಮೊದಲನೆಯ ಭಾಗ ಕೊನೆಗೊಳ್ಳುವ ಅತ್ಯಂತ ಸುಂದರವಾದ ಸಾಲುಗಳಲ್ಲಿ ಆಲ ಮತ್ತು ಆನೆಗಳ ಗುಣ, ವಿಶೇಷಣಗಳನ್ನು ಒಂದರ ಮೇಲೊಂದು ಪರಸ್ಪರ ಆರೋಪಿ ಸುವ (apply) ಸಂಕೀರ್ಣ ಚಿತ್ರ ಬೇರೊಂದು ಅರ್ಥದಲ್ಲಿ ಪ್ರಕಾಶಿಸುತ್ತದೆ. ಈ ಸಾಲು ಗಳಲ್ಲಿ ಹೇಳಿರುವ ಬಾಲಕನ ಅಂತರಂಗ ಆಕಾಶದಲ್ಲಿ ಕನಸಿನ ಲೋಕದಲ್ಲಿ ನಡೆಯುವ ಕ್ರಿಯೆ, ಘಟನೆ (phenomenon) ಕವನದ ಮೂರು ಮತ್ತು ನಾಲ್ಕನೆಯ ಭಾಗ ಗಳಲ್ಲಿ ವರ್ಣಿಸಲ್ಪಟ್ಟಿರುವ, 'ಮೇಲಕ್ಕೆತ್ತಿ ಇಳಿಸಿ ಎತ್ತುವ ಆಟ,' ನೆಲ ಮುಗಿಲುಗಳ ಮೈಥುನ, ಮರ್ತ್ಯ ಅಮರ್ತ್ಯಗಳ ಮಿಲನಗಳನ್ನು ಬೇರೆ ಒಂದು ರೂಪವಾಗಿಸುತ್ತದೆ. ಬಾಲ್ಯಾವಸ್ಥೆಯ ಕನಸಿನ ಲೋಕದಲ್ಲಿ ಅಥವಾ ಉಪಪ್ರಜ್ಞೆಯ ಲೋಕದಲ್ಲಿ ಸಂಪ್ರ ದಾಯ ನೆಲ ಮುಗಿಲುಗಳನ್ನು ಒಂದುಗೂಡಿಸುವ ಸುಲಭ ಸಾಧನವಾಗಿತ್ತೆಂಬುದನ್ನು ಕವಿ ಹೇಳುತ್ತಿರಬಹುದು. ಆಕಾಶದೆಡೆಗೆ ಬಿಳಲುಗಳನ್ನು ಕಳಿಸಿ ನೆಲದಲ್ಲಿ ಹೂ ಚಿಗುರು ಗಳನ್ನು ಅರಳಿಸಿ ಭೂಮಿಯನ್ನು ಸ್ವರ್ಗವನ್ನಾಗಿಸಿ ಅಲೌಕಿಕವಾದ ಸೌಂದರ್ಯವನ್ನು, ಸಂಶಯಾತೀತವಾದ ಪ್ರಶ್ನೆ ಎತ್ತದೆ ಸ್ವೀಕರಿಸಿದ ಪರಂಪರೆ ನಿರ್ಮಿಸಿತ್ತು ಎಂಬುದನ್ನು ಸೂಚಿಸುವ ಕ್ರಮ ಇಲ್ಲಿರಬಹುದು. ಒಟ್ಟಿನಲ್ಲಿ ಮೊದಲನೆಯ ಭಾಗ ಕವಿ ಬಾಲ್ಯಾವಸ್ಥೆ ಯಲ್ಲಿ ಸಂಪ್ರದಾಯ ಅಥವಾ ಪರಂಪರೆಯೊಡನೆ ಹೊಂದಿದ್ದ ಸ್ಫೂರ್ತಿಕರವಾದ, ಕ್ರಿಯಾ ಶೀಲವಾದ, ಅರ್ಥಪೂರ್ಣವಾದ ಸಜೀವ ಸಂಬಂಧವನ್ನು ಮತ್ತು childhood is a period of happy conformity ಎನ್ನುವ ಬೀಜರೂಪವಾದ ವಿಷಯವನ್ನು ಕುರಿ ತದ್ದೂ ಆಗಿದೆ.

ಎರಡನೆಯ ಭಾಗದಲ್ಲಿ ಕವಿ ತನ್ನ ಹರೆಯದ ದೆಶೆಯನ್ನು 'ಉರಿಯನುಗುಳುತ್ತಿದ್ದ ಹೊತ್ತು' ಎಂಬುದಾಗಿ ಔಚಿತ್ಯಪೂರ್ಣವಾಗಿ ವರ್ಣಿಸಿದ್ದಾರೆ. ಈ ದೆಶೆಯ ಉಗ್ರ ರೋಷ (passion) ಬಂಡಾಯಪ್ರವೃತ್ತಿ, ಸಿಡಿದೇಳುವ ಮನೋಭಾವ, ಏಕಾಕಿತನ ಇವುಗಳೆಲ್ಲ 'ಉರಿಯನುಗುಳುವ' ಎನ್ನುವ ನುಡಿಗಟ್ಟಿನಲ್ಲಿ ಸಾಂದ್ರವಾಗಿ ಕೂಡಿಕೊಂಡಿವೆ. 'ದೂರ ನಡುಗಡ್ಡೆ ಬಂಪೆ' 'ಹೊಗೆಯನುಗುಳುವ ಕಂಭ' 'ಗುಂಪು ಬಿಟ್ಟು ಸೆಟಗೊಂಡಿದ್ದ ಸಲಗ'—ಈ ಮೂರು ಚಿತ್ರಗಳೂ ಪರಂಪರೆಯ ವಿರುದ್ಧ ದಂಗೆಯೇಳುವ, ಗುಂಪಿನ ವಿಧಿ ನಿಷೇಧಗಳನ್ನು, ಕಟ್ಟುಪಾಡುಗಳನ್ನು ಧಿಕ್ಕರಿಸುವ, ತನಗೆ ತಾನೇ ದ್ವೀಪವಾಗುವ,

ಏಕಾಂಗಿಯಾಗಿ ಹೋರಾಡುವ ಯೌವನಾವಸ್ಥೆಯ ಸಹಜ ಧರ್ಮವನ್ನು ಹೇಳುತ್ತವೆ. ಇಲ್ಲಿ ಬರುವ ಒಂಟಿ ಸಲಗ ಸಂಪ್ರದಾಯ ವಿರೋಧಿಯಾದ ಬಂಡಾಯಗಾರ ಯುವಕನ, **non-conformist** ನ ಚಿತ್ರ.

> ಕೆಳ ಕಣಿವೆಯಲ್ಲಿ ಖಡ್ಡಾ ತಮಟೆ ಬಡಿತ, ತುಡಿತ :
> ಕೆಪ್ಪಿನೆತ್ತರದಲ್ಲಿ ನೋಡು **ರೋಷ !**

ಎಂಬ ವ್ಯಂಗ್ಯ ತುಂಬಿದ ಈ ಸಾಲುಗಳು ಕವಿಯು ಯಾವ ಕಡೆ ಪಕ್ಷಪಾತವಹಿಸುತ್ತಿದ್ದಾರೆ ಎಂಬುದನ್ನು ತಿಳಿಸುತ್ತದೆ. ಸಂಪ್ರದಾಯದಲ್ಲಿ ಶ್ರದ್ಧೆಯುಳ್ಳ ಕವಿ ಈ ರೋಪು. ರೋಷಗಳನ್ನು ಒಪ್ಪಲಾರರು. ಆದರೆ ಉರಿಯನುಗುಳುವ ಈ ಏಕಾಗ್ರಣಿ ವೀರನ ಅಹಂಕಾರ ಆಲ ಕಂಡರೆ ಕೆಂಡವಾಗುವುದು ಸಹಜ. ಈ ಅರ್ಥವನ್ನು ಕೊಡುವ ಸಾಲು ಗಳಲ್ಲಿಯೂ ವ್ಯಂಗ್ಯ ನವುರಾಗಿ ಸೂಚಿತವಾಗಿದೆ. ಮಟಮಟ ಮಧ್ಯಾಹ್ನ. ಆಕಾಶ ರಾಹು ಗನ್ನಡಿಯಾಗಿ ಎಲ್ಲವನ್ನೂ ಭೂತಾಕಾರವಾಗಿ ಕಾಣಿಸುತ್ತಿರುವಾಗ, ಈ ರೋಪು, ರೋಷ ಶಿಖರ ಮಟ್ಟಕ್ಕೇರಿರುವ ಏರು ಹೊತ್ತಿನಲ್ಲಿ ವಿಧಿ ನಿಷೇಧಗಳ ಬಲೆಯಲ್ಲಿ ಸಿಕ್ಕುಬಿದ್ದು, ಸಂಪ್ರದಾಯ ಅಥವಾ ಪರಂಪರೆ ಹೊರಿಸುವ ಭಾರದಡಿಯಲ್ಲಿ ಸಿಕ್ಕು, ಚಡಪಡಿಸುವ ಮೀನವಾಗುತ್ತಾನೆ ಈ ಉನ್ಮತ್ತ ; ಈ ಕಟ್ಟುಪಾಡುಗಳನ್ನು ಹರಿದೊಗೆಯಲು, ಸ್ವಚ್ಛಂದವಾಗಿರಲು ಹಾತೊರೆಯುತ್ತಾನೆ. ವಿಧಿ ನಿಷೇಧಗಳ, ಉಸಿರುಕಟ್ಟಿಸುವ, ಕಿರು ದಾರಿಯಲ್ಲಿ ಬಂಧಿತನಾಗಿ ಒದ್ದಾಡುವ ಯುವಕ ಕವಿ ತನ್ನ ಅಂತರಂಗದಲ್ಲಿ, ಮನದ ಆಕಾಶದಲ್ಲಿ ಮೀನಲಕ್ಷವಾಗುತ್ತಾನೆ. ಎಂದರೆ, ಅನಿರ್ಬಂಧಿತ ಲೋಕದಲ್ಲಿ ತನ್ನ ವಿಕಾಸಕ್ಕೆ ಮಿತಿಯಿಲ್ಲದಷ್ಟು ಆಕಾಶಗಳನ್ನು ಕಾಣುತ್ತಾನೆ. ಮೀನಲಕ್ಷ ತಾರಗೆಯನ್ನು ಸೂಚಿ ಸುವುದಾದರೆ ಅದು ಯುವಕನ ಆದರ್ಶವಾದಿತನವನ್ನು. ಅದರ ಉಗ್ರತೆಯನ್ನು ವ್ಯಂಜಿ ಸುತ್ತದೆ. ಮೊದಲಿನ ರೋಷ ಈಗ ತೀವ್ರ ನೋವಾಗಿ (anguish) ಮಾರ್ಪಾಡಾಗು ತ್ತದೆ. ಒಂದೊಂದು ಬಿಳಿಲನ್ನು ಕಡಿದು ಹಾಕಿದಾಗ, ಒಂದೊಂದು ಸಂಪ್ರದಾಯವನ್ನು ಮುರಿದಾಗ, ಅಪ್ಪ ಮೊಳ ಮೊಳ ಪಾತಾಳದಾಳಕ್ಕೆ ಕೆಳಗಿಳಿಯುತ್ತಾನೆ.

> ಬುಡ ಕಡಿದು ಅಗ್ನಿಸಂಸ್ಕಾರ ನಡೆಸಿದ ಬಳಿಕ
> ಅಗ್ನಿದಿವ್ಯದ ಛೇದ ಶಂಕುಮತಿಗೆ

ಎಂಬ ಸಾಲುಗಳಲ್ಲಿ ಉಕ್ತವಾಗುವ ಪಿತೃ ಸಂಬಂಧವಾದ ಕರ್ಮ ಮತ್ತು ಅದರ ಸಂಬಂಧ ವಾಗಿ ಇರುವ ನಂಬಿಕೆ ಬಂಡಾಯಗಾರನಾದ ಕವಿ ಪರಂಪರೆಯೊಡನೆ ಸಂಪೂರ್ಣವಾಗಿ ಸಂಬಂಧವನ್ನು ಕಳಚಿಕೊಂಡು, ಅದನ್ನು ಧಿಕ್ಕರಿಸುವುದನ್ನು ಹೇಳುವುದಲ್ಲದೆ ಮೊದಲಿನ

ಸಾಲುಗಳಲ್ಲಿನ ವ್ಯಂಗ್ಯದ ಧಾಟಿಯನ್ನು ಮುಂದುವರೆಸುತ್ತದೆ. 'ಬುಡ ಕಡಿದು' ಎಂಬುದು ಮಗನಿಗೆ ಆರೋಪಿತವಾದರೆ ಅವನ ಅನಾಥಸ್ಥಿತಿ (rootlessness) ಯನ್ನೂ, ಶಂಕು ಮತಿ ಎನುವುದು ಊರ್ಧ್ವಗಾಮಿ ಪ್ರಜ್ಞೆ ಉಳ್ಳವನು ಎಂಬ ಅರ್ಥವನ್ನು ಹೊಂದಿ ಅಪ್ಪನಿಗೆ ಆರೋಪಿತವಾದರೆ, 'ಅಗ್ನಿ ದಿವ್ಯದ ಛೇದ' ಎಂಬುದು ಸೂಚಿಸುವ ಬಿಡುಗಡೆ, ಮುಕ್ತಿಯನ್ನು ಒದಗಿಸುವ ಬೆಲೆಯನ್ನು ಈ ಸಾಲುಗಳು ಪರಂಪರೆಗೆ ಕೊಡುತ್ತವೆ. 'ಶಂಕು' ಎಂಬುದು ಕಡಿದುಹೋದ ರೆಂಬೆ ಎಂಬ ಅರ್ಥವನ್ನು ಕೊಟ್ಟು, ಮಗನಿಗೆ ಆರೋಪಿತವಾದರೆ ಅವನ ಮುಕ್ತಿ ಪಡೆದೆನೆಂಬ ಭ್ರಮೆಯನ್ನು ಅಣಕಿಸಿದಂತಾಗುತ್ತದೆ.

ಮೂರನೆಯ ಭಾಗದಲ್ಲಿ ಕವಿ ಸಾವಧಾನದಿಂದ ಸ್ವಲ್ಪ ಹೊತ್ತು ಜಿಜ್ಞಾಸೆ ನಡೆಸಲು ಅವಕಾಶ ತೆಗೆದುಕೊಳ್ಳುತ್ತಾರೆ. ಇಲ್ಲಿನ ಅವರ ನಿಲುವು ಸಂಪ್ರದಾಯ, ಪರಂಪರೆಯ ಬಗ್ಗೆ ಅವರ ಶ್ರದ್ಧೆಯನ್ನು ದೃಢೀಕರಿಸುವ, positive ಎನ್ನಿಸುವ ಧೋರಣೆ ಎನ್ನು ವುದು ಸ್ಪಷ್ಟವಾಗುತ್ತದೆ. 'ಆಲದ ಮರಕ್ಕೇಕೆ ಅಷ್ಟು ಬಿಳಲು' ಎಂಬ ವಿಸ್ಮಯ ತುಂಬಿದ ಪ್ರಶ್ನೆಗೆ ಉತ್ತರ ಕೊಡುವ ಈ ಸಾಲುಗಳು ಕವಿ ಒಂದು ನಿರ್ಣಯವನ್ನು ತಲುಪಿರುವುದನ್ನು ಹೇಳುತ್ತವೆ. ಬಾಲ್ಯಾವಸ್ಥೆಯ ಕನಸಿನ ಲೋಕದಲ್ಲಿ ನೆಲ ಮುಗಿಲು ಗಳನ್ನು, ಭೂಮಿ ಸ್ವರ್ಗಗಳನ್ನು ಒಂದುಗೂಡಿಸಲು ಸಾಧನವಾದ ಪರಂಪರೆ ಕವಿಯ ಪ್ರಬುದ್ಧ ವಯಸ್ಸಿನಲ್ಲಿ, ಅವನ ಪ್ರಜ್ಞೆ ಎತ್ತರಕ್ಕೆತ್ತರಕ್ಕೆ ಏರುತ್ತಿರುವಾಗ ಅದೇ ಸಂಬಂಧವನ್ನು ನಿತ್ಯಜೀವನದಲ್ಲಿ, ವಾಸ್ತವ ಲೋಕದಲ್ಲಿ ಉಳಿಸಿಕೊಳ್ಳುತ್ತದೆ. ಸ್ವರ್ಗ ಮರ್ತ್ಯಗಳ ನಡುವಿನ ವಹಿವಾಟು, ವ್ಯಾಪಾರಿಗಳಿಗೆ ರಹದಾರಿಯಾಗಿ, ಸಂಪರ್ಕಸಾಧನ ವಾಗಿ ಪರಂಪರೆ ಅರ್ಥಗೊಳ್ಳುತ್ತದೆ. ಬಾಲ್ಯಾವಸ್ಥೆಯ 'ಮೇಲಕ್ಕೆತ್ತಿ ಇಳಿಸುವ ಆಟ'ದ ವಿನೋದ, ಪ್ರಬುದ್ಧಾವಸ್ಥೆಯಲ್ಲಿ ಹುಡುಕುವ, ತಡಕುವ, ಅಗೆದಗೆದು ಹುಡುಕುವ ಗಂಭೀರವಾದ ಅನ್ವೇಷಣೆಯಾಗುತ್ತದೆ. ಏಕಕಾಲಕ್ಕೆ ಮೇಲುಮೇಲಕ್ಕೆ ಹತ್ತುವಾಗಲೇ ಕೆಳಕೆಳಕ್ಕೆ ಇಳಿಯುತ್ತಲಿರುವ ಆಲ ಜೀವನದಲ್ಲಿ ಮನುಷ್ಯ ಸಾಧಿಸಬೇಕಾಗಿರುವ ಸಾಮರಸ್ಯದ ಸಂಕೇತವಾಗಿ ನಿಲ್ಲುತ್ತದೆ. ಐಹಿಕ ಮತ್ತು ಆಧ್ಯಾತ್ಮಿಕ, ಪ್ರಾಪಂಚಿಕತೆ ಮತ್ತು ವೈರಾಗ್ಯಗಳ ನಡುವೆ ಹೊಂದಾಣಿಕೆಯನ್ನು ಸಾಧಿಸಿಕೊಳ್ಳಲು ನೆರವಾಗುವುದೆ ಎಲ್ಲ ಶಾಸ್ತ್ರ, ಪುರಾಣ, ಕರ್ಮ, ಆಚರಣೆ, ಪೂಜೆ ಪುನಸ್ಕಾರ, ಹಬ್ಬ ಹರಿದಿನಗಳನ್ನೊಳ ಗೊಂಡ ಪರಂಪರೆ ಮಾಡುವ ಕೆಲಸ ; ಅಲ್ಲಿಯೇ ಅದಕ್ಕೆ ಇರುವ ಮೌಲ್ಯ, ಅರ್ಥ. ಈ ಸ್ಥಿತಿ, ಪ್ರಾಣಿಯೂ ಅಲ್ಲದ, ದೇವತೆಯೂ ಅಲ್ಲದ, ಮೈ ಮತ್ತು ಮನಸ್ಸು ಗಳೆರಡನ್ನೂ ಹೊಂದಿದ ಮನುಷ್ಯನ ಅನಿವಾರ್ಯವಾದ, ತಪ್ಪಿಸಿಕೊಳ್ಳಲಾಗದ ಪಾಡು. ಈ ಏಬುಬೀಳಿನ ಕಟ್ಟು ಬಿಚ್ಚಿ ಕಟ್ಟುವ ಹರಕೆಯೇ ಪ್ರಾಣಲಿಂಗೇಶ್ವರನಿಗೆ ಸಲ್ಲಬೇಕಾ ದದ್ದು. ಅಲ್ಲಿಯೂ ಸಲ್ಲಬೇಕು, ಇಲ್ಲಿಯೂ ಸಲ್ಲಬೇಕು : ಅದಕ್ಕೆ ಸಹಾಯವಾಗುವ ಇಕ್ಕಟ್ಟಿನ ದಾರಿಯೇ ಪರಂಪರೆ.

"ಗಾಳಿಗೇ ಏಕಿಷ್ಟು ತೂಕ ಹೆಚ್ಚು ?" ಎಂಬ ಮತ್ತೊಂದು ವಿಸ್ಮಯ ತುಂಬಿದ ಪ್ರಶ್ನೆಗೆ ಉತ್ತರಿಸುವಲ್ಲಿ ಕವಿ ತನ್ನ ನಿಲುವನ್ನು ಮತ್ತಷ್ಟು ಸ್ಪಷ್ಟಗೊಳಿಸುತ್ತಾರೆ. ಬಾಲ್ಯದಲ್ಲಿನ "ಸದ್ದಿಲ್ಲದುದ್ದುದ್ದ ಚಿಗಿವ ಕಾಂಡ" ಪ್ರಬುದ್ಧಾವಸ್ಥೆಯಲ್ಲಿ "ತಿಳಿದಂತೆ ಕಂಡರೂ ತಿಳಿಯದಂತೆ ಆಡುವ" ಕೊರಡಾಗಿ ವಿಸ್ಮಯವನ್ನು ಉಳಿಸಿಕೊಳ್ಳುತ್ತದೆ. ಮೇಲುಮೇಲಕ್ಕೆ ಕೊಂಬೆರೆಂಬೆಗಳನ್ನು ಏರಿಸುವ, ಎಲ್ಲ ಕಡೆಗೂ ಚೆಲ್ಲಿ ಹರಡುವ, ಅದೇ ಸಮಯದಲ್ಲಿ ಕೆಳಕ್ಕೆ ಬಿಳಲುಗಳನ್ನಿಳಿಸುವ ಚೈತನ್ಯದ, ಶಕ್ತಿಯ ಮೂಲ ಈ ಕಾಂಡ, ಕೊರಡು. ಮೇಲಕ್ಕೆ ಜಿಗಿಯಬೇಕೆಂಬ ಊರ್ಧ್ವಾಭಿಮುಖ ಹಂಬಲ, ಆಧಾರಕ್ಕೆ ಬಿಳಲನ್ನಿಳಿಸುವ ವರಾತ, ಎರಡು ವಿರುದ್ಧ ದಿಕ್ಕಿನಲ್ಲಿ ತುಯ್ಯುವ ಶಕ್ತಿಗಳ ಕೇಂದ್ರಸ್ಥಾನ ಮೃಣ್ಮಯವಾದ ದೇಹ. ಗಾಳಿಯ ಶೀಲವುಳ್ಳ ಈ ಆಧ್ಯಾತ್ಮಿಕ ಹಂಬಲ ಜಡವಾದ ಭಾರವಾದ ಮಾಂಸದ ದೇಹದಲ್ಲಿ ಸಿಕ್ಕುಹಾಕಿಕೊಂಡಿದ್ದರೂ. ಅದನ್ನು ಬಿಟ್ಟು ಆ ಪ್ರಾಣಶಕ್ತಿಗೆ ಅಸ್ತಿತ್ವವಿಲ್ಲ.

"ಗಾಳಿಗೇ ಏಕಿಷ್ಟು ತೂಕ ಹೆಚ್ಚು ?" ಎಂಬ ಪ್ರಶ್ನೆ "ಭೂಮಿಗೀತ" ದಲ್ಲಿನ

> ಇದು ನೋಡು ಇದು ಕಷ್ಟ ; ಧೂಳು ಧೂಳಿಗೆ ಸೇರಿ
> ಗಾಳಿ ಗಾಳಿಗೆ ಕೂಡಿ
> ಬೆಂಕಿ ಬೆಂಕಿಯ ಕೂಡಿ
> ಗಾಳಿಯಲ್ಲುಲುಹು, ಆಕಾಶದಲ್ಲಾಕಾಶ ಬೆರೆತು ಹೋದರೆ ಇವಕ್ಕೇನು ಧಾಡಿ ?

ಎಂಬ ಪ್ರಶ್ನೆಯ ಸಂಕ್ಷಿಪ್ತ ರೂಪವಾಗಿದೆ ಅಷ್ಟೆ. ಊರ್ಧ್ವಾಭಿಮುಖ ಗತಿಯ ಹಂಬಲ ಎಷ್ಟೇ ಬಲವತ್ತರವಾಗಿದ್ದರೂ. ಅದನ್ನು ಕೆಳಕ್ಕೆ ಮಣ್ಣಿನೆಡೆಗೆ ಹಿಡಿದು ಜಗ್ಗುವ ಈತಿಬಾಧೆಗಳು, ಮೋಹ ಮೌಢ್ಯಗಳೂ ಅಷ್ಟೇ ಪ್ರಬಲವಾಗಿವೆ. ಆದ್ದರಿಂದಲೇ ಅಂತರಂಗದ ಸಲಗ.

> ವಾಸ್ತವ ರಾಜಪಥದಲ್ಲಿ ಹೊತ್ತಂಬಾರಿ
> ಭಾರಕ್ಕೆ ಕುಗ್ಗುವ ವಿಧೇಯ ಸೊಣಗ—
> ಆಗುವುದು ಇಷ್ಟು—ಆಗಬೇಕೆನ್ನಿಸುವುದರ ರವಷ್ಟು,

ದೇವೇಂದ್ರನಾಗಲು ಹೊರಟು ತ್ರಿಶಂಕುವಾಗಿ ಒದ್ದಾಡುವುದು ಮನುಷ್ಯನ ಪಾಡು.

ಆಲ ಬಿತ್ತವಾಗಲು ತಿಣಕಿ ಸಾಯುವಂತೆ ಮಗ ಪ್ರಬುದ್ಧಮಾನನಾಗುವ ಹೊತ್ತಿಗೆ ಬಿಳಲುಗಳನ್ನು ಬಿಟ್ಟಂಥ ಅಪ್ಪ, ಸವೆದು ಸವೆದು. ಟಂಕಸಾಲೆಯ ನವೀಕರಣಕ್ಕೆ

ಕಾಯುತ್ತ ಕಳಚಿ ಬೀಳುತ್ತಾನೆ ; ತನ್ನ ಮುದ್ರೆಯನ್ನೆ ಪಡೆದ ಮಗನಲ್ಲಿ ತನ್ನದೆ ಸಂಸ್ಕೃತಿ ಪರಂಪರೆ, ಹೊಸ ಹುಟ್ಟನ್ನು ಪಡೆದು, ನವಜೀವನವನ್ನಾರಂಭಿಸಲು, ಪುನರುಜ್ಜೀವ ಗೊಳ್ಳಲು ಕಾದು, ಸೋತು, ಹತಾಶನಾಗಿ ತೆರಳುತ್ತಾನೆ. ಜೀವಪೋಷಕ ಸತ್ವವನ್ನೊದ ಗಿಸುವ ಕಾಂಡದ ಸಂಬಂಧವನ್ನು ಕಳೆದುಕೊಂಡ 'ಶಂಕುಮತಿ' ಮಗ ಐಹಿಕವಾದದ ಆಮಿಷಗಳ ಸೆಳೆತದಲ್ಲಿ ಭೋಗ, ಆಮೋದ, ಮೋಜುಗಳಿಗೆ ಸೋತು ಅಂತಃಸತ್ವ (spiritual core) ವನ್ನು ಕಳೆದುಕೊಂಡು ಹೊರಗಿನ ಆಡಂಬರವನ್ನು ಮಾತ್ರ ಉಳ್ಳ ಅಪಭ್ರಂಶ ಚೊಟ್ಟಿಕಾರನ ಬೇರನ್ನು ಹುಡುಕಲು ಹೊರಡುತ್ತಾನೆ. ಪಾಶ್ಚಾತ್ಯ ನಾಗರೀ ಕತೆ ಮತ್ತು ಪೌರ್ವಾತ್ಯ ಸಂಸ್ಕೃತಿಯ ಮಿಶ್ರಸಂಜಾತನಾದ ಈ ಚೊಟ್ಟೆಕಾರ (ಚೊತ್ತೆ) ನ ಬೇರು ಮೇಲೊ, ಕೆಳಗೊ. ಒಳಗೊ, ಹೊರಗೊ ತಿಳಿಯಲಾರದೆ ಮಗ ಕಂಗೆಡು ತ್ತಾನೆ. ಅಲ್ಲೂ ಇಲ್ಲದೆ, ಇಲ್ಲೂ ಇಲ್ಲದೆ, ಯಾವುದೂ ಲಭ್ಯವಾಗದೆ ಅಂತರಪಿಶಾಚಿಯ ಸ್ಥಿತಿಯಲ್ಲಿ ತೊಳಲಾಡುತ್ತಾನೆ.

ಸಂಪ್ರದಾಯ ಅಥವಾ ಪರಂಪರೆ ನೇರವಾಗಿ ಇಳಿದು ಬರುವುದು ಅಪ್ಪನಿಂದ ಮಗನಿಗೆ. ಆ ಸಂಬಂಧವನ್ನು ತುಂಡರಿಸಿದ ಮಗ, ಈಗ ಅಪ್ಪನಾಗಿ ತನ್ನ ಮಗನೇ ಒಣಗಿ ಹೋಗುವ ಗೆಣ್ಣಾಗಿರುವುದನ್ನು ಕಂಡು ಕೊರಗುತ್ತಾನೆ. ಆಲವನ್ನು ಬುಡ ಸಮೇತ ಕಿತ್ತು ಉರುಳಿಸಿದ ಜಾಗದಲ್ಲಿ ಈಗ ಜಾಲಿ, ಕತ್ತಾಳೆ. ಈಚಲು, ಕುರುಚಲು ಹುಲು ಸಾಗಿ ಬೆಳೆಯುತ್ತವೆ. ಇವೆಲ್ಲವೂ ಆತ್ಮಘಾತಕವಾದ ಒಂದು ಕುಸಂಪ್ರದಾಯ ಬೆಳೆಯು ತ್ತಿರುವುದರ ಸೂಚನೆ. "ವರ್ಧಮಾನ"ದಲ್ಲಿ ವ್ಯಕ್ತವಾಗುವ ಮುಂದಿನ ಪೀಳಿಗೆಯ ಬಗೆಗಿನ ಭರವಸೆ ಇಲ್ಲಿ ನಿರಾಶೆಯಾಗಿ ವ್ಯಕ್ತವಾಗುತ್ತಿರುವುದು ಗಮನಾರ್ಹ. ಬಾಲ್ಯದಲ್ಲಿ ನೃತ್ಯವಾಡಿದ ಶಾಖೋಪಶಾಖೆಗಳ ನೆಳಲು ಪ್ರಬುದ್ಧ ವಯಸ್ಸಿನಲ್ಲೂ ನೆಳಲಾಗಿ. ಭೂತವಾಗಿ ಕಾಡುತ್ತದೆ. ಕವಿ ಅವನ್ನು ಹೊರಕ್ಕೆ ತರುವ ಪವಾಡಕ್ಕೆ ಕಾದು ಕುಳಿತು ಕೊಳ್ಳುತ್ತಾರೆ. ಈ ಸಾಲುಗಳು 'ಭೂತ' ಕವನದ

ಇನ್ನಾದರೂ ಕೊಂಚ ಕಲಿಯಬೇಕು :
ಹೊನ್ನ ಕಾಯಿಸಿ ಹಿಡಿದು ಬಡಿದಿಷ್ಟದೇವತಾ
ವಿಗ್ರಹಕ್ಕೊಗ್ಗಿಸುವ ಅಸಲು ಕಸುಬು

ಎನ್ನುವ ಸಾಲುಗಳನ್ನು ನೆನಪಿಗೆ ತಂದು ಅಡಿಗರು ಪರಂಪರೆ, ಭೂತಗಳ ಬಗ್ಗೆ ತಳೆ ದಿರುವ ನಿಲುವು positive ಎನ್ನುವುದನ್ನು ಒತ್ತಿ ಹೇಳುತ್ತವೆ. ಇತ್ತೀಚಿನ ಅವರ ಲೇಖನದಲ್ಲಿನ ಈ ಮಾತುಗಳು ಈ ಅಭಿಪ್ರಾಯವನ್ನು ಪುಷ್ಟೀಕರಿಸುತ್ತವೆ : 'ನಾವು

ಇಂದಿನವರು ಮಹಾ ಧೀಮಂತರು, ಹಿಂದಿನವರು ದಡ್ಡರು, ಆದ್ದರಿಂದ ನಾವು ಕಲಿಯ ಬೇಕಾದ್ದು ಏನೂ ಇಲ್ಲ ಎಂದು ಹೊರಡುವುದು ಮೂರ್ಖತನವೇ ಸರಿ.' ಪರಂಪರೆಯ ಬಗ್ಗೆ ಗಾಢವಾಗಿ ಆಲೋಚನೆ ನಡೆಸಿರುವ ಕವನ 'ಅಜ್ಜ ನೆಟ್ಟಾಲ'.

ಪ್ರವೃತ್ತಿ

ಜವರನಹಳ್ಳಿ ಸಿದ್ದಪ್ಪ

ವರ್ಗಗಳು : ಕಾಡಿಗೇ ಕಿಚ್ಚು ತೋರುವಷ್ಟು,
ಆದರೂ ಅಲ್ಲಲ್ಲೇ ಬೆಳೆಯುತ್ತಿವೆ ಮರಗಳು,
ಬಿಡಬೇಕಲ್ಲ ಹಲವಾರು ಬಳ್ಳಿಗಳು,
ತಬ್ಬಿ, ತಾ ಹುಲುಸಾಗಿ ಬೆಳೆಯಬೇಕೆಂಬ
ಉತ್ಕಟತೆಯಿಂದ ;
ತನ್ನನ್ನೇ ತಾನು ನೋಡುತ್ತಾ, ಪ್ರದರ್ಶಿಸುತ್ತಾ
ಬೆಳೆಯುತ್ತವೆ.
ಬೆಳೆಯುವುದನ್ನು ನೋಡಿ 'ಎಂದೂ ನನ್ನದಲ್ಲವೇ ಈ ಬಳ್ಳಿ'
ಎಂದು ಮರೆತೇ ಭ್ರಮೆಪಟ್ಟು ನಿಂತ
ಆ ಮರ ದೇಹ ಸವೆಸಿ
ಕರ್‍ರಗೆ ಸಣ್ಣಗಾದಷ್ಟು ಆ ಬಳ್ಳಿಗೆ ಹಿಗ್ಗು !
ಒಂದಲ್ಲ ಒಂದು ದಿನ ಆ ಮರ ಹೇಳುತ್ತೆ :
'ನನಗಿಂತ ಕಾಡುಗಿಡಗಳು ವಾಸಿ'.

ಹ್ಯಾಂಗೋವರ್

ಜಿ. ಎಸ್. ಸದಾಶಿವ

ಸೋಮು, ಶೃಂಗಾರ್ ಶಾಪಿಂಗ್ ಸೆಂಟರ್ ಎದುರು ತನ್ನನ್ನು ತಾನೇ ಕಳಕೊಂಡವನಂತೆ ನಿಂತಿದ್ದ. ಮಹಾತ್ಮಾ ಗಾಂಧಿ ರಸ್ತೆಯಲ್ಲಿ ನಡೆದು ಬರುತ್ತಿದ್ದ ನನಗೆ ಈ ಸೋಮುವಿನ ದರ್ಶನ ಅಕಸ್ಮಾತ್ ಆಯಿತು. ಪುಸಪುಸನೆ ಸಿಗರೇಟಿನ ಹೊಗೆ ಬಿಡುತ್ತ ದೊಗಳೆಯಾದ ಪ್ಯಾಂಟಿನ ಒಂದು ಕಿಸೆಯಲ್ಲಿ ಒಂದು ಕೈ ತುರುಕಿ ನಿಂತಿದ್ದ ಅವನ ಶೈಲಿ ಮರುಕ ತರುವಂತಿತ್ತು. 'ಹಲೋ' ಎಂದೆ. ಓಹ್ ಎಂದು ಬೆಚ್ಚಿದ. ನನ್ನನ್ನು ನೋಡಿ ಮುಖ ಊರಗಲ ಮಾಡಿಕೊಂಡ.

'ಯಾವುದಾದರೂ ಹುಡುಗಿಗಾಗಿ ಕಾಯ್ತಾ ಇದೀಯಾ ?' ಎಂದೆ. ತನ್ನ ಸಣ್ಣ ಹಣೆಯ ಮೇಲಿನ ಬೆವರನ್ನು ಒರೆಸಿಕೊಳ್ಳುತ್ತ 'ಛೆ ಛೆ' ಎಂದ.

'ನೋಡೋ ಕಿಟ್ಟು' ಎಂದು ಏನೋ ಹೇಳಲು ಹೋಗಿ, ಈಚೆಗೆ ನೀನು ಕಾಣಲೇ ಇಲ್ಲವಲ್ಲ ಎಂದು ಬೇರೆ ಮಾತಾಡಿ ನನಗೆ ಏರೋನಾಟಿಕ್ಸ್‌ನಲ್ಲಿ ಕೆಲಸ ಸಿಕ್ಕಿತು, ಕೈಗೆ ಆರು ನೂರು ರೂಪಾಯಿ ಬರುತ್ತೆ ಎಂದು ಅವಸರವಸರದಿಂದ ಹೇಳಿ ಸಿಗರೇಟಿನ ಹೊಗೆ ಬಿಟ್ಟ.

ಈ ಪ್ರಾಣಿಯನ್ನು ನೋಡಿದರೆ ಇದ್ದ ಒಂದು ಚಿಲ್ಲರೆ ಕೆಲಸವೂ ಹೋಗಿ, ಮನೆಯಲ್ಲಿ ಸಿಂಬಳ ಸುರಿಸುವ ಒಂಬತ್ತು ಮಕ್ಕಳ ಕೂಳಿಗೇನು ಮಾಡಬೇಕು ಎಂಬ ಚಿಂತೆಯಲ್ಲಿರುವ

ತರಲೆ ಗುಮಾಸ್ತನ ಥರ ನಿಂತಿದ್ದ. ಸ್ವಲ್ಪ ನಾಟಕದ ಭಾಷಣದಂತೆ ಅದನ್ನು ಅವನಿಗೆ ಹೇಳಿದೆ.

'ಅದಲ್ಲ ಕಣೊ...ನನಗೆ...ಹೋಗಲಿ ಬಿಡು. ನೀನು ಸಿಕ್ಕಿದ್ದು ಒಳ್ಳೇದಾಯ್ತು. ನನಗೆ ಒಂದಿಷ್ಟು ಒಳ್ಳೇ ಬಟ್ಟೆ ತಗೋಬೇಕು. ಒಂದು ಸೂಟು ಬೇಕು. ಆದರೆ ಆರ್ರೋಕೆ ಕಷ್ಟ ಆಗ್ತಾ ಇದೆ. ಒಂದು ಅಂಗಡಿಗೆ ಹೋಗಿ ನೋಡಿದೆ. ಎಲ್ಲಾ ಚೆನ್ನಾಗಿದ್ದಹಾಗಿತ್ತು. ಆದರೆ ಯಾವುದನ್ನೂ ತಗಳೋದು ಕಷ್ಟ ಆಯ್ತು. ಅರ್ಧ ಗಂಟೆ ನನ್ನ ಅವಸ್ಥೆ ನೋಡಿ ಅಂಗಡಿಯವ ತನಗೆ ಬೇಜಾರಾಗಿದೆ ಎಂದು ತೋರಿಸಿಕೊಂಡ. ಹೊರಟು ಬಂದೆ' ಎಂದು ತನ್ನ ಗೋಳು ತೋಡಿಕೊಂಡ.

ಬಟ್ಟೆ ಆರಿಸುವುದರಲ್ಲಿ ನಾನು ತಜ್ಞ ಎಂದು ಸೋಮು ತಿಳಿದಿದ್ದ. ಅದನ್ನು ಸಮರ್ಥಿಸಿಕೊಳ್ಳುವಂತೆ, ಅವನಿಗಾಗಿ ಬಣ್ಣ ಬಣ್ಣದ ಎರಡು ಬಾಂಬೆ ಡೈಯಿಂಗ್ ಶರ್ಟು ಆರಿಸಿದೆ. ಗ್ವಾಲಿಯರ್ ಟೆರಿವುಲ್ ಸೂಟ್ ಪೀಸ್ ತಗೋಬಹುದು ಎಂದೆ. ತೀರಾ ಬಣ್ಣದ ಬಟ್ಟೆಯನ್ನು ಅವನು ಇಷ್ಟಪಡದಿದ್ದರೂ ಶೋಕಿಯಾಗಿ ಓಡಾಡುವ ನನ್ನೆದುರು ಹೇಳಿದರೆ ಎಲ್ಲಿ ಹಾಸ್ಯ ಮಾಡುತ್ತೇನೋ ಎಂದು ಸಂಕೋಚ ಕಾಡಿರಬೇಕು. ಉಸಿರೆತ್ತದೆ ಪ್ಯಾಕೆಟ್ಟುಗಳನ್ನೆತ್ತಿಕೊಂಡು ನೂರರ ನೋಟುಗಳನ್ನು ಕೌಂಟರಿನಲ್ಲಿ ಚೆಲ್ಲಿದ. ಬಟ್ಟೆಯನ್ನು ಕಂಕುಳಲ್ಲಿ ಒತ್ತಿಕೊಂಡು ಹಣ ಒಗೆದಾಗ ಅವನ ಮುಖ ಗೆಲುವಿನ ಕಳೆ ಸೂಸುತ್ತಿತ್ತು. ನನ್ನ ಸೆಲೆಕ್ಷನ್ ಅವನಿಗೆ ಹಿಡಿಸಿತು ಎಂದು ನನಗೆ ಖುಷಿಯಾಯಿತು.

'ನೋಡೋ ಕಿಟ್ಟು, ಇಷ್ಟು ಹಣ ಒಂದೇ ಸಾರಿ ಖರ್ಚು ಮಾಡ್ತಿರೋದು ಇದೇ ಮೊದಲ ಸಲ' ಎಂದ. ಹಿಗ್ಗಿನಿಂದ. ಆಗ ನನಗೆ ಅವನ ಗೆಲುವಿನ ಅರ್ಥ ಬೇರೆಯಾಗಿ ಹೊಳೆಯಿತು.

'ಅದು ಸರಿ, ಇಷ್ಟೊಂದು ದುಡ್ಡು ಹೇಗೆ ಬಂತಪ್ಪಾ......'

'ನೀನೊಬ್ಬ ಗುಗ್ಗು. ಕೆಲಸ ಸಿಕ್ಕಿದೆ ಅನ್ನಿಲ್ವಾ ?' ಎಂದ.

ಮೊದಲಿನ ಹ್ಯಾಪುಮೋರೆಯ ಸೋಮುವಿನ ಧ್ವನಿ ಈಗ ಗೆಲುವಿನಿಂದ ಉಕ್ಕುತ್ತಿತ್ತು. ಆತನ ಈ ರೀತಿಯನ್ನು ನಾನು ಈ ಹಿಂದೆ ನೋಡಿರಲಿಲ್ಲ.

'ಅದೇನು ಕೆಲ್ಸ ಕೊಟ್ಟ ಕೂಡ್ಲೇ ಸಂಬಳ ಕೊಟ್ರಾ ?'

'ನಿನಗೆ ಹೇಳಲೇ ಇಲ್ಲ. ಅಲ್ವಾ. ಕೆಲಸ ಸಿಕ್ಕಿ ಆಗಲೇ ಎರಡು ತಿಂಗಳಾಯಿತು. ಈಗ ಇನ್ನೂರೈವತ್ತು ಹೋಯ್ತು. ಕೈಯಲ್ಲಿ ಇನ್ನೂ ಇನ್ನೂರೈವತ್ತು ಇದೆ. ತಿಂಗಳ ಖರ್ಚಿಗಾಗೋ ಅಷ್ಟು ಬೇರೆ ತೆಗೆದಿಟ್ಟಿದೀನಿ. ಈಗ ಕೈಲಿರೋದು ಯಾಕೆ ಗೊತ್ತಾ ?' ಅವನ ಧ್ವನಿಯಲ್ಲಾಗುತ್ತಿದ್ದ ಸೂಕ್ಷ್ಮ ವ್ಯತ್ಯಾಸವನ್ನು ಗಮನಿಸುತ್ತಾ ಬಂದ ನನಗೆ ಇದು ಕೇವಲ ಕೆಲಸ ಸಿಕ್ಕಿದ ಗೆಲುವಿನಿಂದ ಬಂದದ್ದು ಎನಿಸಲಿಲ್ಲ. ಕಣ್ಣನ್ನು ಕಿರಿದುಗೊಳಿಸಿ, ಸಿಗರೇಟನ್ನು ಶಕ್ತಿಮೀರಿ ಎಳೆದು ಕೆಮ್ಮುತ್ತ, ಕಂಪಿಸುವ ಧ್ವನಿಯಲ್ಲಿ ಮಾತಾಡುತ್ತಿದ್ದ ಸೋಮು ಯಾರ ಮೇಲೋ ರೊಚ್ಚು ತೀರಿಸಿಕೊಳ್ಳುತ್ತಿದ್ದಾನ ಎನಿಸಿತು. ಅವನ ರೀತಿಯಿಂದ ನನಗೆ ಗಲಿಬಿಲಿಯಾಯಿತು.

'ಏ ಕಿಟ್ಟು, ಈ ಹಣ ನನ್ನ ಸ್ವಯಾರ್ಜಿತ, ಏನೂ ಯೋಚನೆ ಮಾಡಬೇಡ. ಅದು ನನ್ನಪ್ಪಂದೂ ಅಲ್ಲ, ನಿನ್ನಪ್ಪಂದೂ ಅಲ್ಲ. ನಡಿಯೋ ಗುಂಡು ಹಾಕೋಣ' ಎಂದ.

ಅವನ ಮಾತಿನ ಭರಾಟೆ ಸಂಜೆಯ ಸಂತೋಷಿಗಳ ಗಮನ ಸೆಳೆದು ನಾನು ಇನ್ನಷ್ಟು ಮುಜುಗರಪಟ್ಟೆ. ಇಷ್ಟು ದಿನವೂ ನಾನು ನೋಡಿದ ಸೋಮು ಬೇರೆ. ಆತ ಹೆಚ್ಚು ಮಾತಾಡುತ್ತಿರಲಿಲ್ಲ. ತನ್ನ ಪಾಡಿಗೆ ತಾನಿದ್ದು, ಯಾವಾಗಲೂ ಚಿಪ್ಪಿನೊಳಗೆ ಅಡಗಿಕೊಳ್ಳುತ್ತಿದ್ದ. ನನಗೆ ಗೊತ್ತಿದ್ದ ಹಾಗೆ ನನ್ನ ಬಿಟ್ಟು ಆತ ಇನ್ನಾರ ಜತೆಯೂ ಹೆಚ್ಚು ಸಂಪರ್ಕ ಇಟ್ಟುಕೊಂಡಿದ್ದು ಕಂಡಿರಲಿಲ್ಲ. ನಾನು ಗುಂಡು ಹಾಕುತ್ತಿದ್ದುದು ಅವನಿಗೆ ಗೊತ್ತಿತ್ತು. ಅವನ ವಿಷಯ ನನಗೆ ತಿಳಿದಿರಲಿಲ್ಲ. ಆಶ್ಚರ್ಯದಿಂದ ಕಣ್ಣರಳಿಸಿದೆ. ನನಗೂ ಸ್ವಲ್ಪ ಅಭ್ಯಾಸ ಇದೆ ಕಣೋ ಎಂದು ಸ್ವಲ್ಪ ನಾಚಿನವರಂತೆ ಹೇಳಿದ.

ಗುಂಡು ಹಾಕಲು ನನ್ನದೇನೂ ಅಭ್ಯಂತರ ಇರಲಿಲ್ಲ.

ಕಾಂಟಿನೆಂಟಲ್‌ನ ಒಂದು ಮೂಲೆಯಲ್ಲಿ ಕೂತು ಎರಡು ಬಿಯರ್ ಹೇಳಿದಾಗ ಸೋಮು ಕಣ್ಣು ಹೊಳಪಿಸುತ್ತ 'ನನಗೆ ಇಂದು ಮಾಂಸ, ಮದ್ಯ ಎರಡೂ ಬೇಕು' ಎಂದ. ಸರಿಯಪ್ಪ ಎಂದೆ. ಬಟ್ಟೆ ಅರಿಸುವಾಗ ನನ್ನಲ್ಲಿ ಬೇಡಿಕೊಳ್ಳುವ ಧ್ವನಿಯಲ್ಲಿ ಮಾತಾಡುತ್ತಿದ್ದ ಸೋಮು ಈಗ ಅಪ್ಪಣೆ ಕೊಡುವಂತೆ ಹೇಳುತ್ತಿದ್ದ.

'ಏನು ತಿನ್ನೋಯಾ ?' ಅಂದೆ. 'ಅದೆಲ್ಲ ನಂಗೆ ಗೊತ್ತಿಲ್ಲ. ನೀನೇ ಹೇಳಬೇಕು' ಎಂದ. ಬೇರರ್ ಕೂಗಿ 'ಒಂದು ಪ್ಲೇಟ್—' ಎನ್ನುವಷ್ಟರಲ್ಲಿ 'ನೀನೂ ತಿನ್ನಬೇಕು' ಎಂದ. ಯಾಕೋ ಇದು ಉಸಿರು ಕಟ್ಟುವ ಸ್ಥಿತಿಗೆ ಬಂತೆಂದು ಸ್ವಲ್ಪ ಕಿರಿಕಿರಿಯಾಯಿತು.

'ನಾನು ತಿನ್ನೋಲ್ಲ ಅನ್ನೋದು ನಿನಗೆ ಗೊತ್ತು. ಮತ್ಯಾಕೆ ಹಟ' ಎಂದು ಸ್ವಲ್ಪ ಖಾರವಾಗಿ ಹೇಳಿದೆ. ಸೋಮು ಸಪ್ಪಗಾದ. ಯಾಕೋ ಪಾಪ ಅನಿಸಿತು, 'O. K. ಎರಡು ಪ್ಲೇಟ್ ಮಟನ್ ಪಲಾವ್' ಎಂದೆ.

ಉರಿದು ಬೂದಿಯಾಗುತ್ತಿದ್ದ ಸಿಗರೇಟಿನ ತುದಿಗೇ ಮತ್ತೊಂದನ್ನು ತೆಗೆದು ಅಂಟಿಸಿದ. ತಕ್ಷಣ ಇವನೊಬ್ಬ ನ್ಯೂರೋಟಿಕ್ ಎನಿಸಿತು. ಒಂದೆರಡು ಗುಟುಕು ಬಿಯರ್ ಕುಡಿದು ಮುಖ ಕಹಿ ಮಾಡಿಕೊಂಡು ತೆಪ್ಪಗೆ ಕೂತ. ಸ್ವಲ್ಪ ಹೊತ್ತಾದಮೇಲೆ 'ಯಾಕೋ 'ಮದ್ಯ' ಮುಟ್ಟಲೇ ಇಲ್ಲ' ಎಂದೆ. 'ನಿನಗೆ ಹಾಸ್ಯ ಅಲ್ಲವಾ— ಮಾಂಸಾನೂ ಬರಲಿ ಇರು' ಎಂದು ನನ್ನ ಮಾತಿಗೆ ತಾನೇನೂ ಬೇಜಾರುಪಟ್ಟಿಲ್ಲ ಎನ್ನುವಂತೆ ಹೇಳಿದ.

ಅರ್ಧಗಂಟೆ. ಸೋಮು ಗ್ಲಾಸಿನಲ್ಲಿ ಇನ್ನೂ ಅರ್ಧ ಬಿಯರ್ ಇತ್ತು. ಅವನ 'ಮಾಂಸ'ವೂ ಪ್ಲೇಟಲ್ಲಿ ಆರಿ ತಣ್ಣಗಾಗುತ್ತಿತ್ತು. ಇನ್ನೂ ಸ್ವಲ್ಪ ಹೊತ್ತು ಬಿಟ್ಟರೆ ಅವನ್ನು ತಿಂದರೆ ವಾಕರಿಕೆ ಬರಬಹುದು ಎನಿಸಿತು. ಸೋಮುವಿಗೆ ಬಿಯರ್ ಕುಡಿಯುವುದರಲ್ಲಾಗಲೀ, ಮಟನ್ ತಿನ್ನುವುದರಲ್ಲಾಗಲೀ ಮನಸ್ಸಿರಲಿಲ್ಲ ಎಂದು ನನಗೆ ಹೊಳೆಯಿತು. ಸಂಜೆ ಕಂಡಾಗಿನಿಂದ ಇಷ್ಟು ಹೊತ್ತಿನವರೆಗೆ ಅವನು ಅಶಾಂತನಾಗಿದ್ದ, ಉದ್ವಿಗ್ನನಾಗಿದ್ದ, ಒತ್ತಾಯದ ಸಂತೋಷ ತಂದುಕೊಂಡಿದ್ದ. ಸುಖ ಕೊಂಡುಕೊಳ್ಳಲು ಬಾರಿಗೆ ಬಂದಿದ್ದ. ಅವನಿಗೆ ಸುಖ ದೊರಕಿಸುವ ದಳ್ಳಾಳಿಯಾದ್ದಕ್ಕೆ ನನಗೇನೂ ವ್ಯಥೆ ಇರಲಿಲ್ಲ. ಮೆತ್ತಗೆ ಮಡಿಲಲ್ಲಿ ಬಾಂಬ್ ಹಾಕುವ ರೀತಿಯಲ್ಲಿ ಕುಳಿತಿದ್ದ ಸೋಮುವನ್ನು ಕಂಡು ನನಗೆ ಕೆಣಕಬೇಕೆನಿಸಿತು.

'Shoot' ಎಂದೆ, ಅಮೆರಿಕದ ಜನಪ್ರಿಯ ಕಾದಂಬರಿಗಳ ಪ್ಲೇಬಾಯ್ ಹೀರೋಗಳ ರೀತಿಯಲ್ಲಿ. ಆದರೆ ಎಂಜಿನಿಯರಿಂಗ್ ಪುಸ್ತಕಗಳನ್ನು ಮಾತ್ರ ಓದುವ ಸೋಮು ಕಕ್ಕಾಬಿಕ್ಕಿಯಾದ. 'ಏನು ಹೇಳು ?' ಎಂದೆ.

'ಏನ್ನ ?'

'ಅದೇ ಕೊರೀತಾ ಇದ್ದೆಯಲ್ಲ. ಅದನ್ನ'.

ಸಿಟ್ಟು ಬಂದವನಂತೆ ಗ್ಲಾಸಿನಲ್ಲಿದ್ದ ಬಿಯರನ್ನು ಗಟಗಟ ಕುಡಿದ. ಒಂದು ತುಂಡು ಮಾಂಸವನ್ನು ಗುಳಕ್ಕನೆ ನುಂಗಿದ. ಅದಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳುವವನಂತೆ ಎರಡು ದಮ್ ಹೊಗೆ ಎಳೆದು ಮತ್ತೆ ಐದು ನಿಮಿಷ ತಣ್ಣಗೆ ಕೂತು ಒಬ್ಬರೇ ಆಗಿ,

ಇಬ್ಬಿಬ್ಬರೇ ಆಗಿ, ನಗು ನಗುತ್ತ, ನಗದೆ ಮುಖದ ತುಂಬ ಚಿಂತೆಯ ತೆರೆ ಎಳೆಯುತ್ತಾ, ಕೂಗುತ್ತ, ಮಾತಾಡದೆಯೇ ಸನ್ನೆಮಾಡುತ್ತಾ ಬಂದು ತುಂಬುತ್ತಿದ್ದ ಜನರನ್ನು ಬೆರಗುಗಣ್ಣುಗಳಿಂದ ನೋಡುತ್ತಾ ಹೊತ್ತು ಕಳೆದ.

'ನನ್ನ ದುಡ್ಡಲ್ಲಿ ನಾನು ಸುಖ ಪಡೋದು ತಪ್ಪಾ ?' ಎಂದ.

'ಅದೇನೂ ತಪ್ಪಲ್ಲ. ಆದರೆ ಈಗ ನೀನು ಸುಖಪಡ್ತಾ ಇದೀಯಾ ?' ಎಂದೆ.

'ಅದೇ ಕಷ್ಟ, ಕಿಟ್ಟು, ಸುಖ ಅನ್ನೋದು ನಂಗೆ ಗೊತ್ತೇ ಇಲ್ಲ. ಈಗ ಒಳ್ಳೇ ಕೆಲಸ ಸಿಕ್ಕಿದೆ. ಕೈಯಲ್ಲಿ ದುಡ್ಡಿದೆ. ಕಳೆದ ತಿಂಗಳು ಪೂರ್ತಿ ರೂಮಲ್ಲೇ ಕೂತು ದುಡ್ಡು ಕೂಡಿಟ್ಟೆ. ನೂರರ ಆರು ನೋಟು ಕೈಗೆ ಬಂದಾಗ ಖರ್ಚು ಮಾಡೋಕೇ ಮನಸ್ಸು ಬರಲಿಲ್ಲ. ಅದೂ ಅಲ್ಲದೆ ನೂರಾರು ಕನಸು ಕಂಡಿದ್ದ ನನಗೆ ಯಾವ ಕನಸಿಗೆ ಮೊದಲು ಹಣ ಹಾಕಲಿ ಎಂದು ತೊಂದರೆಯಾಯಿತು. ಇಂದು ಸಂಜೆ ಇದ್ದಕ್ಕಿದ್ದ ಹಾಗೆ ಅದನ್ನೆಲ್ಲಾ ಸುಖಕ್ಕೆ ಖರ್ಚು ಮಾಡಬೇಕು ಎನಿಸಿತು. ತಕ್ಷಣ ನನಗೆ ಹೊಳೆದದ್ದು ಎರಡೇ. ಒಂದು ಬಟ್ಟೆ ತಗೊಳೋದು, ಎರಡು ಗುಂಡು ಹಾಕೋದು. ಆದರೆ ಸುಖಪಡೋದು ಹ್ಯಾಗೆ ? ....ಬಹುಶಃ ನೀನು ಸಿಕ್ದೇ ಹೋಗಿದ್ರೆ ನಾನು ಒಂದೆರಡು ಪ್ಯಾಕ್ ಸಿಗರೇಟು ಕೊಂಡ್ಕೊಂಡು ವಾಪಾಸ್ ರೂಮಿಗೆ ಹೋಗ್ತಾ ಇದ್ದೆ. ಈಗೇನೂ ದುಃಖ ಇಲ್ಲ ಅನ್ನು: ಆದರೂ ಮನಸ್ಸು ಒಂದು ಥರಾ............'

ಸೋಮು ತನ್ನ ಬಗ್ಗೆ ಎಂದೂ ಹೇಳಿಕೊಂಡವನಲ್ಲ. ನಾನು ಕೆದಕಿ ಕೇಳುವಂಥ ಕುತೂಹಲವನ್ನೂ ಅವನು ಹುಟ್ಟಿಸಿಯೂ ಇರಲಿಲ್ಲ. ಎಂಜಿನಿಯರಿಂಗ್‌ನಲ್ಲಿ ಒಂದೆರಡು ಬಾರಿ ಫೇಲಾದ. ಆಮೇಲೆ ರ್‍ಯಾಂಕುಗಳನ್ನೇ ಗಿಟ್ಟಿಸಿದ ಎಂದಿಷ್ಟೇ ಗೊತ್ತು. ಎಂಜಿನಿಯರಿಂಗ್ ಓದುವಾಗ ಆತ ಇದ್ದ ರೂಮಿನ ಪಕ್ಕದಲ್ಲೇ ನಾನಿದ್ದುದು ಆತನ ಪರಿಚಯ, ಮುಂದೆ ಒಂದು ರೀತಿಯ ಸ್ನೇಹಕ್ಕೆ ಕಾರಣವಾಯಿತು. ಆದರೆ ಆತ ಮನಸ್ಸಿನ ಕತ್ತಲೆಯಲ್ಲಿ ಏನಾದರೂ ಇಟ್ಟುಕೊಂಡಿರಬಹುದೆಂಬುದು ನನಗೆ ಹೊಸತು.

ಇನ್ನೊಂದು ಬಿಯರ್ ಹೇಳೋಣ ?' ಎಂದೆ.

'ವ್ಹಿಸ್ಕಿ ಬೇಕು' ಎಂದ—ಹೋಟೆಲಿನಲ್ಲಿ ಎಲ್ಲ ಬಗೆಯ ತಿನಿಸನ್ನೂ ರುಚಿ ನೋಡಬೇಕೆಂಬ ತಿಂಡಿಪೋತನಂತೆ.

'ನಾನು ವ್ಹಿಸ್ಕಿ ಕುಡಿಯಲ್ಲ' ಎಂದೆ.

ಅವನಿಗೆ ರೇಗಿತು. 'ಥುತ್ ತರಲೆ ನೀನು. ಬಿಯರ್ ಕುಡಿದರೆ ಪರವಾಯಿಲ್ಲ, ವ್ಹಿಸ್ಕಿ ಕುಡಿದರೆ ನಿನ್ನ ಜನಿವಾರ ಮೈಲಿಗೆಯಾಗುತ್ತಾ' ಎಂದ. 'Shut up' ಎಂದೆ.

ಗಬಕ್ಕನೆ, ಒಂದು ತುಂಡು ಮಾಂಸ ಬಾಯಿಗೆ ಎಸೆದುಕೊಂಡು. ಅದು ಗಂಟಲಲ್ಲಿ ಸಿಕ್ಕಿಕೊಂಡಿತು. ಬಿಯರ್ ಕುಡಿದು ಕೆಳಗೆ ತಳ್ಳಿದ. ನಾನು ಬಯ್ದಿದ್ದು ಮರೆತೇಹೋದವನಂತೆ ನಕ್ಕ.

'ಹಳ್ಳೀಲಿ ನನ್ನಪ್ಪ ದೇವಸ್ಥಾನದ ತೀರ್ಥ ಎಲ್ರಿಗೂ ಹಂಚ್ತಾನೆ. ದಕ್ಷಿಣೆ ತಗೊಂಡು ಸೊಂಟಕ್ಕೆ ಸಿಕ್ಕಿಸಿಕೊಳ್ತಾನೆ. ಇಲ್ಲಿ, ಆ ಕುರ್ಚಿ ಮೇಲೆ ಕೂತ ಕೆಂಪು ಮುಖದ ಆಸಾಮಿ ನಮಗೆ ಈ ತೀರ್ಥ ಹಂಚ್ತಾ ಇದಾನೆ. ಅವನನ್ನ 'ಫಾದರ್ ಇಮೇಜ್' ಅನ್ನಬಹುದೆ ?' ಎಂದ.

'ಎಲಾ ಬಡ್ಡೀಮಗನೆ. ಕುಡಿದ ಹಾಗೂ ಬುದ್ಧಿವಂತನಾಗ್ತಾ ಇದೀಯಲ್ಲ' ಎಂದೆ.

'ನಾನೂ ಸೈಕಾಲಜಿ ಓದಿದೀನಿ, ಮರಿ, ನಿನ್ನ ಹಾಗೆ ಚೀಪ್ ಫಿಕ್ಶನ್ ಅಲ್ಲ. ನಂದು ಸೈಂಟಿಫಿಕ್ ಮೈಂಡ್. ನಾನು ಒಂದೆರಡು ಬಾರಿ ಫೇಲಾದೆ ಅಂತ ನಾನು ದಡ್ಡ ಅಂತ ತಿಳಿದೆಯಾ ?...ನನ್ನ ಪೂಜಾರಪ್ಪನೂ ಅದೇ ತಿಳಿದಿದ್ದ. ತಮಾಷೆ ಅಂದರೆ, ನಾನೂ ಹಾಗೆ ತಿಳಿದಿದ್ದೆ. ಅಪ್ಪನ ತರ ಪಾಣಿ ಪಂಚೆ ಉಟ್ಕೊಂಡು, ಪಿಳ್ಳೆ ಜುಟ್ಟು ಬಿಟ್ಕೊಂಡು, ಪೂಜೆ ಮಾಡ್ಕೊಂಡು, ಬೆಳಿಗ್ಗೆ ಎದ್ದು ಸೆಗಣಿ ತೆಕ್ಕೊಂಡು, ಅಪ್ಪ ಹೇಳಿದ ಹಾಗೆ, ಅಪ್ಪನ ಹೆಂಡತಿ ಹೇಳಿದ ಹಾಗೆ ಕೇಳ್ಕೊಂಡು ಇರೋದೇ ಚೆನ್ನ ಅಂತ ಆವಾಗೆಲ್ಲ ಅನ್ನಿಸ್ತಾ ಇತ್ತು. ಹಾಗೆ ಮಾಡ್ತಿದ್ನೋ ಏನೋ. ಆದರೆ ಒಂದು ದಿನ ನನ್ನ ಚಿಕ್ಕ ತಾಯಿ ಎದುರು ಅಪ್ಪ ನನ್ನ ಒದ್ದ. ನಾನು ಬೆಂಗಳೂರಲ್ಲಿ ಓದ್ತಾ ಇರೋದೇ ಸುಳ್ಳು ಎಂದ. ಊರೆಲ್ಲ ಅದೇ ಮಾತು ಹೇಳಿ ಜನ ನನ್ನ ಗೇಲಿ ಮಾಡೋ ಹಾಗೆ ಆಯ್ತು. ದುಡ್ಡು ಕೊಡೋಲ್ಲ ಅಂದ. ಜಮೀನಿನಲ್ಲಿ ಒಂದು ಚೂರೂ ಸಿಕ್ಕೋಲ್ಲ ಅಂದ. ಅವತ್ತೇ, ಇನ್ನು ಮೇಲೆ ನಿನ್ನ ಮೂತಿ ನೋಡೋಲ್ಲ ಎಂದು ಮನೆ ಬಿಟ್ಟೆ'.

ಯಾರದ್ದಾದರೂ ಜೀವನ ಚರಿತ್ರೆ ಕೇಳುವುದೆಂದರೆ ನನಗೆ ಬೇಸರ. ಏನೋ ಗೋಳು, ಇಲ್ಲವೇ ಜಂಭ. ಹೀಗೆ ನನ್ನ ಮಟ್ಟಿಗೆ ಅರ್ಥಹೀನವಾಗುವ ಬೇರೊಬ್ಬನ ಬದುಕನ್ನು ಕೇಳುವುದರಲ್ಲಿ ನನಗೆ ಎಂದೂ ಇಷ್ಟವಿಲ್ಲ. ಇನ್ನಷ್ಟು ಬಿಯರ್ ಕುಡಿದೆ. ಸೋಮುವಿನ

ಮಾತು ಕೇಳುತ್ತಾ ಹೋದಂತೆ ಮಲತಾಯಿ ಆ್ಯಂಗಲ್ಲಿನ ಹಳೆಯ ಕತೆ ಓದಿದಂತಾಗು ತ್ತಿತ್ತು. ಅದೂ ಬಿಯರ್ ಕುಡಿದು ನಾಲಗೆ ತಡೆಯುತ್ತಿತ್ತು. ಒಮ್ಮೊಮ್ಮೆ ಧ್ವನಿ ಏರಿಸಿ ಇಳಿಸಿ ತನ್ನ ಕಥೆಯನ್ನು ಒಳ್ಳೇ ಮೆಲೋಡ್ರಾಮಾ ಮಾಡುತ್ತಿದ್ದಾನೆ ಎನಿಸಿತು. ಆದರೆ ಇನ್ನೊಂದು ಮಗ್ಗುಲಲ್ಲಿ ಅವನ ಈ ಸಂಜೆಯ ವರ್ತನೆಗೆ ಏನೋ ಅರ್ಥ ಹೊಳೆ ದಂತಾಗಿ ಕಿವಿ ಕೊಟ್ಟೆ.

'ಕಿಟ್ಟು ನೀನು ಅದೃಷ್ಟ ಮಾಡಿದೀಯ' ಎಂದ. ಅದ್ಯಾವುದಪ್ಪ ಎಂದು ಕೇಳುವ ಮನಸ್ಸಾದರೂ ಸುಮ್ಮನೇ ಕೂತೆ. ಆದರೂ ಒಂದು ಒಂದೂವರೆ ಗಂಟೆಯಾದರೂ ಪ್ಲೇಟಿನಲ್ಲಿ ಇನ್ನೂ ಪಲಾವ್ ಇರುವುದು ಸರಿ ಎನ್ನಿಸಲಿಲ್ಲ. 'ಅಯ್ಯಾ ಸೋಮಶೇಖರ, ನಿನ್ನ ಆತ್ಮ ವೃತ್ತಾಂತ ಇರಲಿ, ಮೊದಲು ಅದನ್ನು ಮುಗಿಸು' ಎಂದೆ.

ಮತ್ತೊಂದು ತುಂಡಿಗೆ ಫೋರ್ಕ್‌ನಲ್ಲಿ ಚುಚ್ಚಿ ಬಾಯಿಗೆ ಒಗೆದ. ಆಗಿನಿಂದಲೂ ಆತ ಅದನ್ನು ಅಗಿಯದೇ ನುಂಗುತ್ತಿದ್ದ—ಮಾತ್ರೆ ನುಂಗಿದ ಹಾಗೆ. ಬ್ರಾಹ್ಮಣ ಪೂಜಾರಿಯ ಮಗ ಮಾಂಸ ತಿನ್ನುತ್ತಿದ್ದಾನೆ ಎನಿಸಿದಾಗ ಆ ದೃಶ್ಯ ತುಂಬಾ ಮೋಜಾಗಿ ಕಂಡಿತು. ನೈಫ್, ಫೋರ್ಕ್ ಉಪಯೋಗಿಸುವುದೂ ಸೋಮುವಿಗೆ ತಿಳಿದಿರಲಿಲ್ಲ. ಬಿಯರ್ ಕುಡಿಯುವಾಗ ಶಬ್ದಮಾಡುತ್ತಿದ್ದ.

'ನೀನು ಹಾಸ್ಯ ಮಾಡಿದ್ರೂ ನಿಜವಾದ ಫ್ರೆಂಡು ನೀನೊಬ್ನೇ. ಅದಲ್ಲ, ತಮಾಷೆ ಅಂದ್ರೆ ನಾನು ನನ್ನ ಸೋದರ ಮಾವನ ಮನೆಯಲ್ಲಿ ಶಾಲೆಯಲ್ಲಿ ಸಂಬಳದ ಮೇಲೆ ಕೆಲಸ ಮಾಡಿದೆ. ಸಗಣಿ ತೆಗೆದೆ. ಗೇಣಿ ಗದ್ದೆ ಮಾಡಿ ಕಾಲೇಜು ಫೀ ತುಂಬಿದೆ. ಆಮೇಲೆ ಎಲ್ಲೂ ಫೇಲಾಗಲಿಲ್ಲ. ನನ್ನಪ್ಪನ ಯೋಚ್ನೇನೂ ಬರಲಿಲ್ಲ.' ಎಂದು ಕೂತ.

'ಅದ್ಸರಿ, ಈಗ್ಯಾಕೆ ನಿನ್ನಪ್ಪನ ಯೋಚನೆ ? This is the time to forget everything'.

'ಇಂದು ಸಂಜೆಯೆಲ್ಲಾ ನನಗೆ ಕಾಡ್ತಾ ಇರೋ ಪ್ರಶ್ನೆ, ಅದೇ. ಇಷ್ಟು ದಿನ ಬೇಡ ವಾಗಿದ್ದ ಅಪ್ಪ ಇಂದು ಯಾಕೆ ಬಂದ ಅಂತ. ಮನಸೆಲ್ಲ ಬುಗಬುಗ ಅಂತ ಹತ್ತಿಕೊಂಡು ಉರಿಯುವಂತಾಗಿ ರೂಮಿನಿಂದ ಓಡಿದೆ. ನಾನು ಕೆಲಸಕ್ಕೆ ಸೇರಿದ ಒಂದು ವಾರಕ್ಕೆ ನನ್ನಪ್ಪನಿಂದ ಒಂದು ಕಾಗ್ದ ಬಂತು. ಮೊದಲು ಆಶ್ಚರ್ಯ ಆಯ್ತು. 'ಕೆಲಸಕ್ಕೆ ಸೇರಿದ್ದೀಯಂತಲ್ಲಾ. ತಿಂಗಳಾ ಒಂದಿಷ್ಟು ದುಡ್ಡು ಕಳಿಸುತ್ತಾ ಇರು' ಅಂತ ಅಷ್ಟೆ ಇತ್ತು. ಒಂಥರಾ ಅಸಹ್ಯವಾಯಿತು. ರೇಗಿಬಿಟ್ಟು ಒಂದು ದಮ್ಡಿ ಕೊಡಲ್ಲ ಅಂತ

ಉತ್ತರ ಬರೆದೆ. ಆಮೇಲಿಂದ ನನಗೆ ಕೆಲಸ ಸಿಕ್ಕಿದ ಸಂತೋಷಾನೇ ಹೊರಟು ಹೋಯಿತು........ ಅಂದ. ಅಮ್ಮನಿಗೆ ಗೋಳುಹೊಯ್ದು ಬಾವಿಯಲ್ಲಿ ಬೀಳುವಂತೆ ಮಾಡಿದ, ಆರು ವರ್ಷದ ನನ್ನ ಮೇಲೆ ಸೆಗಣಿ ಬುಟ್ಟಿ ಹೊರಿಸಿದ, ಮಂತ್ರ ಕಲಿಸೋಕೆ ಹುಣಸೆ ಬರಲು ಹುಡಿ ಮಾಡಿದ ಎಂದೆಲ್ಲಾ ಮಧ್ಯೆ ಮಧ್ಯೆ ಅವಸರವಸರದಿಂದ ಗ್ಲಾಸಿನಲ್ಲಿದ್ದುದನ್ನು ಕುಡಿಯುತ್ತ ಹೇಳಿದ. ನಾನು ದುಡ್ಡು ಕಳಿಸ್ದೇ ಇದ್ದುದು ಸರೀನಾ ? ಎಂದು ಕೇಳಿದ.

ನೀನೇ ನಿರ್ಧರಿಸಬೇಕು ಅದನ್ನ ಎಂದೆ. ಅವನಿಗೆ ನಿರಾಸೆಯಾಯಿತು. ಅವನು ನಿಜಕ್ಕೂ ಹೊಯ್ದಾಟದಲ್ಲಿದ್ದ. ಅಪ್ಪನನ್ನು ಎದುರಿಸಿ ಬದುಕಲು ಕಲಿತ ವ್ಯಕ್ತಿಗೆ ಈಗ ದುಡ್ಡು ಕೇಳಿದ್ದು ದೊಡ್ಡ ಸವಾಲಾದ್ದು ನನಗೆ ಆಶ್ಚರ್ಯವಾಯಿತು. ನೈತಿಕವಾಗಿ ಆತ ಈ ತೊಳಲಾಟಕ್ಕೆ ಸಿಕ್ಕಿದ್ದು ನನಗೆ ಅರ್ಥವಾಗಲಿಲ್ಲ. 'ನೀನು ಹೇಳುವ ರೀತಿ ನೋಡಿದರೆ ನಿನ್ನ ಅಪ್ಪನಿಗೆ ನಿನ್ನ ದುಡ್ಡು ಕೇಳುವ ಹಕ್ಕೇ ಇಲ್ಲ' ಎಂದು ಅವನ ಸಮಾಧಾನಕ್ಕೆ ಅಂದೆ.

ಆಗಲೂ ಅವನಿಗೆ ಸಂತೋಷವಾದಂತೆ ಕಾಣಲಿಲ್ಲ.

'ಕಿಟ್ಟು, ಒಂದು ಕೆಲಸ ಮಾಡೋಣ' ಎಂದ.

'ಏನು ?'

'ಒಂದು ಬಾಟ್ಲ್ ವ್ಹಿಸ್ಕಿ ಕೊಂಡ್ಕೊಂಡು ನಿನ್ನ ಮನೆಗೆ ಹೋಗೋಣ. ಹ್ಯಾಗೂ ಒಬ್ನೇ ಇದ್ದು ಸುಖಪಡ್ತಾ ಇದೀಯ. ಒಂದಿನ ನಾನೂ ಅಲ್ಲೇ ಮಲಗ್ತೀನಿ. ಚೆನ್ನಾಗಿ ಪ್ರಜ್ಞೆ ತಪ್ಪೋವರೆಗೆ ಕುಡಿಯೋಣ' ಎಂದ. ತಕ್ಷಣವೇ 'ಅದ್ಯಾಕೆ ಒಬ್ನೇ ಒಂದು ಮನೆ ಮಾಡ್ಕೊಂಡಿದೀಯೆ ?' ಎಂದ.

'ಆಗಾಗ ಹುಡುಗೀರ್ನ ಕರಕೊಂಡು ಹೋಗೋಕೆ ಅನುಕೂಲ ಅಂತ' ಎಂದೆ.

ಸೋಮು ನಂಬಿಕೊಂಡ. 'ಅಂತೂ ನೀನು ಯಾವ ಯೋಚ್ನೇನೂ ಇಲ್ದ ಲಕ್ಕಿ ಬಾಯ್' ಎಂದ. ಎಷ್ಟು ಮುಗ್ಧ ಈ ಎಂಜಿನಿಯರ್ ಎಂದುಕೊಂಡೆ.

ವ್ಹಿಸ್ಕಿ ಬಾಟ್ಲ್ ಪ್ಯಾಕ್ ಮಾಡಿಸಿಕೊಂಡು ಕಾಂಟಿನೆಂಟಲ್ ಬಿಟ್ಟಾಗ ಹನ್ನೊಂದು.

ಹಾಲಿನಲ್ಲಿ ಟೀಪಾಯ್ ಮೇಲೆ ಎರಡು ಗ್ಲಾಸ್ ತಂದಿಟ್ಟೆ. ಮನೆಯ ಸುತ್ತಲೂ ಸೋಮು ಕಣ್ಣಾಡಿಸಿ 'ನಿಜಕ್ಕೂ ನಿನಗೆ ಗರ್ಲ್ ಫ್ರೆಂಡ್ಸ್ ಇದ್ದಾರಾ ?' ಎಂದ. ಗುಂಡಿನಿಂದ ಅವನ ಧ್ವನಿ ಭಾರವಾಗಿತ್ತು. ಶಬ್ದಗಳು ಸ್ವಲ್ಪ ವಿಚಿತ್ರ ಧಾಟಿಯಲ್ಲಿ ಪ್ರಯಾಸದಿಂದ ನಾಲಗೆಯಲ್ಲಿ ಹೊರಳುತ್ತಿತ್ತು.

ಗ್ಲಾಸಿಗೆ ವ್ಹಿಸ್ಕಿ ಬಗ್ಗಿಸುತ್ತಾ 'ಬೇಕಾದಷ್ಟಿದ್ದಾರೆ. ಅನುರಾಧ, ಅನುಪಮ, ಅನಾರ್ಕಲಿ, ಅಲಕನಂದಾ, ರೀಟಾ, ಜೊಸೆಫೀನ್, ಸ್ವಪ್ನಾ, ಸ್ವಯಂಪ್ರಭಾ....' ಎಂದು ಹೇಳುತ್ತಲೇ ಇದ್ದೆ.

'ಅಷ್ಟೆಲ್ಲಾ ಜನ ಇಲ್ದೇ ಇದ್ರೂ, ಇದ್ದಾರೆ ಅಂತ ತಿಳ್ಕೊಳ್ಳೋದು egoಕ್ಕೆ ಒಳ್ಳೇದು ಅಲ್ವಾ' ಎಂದ.

ಗುಂಡಿನ ಅಮಲಿನಲ್ಲೂ ಸೋಮು ಒಮ್ಮೊಮ್ಮೆ ಆಶ್ಚರ್ಯಕರ ತರ್ಕದಿಂದ ಮಾತಾಡುತ್ತಿದ್ದ.

'ಹೋಗಲಿ, ನಿನ್ನ ಅಪ್ಪನ ವಿಷಯ ಹೇಳು'.

'ಅದು ಮುಗಿಯಿತಲ್ಲ. ಬಿಡು. ಈಗ ಪ್ರಜ್ಞೆ ತಪ್ಪಬೇಕು' ಎಂದು ಎರಡು ಮೂರು ಔನ್ಸಿನಷ್ಟು ನೀಟ್ ವ್ಹಿಸ್ಕಿ ಗಟಕ್ಕನೆ ಕುಡಿದ.

ಯಾರೋ ಬಾಗಿಲು ತಟ್ಟಿದಂತಾಯಿತು. ಸೋಮು ಕಸಿವಿಸಿಯಿಂದ ಒದ್ದಾಡಿದ. ನಾನು ನಿಧಾನವಾಗಿ ಗ್ಲಾಸನ್ನು ಕೆಳಗಿಟ್ಟೆ.

ಬಾಗಿಲು ತೆಗೆದಾಗ ಎದುರು ಮನೆಯ ಚಂದ್ರಯ್ಯ. ಬಿಯರ್, ವ್ಹಿಸ್ಕಿ ವಾಸನೆ ಮೂಗಿಗೆ ಬಡಿದಾಗ ತುಸು ತಬ್ಬಿಬ್ಬಾದ. ಒಂದು ಹೆಜ್ಜೆ ಹಿಂದೆ ನಿಂತು. 'ಸಾರಿ ಸಾರ್, ಡಿಸ್ಟರ್ಬ್ ಮಾಡಿದ್ರೆ. ಏನೋ ನಿದ್ದೇನೆ ಬರಲಿಲ್ಲ ನೋಡಿ. ಮನೇವ್ರು ಇಲ್ಲ. ನಿಮಗೆ ಅದರ ಅನುಭವ ಇಲ್ಲ. ಇದ್ದಾಗ ಒಂದು ಥರಾ, ಇಲ್ದೇ ಇದ್ದಾಗ ಒಂದು ಥರಾ. ಹಾಗೇ ನಿಮ್ಮ ಮನೇಲಿ ದೀಪ ಕಾಣ್ತು. ಈ ವಾರದ ಬ್ಲಿಟ್ಜ್ ಏನಾದ್ರೂ ತಂದಿದ್ದೀರೇನೋ ಅಂತ ಬಂದೆ. ಯಾರೋ ಫ್ರೆಂಡ್ಸ್ ಬಂದ ಹಾಗಿದೆ....' ಎಂದು ಹೇಳುತ್ತಲೇ ಇದ್ದ.

ನನ್ನ ತಲೆ ನಿಮಿಷಕ್ಕೆ ಹತ್ತು ಸುತ್ತಿನ ವೇಗದಲ್ಲಿ ತಿರುಗುತ್ತಿತ್ತು. ಕಾಲು ಸ್ವಲ್ಪ ಬಲ ಕಳಕೊಂಡಿತ್ತು. ಆತ ಮಾತು ಮುಗಿಸುವ ಸೂಚನೆಯೇ ಇಲ್ಲ ಎಂದು ಬಯ್ದುಕೊಳ್ಳು ತ್ತಿದ್ದೆ. ಕೂಡಲೇ ಅಲ್ಲಿದ್ದ ಹಳೆಯ ಪೇಪರನ್ನು ಅವನ ಕೈಗಿಟ್ಟು 'ಇದೇ ತುಂಬಾ ಲೇಟೆಸ್ಟು ನೋಡಿ. ಡೆಲ್ಲೀಲಿ ಕೂಡಾ ರಿಲೀಸ್ ಆಗಿಲ್ಲ' ಎಂದು, ಅವನ ಮುಖಕ್ಕೆ ಬಾಗಿಲು ಬಡಿದು ಒಳಗೆ ಬಂದೆ.

ಸೋಮು ನಾಪತ್ತೆ. ನನಗೆ ನಿಜವಾಗಿಯೂ ಗುಂಡು ತಲೆಗೆ ಹೋಗಿದೆ ಅಥವಾ ಸೋಮು ಇಲ್ಲಿ ಬಂದಿರಲೇ ಇಲ್ಲ ಅಥವಾ ಸೋಮು ನನ್ನ ಯೋಚನೆಯಲ್ಲಿ ಮಾತ್ರ ಇದ್ದ ಅಥವಾ ಬಾಗಿಲು ತಟ್ಟಿದ್ದು ತನ್ನ ಅಪ್ಪ ಎಂದು ಎಲ್ಲೋ ಅಡಗಿದ್ದಾನೆ ಎಂದು ಯೋಚಿಸುತ್ತ, ಕೊನೆಯದೇ ಸರಿ ಎಂದು ತೀರ್ಮಾನಿಸಿ, ತುಸು ಜೋಲಿ ಹೊಡೆ ಯುತ್ತ ಟೇಬಲ್ಲಿನ ಕೆಳಗೆ, ರೂಮಿನ ಮಂಚದ ಕೆಳಗೆ, ಬಾಗಿಲ ಪರದೆಯ ಹಿಂದೆ, ಅಡಿಗೆ ಮನೆಯ ಮೂಲೆ ಮೂಲೆ, ಬಾತ್ ರೂಮು ಎಲ್ಲಾ ಒಂದೊಂದಾಗೇ ಶೋಧಿಸಿದೆ. ಸೋಮು ಕಾಣಲಿಲ್ಲ. ಟೀಪಾಯ್ ಮೇಲೆ ಒಂದೇ ಒಂದು ಗ್ಲಾಸಿತ್ತು. ನನಗೆ ನಿಜವಾಗಿಯೂ ಗುಂಡು ತಲೆಗೆ ಹೋಗಿದೆ ಎಂದುಕೊಂಡೆ. ಸೋಮು ಎಲ್ಲಾ ದರೂ ಓಡಿಹೋದನೇ, ಮುಂದಿನ ಬಾಗಿಲಲ್ಲಿ ನಾನು ನಿಂತೇ ಇದ್ದೆ. ಅನುಮಾನ ಬಂದು ಹಿತ್ತಲ ಬಾಗಿಲು ತೆರೆದೆ.

ಕುಕ್ಕುರುಗಾಲಿನಲ್ಲಿ ಮೋರಿಯ ಅಂಚಿನ ಮೇಲೆ ಕೂತು, ಎಡಗೈಯಲ್ಲಿ ವ್ಹಿಸ್ಕಿ ಗ್ಲಾಸನ್ನು ಹಿಡಿದು, ಬಲಗೈಯನ್ನು ಹೊಟ್ಟೆಗೆ ಅಮುಕಿಕೊಂಡು ಸೋಮು 'ವೆಕ್ ವೆಕ್ ವ್ಯಾಕ್' ಎಂದು ಒಂದೇ ಸಮನೆ ಮೋರಿಗೆ ವಾಂತಿ ಮಾಡಿಕೊಳ್ಳುತ್ತಿದ್ದ. ವಾಂತಿಯಲ್ಲಿ ಉಂಡೆ ಉಂಡೆಯಾಗಿ ಮಾಂಸದ ತುಂಡುಗಳು 'ಪಳಪಳನೆ' ಮೋರಿಗೆ ಬೀಳುತ್ತಿತ್ತು.

ಸೋಮು ಬೆಳಿಗ್ಗೆ ಹತ್ತು ಗಂಟೆಗೆ ಎದ್ದ. ಉತ್ಸಾಹ ನಟಿಸಿದ. ಚಟುವಟಿಕೆಯಿಂದ ಎದ್ದು ಬಾತ್ ರೂಮಿಗೆ ಹೋಗಿ ಮುಖ ತೊಳೆದ.

'ಭಾಳ ಚೆನ್ನಾಗಿತ್ತು ಕಣಯ್ಯ, ನಿನ್ನೆ' ಎಂದ. ನಾನು ನಸ್‌ಕಾಫ್ ಮಾಡಿಕೊಟ್ಟೆ. ಕುಡಿಯುತ್ತಾ—

'ಸ್ವಲ್ಪ ತಲೆನೋವು ಬಂದುಬಿಟ್ಟಿದೆ. ಬಾಯಿ ಸಪ್ಪಗಾಗಿದೆ' ಎಂದ.

'ಅಪ್ಪನ ವಿಷಯ ಏನು ತೀರ್ಮಾನಕ್ಕೆ ಬಂದೆ ?' ಎಂದೆ. 'ಓಹ್' ಎಂದ. ಮಾತಾಡದೆ

ಒಂದು ನಿಮಿಷ ಕಣ್ಣು ಪಿಳಿಪಿಳಿ ಬಿಟ್ಟ. 'ನಿಜ ಏನು ಗೊತ್ತಾ? ನಿನ್ನೆ, ಊರಿಗೆ ೧೫೦ ರೂ. ಮನಿ ಆರ್ಡರ್ ಮಾಡಿದೆ. ಪ್ಯಾಂಟಲ್ಲಿ ಅದರ ರಶೀದಿ ಇದೆ ನೋಡು. ಹಾಗೆ ಹಣ ಕಳಿಸಿದ ಮೇಲೆ ಬೇಜಾರಾಯ್ತು. ಒಂದೂವರೆ ತಿಂಗಳು ಕಳಿಸಬಾರದು ಅಂತ ಒದ್ದಾಡಿದೆ. ನಿನ್ನೆ ಕಳಿಸಿದ ಮೇಲೆ ಅದು ನಿಲ್ಲಬಹುದು ಅಂತ ಇದ್ದೆ. ಸುಳ್ಳಾಯ್ತು ನೋಡು. ಹಣ ಕಳಿಸಿದ್ದು ತಪ್ಪು ಅಂತ ನಿಂಗೆ ಅನ್ಸೊಲ್ವ?'

ನನ್ನ ಮಾತು ಕಟ್ಟಿಹೋಗಿತ್ತು.

ನಾನು ಕೇವಲ ಬೆರಗಾಗಿದ್ದೆ.

ಏಳು ಕವನಗಳು

ಕೆ. ಎನ್. ಶಿವತೀರ್ಥನ್

ಒಂದು

ನೀ—
ತೊಟ್ಟಿಕ್ಕುವ ಪ್ರಾಯದ ಮದದ ಉನ್ಮಾದವೇ,
ಕನಸಿನ ಕಣ್ಣೇ,
ಉಸಿರ ಬಸಿರಿನ ಹಣ್ಣೇ,
ಇಲ್ಲಸಲ್ಲದ ಸಮಸ್ಯೆಯ ಸರಕೇ,
ವ್ಯವಸ್ಥೆಯಲ್ಲಿ ಅವ್ಯವಸ್ಥೆಯ ಬಿರುಕೇ,
ಆದರ್ಶದ ಕುರೂಪೇ ?

ಇಲ್ಲ—
ವ್ಯಕ್ತಿ ಸತ್ವದ
ತಿಳಿವಿನ ಪ್ರಜ್ಞೆಯು, ನಯ ನೀಯತ್ತಿನ
ಅನುಭವದ ಎಲ್ಲೆಯು
ಬಲ್ಲೆನೆನ್ನುವ ಬಲ್ಮೆಯು
ಬಾಳ್ದೆನೆನ್ನುವ ನಲ್ಮೆಯು
ಅಪರೂಪ ಸ್ವರೂಪವೇ ?

ಎರಡು

ನನ್ನಲ್ಲಿ ನಿನ್ನಲ್ಲಿ
ಏಕಿಷ್ಟು ಉದ್ರೇಕದತಿರೇಕ ತಾರತಮ್ಯ
ಅದೆ ಕಾರಣ—ಬದುಕು
ಬಹುತೇಕ ನರಕ—ಏಕಲ್ಲ ರಮ್ಯ ?

ತಕೋ ಕೊಂಚ ಜೇಡಿಮಣ್ಣು
ತೇವಿಸು ಮಿದ್ದಿಸು
ನನ್ನ ನಿನ್ನ ಒಂದೊಂದು ಆಕಾರ ಪ್ರತಿಕರಿಸು !
ಅದ ಚೆಚ್ಚಿ ಪುಡಿ ಪುಡಿ ಮಾಡು
ಮತ್ತದಕೆ ಕೊಂಚ ನೀರ ಹನಿಸು

ಹಾಳಟ್ಟು ಅದ
ಯಥಾಮತಿ ಮತ್ತೆ ಮಿದ್ದಿ ತಿದ್ದಿ
ನನ್ನ ನಿನ್ನ ಒಂದೊಂದು ಮೂರ್ತಿಯ ಪುನರ್ರಚಿಸು.

ಆಗ ಕಂಡೆಯಾ—
ನನ್ನ ಮಣ್ಣಿನಲಿ ನಿನ್ನದೊಂದಿಷ್ಟು ಅಂಶದ ಕುರುಹು
ನಿನ್ನ ಮಣ್ಣಿನಲಿ ನನ್ನದೊಂದಿಷ್ಟು ಸತ್ವದ ಇರವು.

ಇದ್ದಾಗ—ಒಂದೆ ಬೆಸುಗೆಯಲಿ ಹಿಡಿಮೈಯಾಗಿ ಸುಖಿಸಿ ನಿದ್ರೆ,
ಸಾಯುವ ಮುಂಚೆ ಸಂಚನು ಬಿಟ್ಟು ಮಿಂಚದೆ ಇದ್ರೆ—
ಆ ಬದುಕದು ಸೊಗಸೆ !

[ಮೂಲ : ಮೇಡಂ ಕೌಸಳ ಒಂದು ಕವನದ ಭಾವಾನುವಾದ]

ಮೂರು

ಬಾಲೆ
ಅಂದು

ಗುಲಾಬಿ ಕಡ್ಡಿಯ ತಂದು
ಗೊಬ್ಬರ ಗೋಡಿಟ್ಟು ಕುಂಡದಲಿ ನೆಟ್ಟಾಗ

ಎಲೆ ಎಲೆಯಾಗಿ ಚಿಗುರಿ
ಮೊಗ್ಗು ಕಚ್ಚಿ

ಹೂ—
ದಳದಳ ಬಿಚ್ಚಿತು.

ಬಿಚ್ಚಿದ ದಳ ದಳ ಕಂಗೊಳಿಸಿ ಉದುರಿತು
ಉದುರುವ ಮುಂಚೆ ಪಕಳೆಗಳ ನಡುವೆ
ಕೂತ ದುಂಬಿ ಮೈದುಂಬಿ ಹಾರಿತು.

ಹೂವಿನ ಸಾರ್ಥಕತೆ ದುಂಬಿಯಲ್ಲೆ ?
ದುಂಬಿಯ ತೃಪ್ತಿಸ್ತರ ಹೂವಿನಲ್ಲೆ ?

ನಾಲ್ಕು

ನೂರ್‌ಜಹನಳ ಕನಸು ಬಿದ್ದು
ಮುಮತಾಜಳ ನೆನಪು ನಿಂದು
ಕಟ್ಟಿತೆ ಮಹಲ—ತಟ್ಟಿತೆ ಎದೆಯ !

ಸುಧೆಯು ಬೆಳುದಿಂಗಳಿಳಿದು
ಹೆಪ್ಪುಗಟ್ಟಿದಂಥ ಶಿಲೆಯು
ಸೂರ್ಯಕಿರಣ ಪ್ರಸರದಲ್ಲಿ
ಹೊತ್ತು ಮೂಡಿ ಹೊತ್ತು ಮುಳುಗಿ
ಪೊತ್ತು ಹೊತ್ತಿಕೊಂಡು ಉರಿಯೆ
ಶಿಲ್ಪಿಹಸ್ತ ಕಡೆಯುತಿರಲು

ಮನದ ಭಾವ ಹಡೆದು
ಸೌಂದರ್ಯವಿಲ್ಲಿ ಕೆಡೆಯಿತೆ ?
ಶ್ರಮ ವಿಶ್ರಮಕ್ಕೆ ಸಂದು ಸಾರ್ಥಕ್ಯ ಪಡೆಯಿತೆ !
ಸಹಜ ಪ್ರೀತಿಗೆ ಆದರ ರೀತಿಗೆ
ಪ್ರತಿಮೆಯಾಯಿತೆ,
ನಿಲಯವಾಯಿತೆ ?

ಐದು

ಹಗಲಿಗೆ
ಯಾರೋ ಬುರುಕಿ ಇಟ್ಟಂತೆ
ಕತ್ತಲು ;

ಜೋಗ್ ಜಲಪಾತದ ಶಕ್ತಿ
ತುಂಬಿಕೊಂಡ ವಿದ್ಯುತ್ ತಂತಿ
ನಿಯಂತ್ರಿಸುವ
ತತ್ತರಿಸುವ, ಕತ್ತಲ ಒತ್ತರಿಸುವ
ಸ್ವಿಚ್ಚೆ ಆನಿಸಿದೆ—

ತತ್‌ಕ್ಷಣ ತೆಪ್ಪಗಿದ್ದ ಗಾಜ
ಬುರುಡೆ
ಫಕ ಫಕ ಹತ್ತಿ
ಉರಿವ ಮೊದಲು
ಕೋ ಕೊಂಚ ಮಂಕು ಕವಿದ ತೊದಲು ;
ಮಡದಿ ನಿನ್ನಂತೆ
ಇಲ್ಲಸಲ್ಲದ ಚಿಂತೆಯುಲಿ ಮಗ್ನವಾದಂತೆ.
ಮತ್ತೆ

ಬುರುಡೆಗೆ ಬುರುಡೆಯೆ
ಮತ್ತೇರಿದಂತೆ—ಧಾತುಪುಷ್ಟಿ
ಒಟ್ಟೈಸಿ
ಸೋ
ರಿ
ಮತ್ತಲ್ಲೆ ಜಿನುಗಿ
ನಿನ್ನ ಖುಷಿ ಮೊಗವೆ
ಹದದ ನಗೆಯು
ತೊಟ್ಟಂತೆ
ಬಿಟ್ಟಂತೆ
ಫಕ ಫಕ ಬೆಳಕು.

ಆರು

ಕುಡುಗೋಲು
ಕಚಾ ಕಚಾ ಕೊಚ್ಚಿದ್ದ—
ತಟಾ ತಟಾ ತಟ್ಟಿ ಬಿಸುಟಿತು
ಸುತ್ತಿಗೆ
ಒಂದೇ ಪೆಟ್ಟಿಗೆ.
ಕೆಂಪು ಛಿಲ್ಲನೆ ಚಿಮ್ಮಿ
ರಕ್ತ ಕಾರಂಜಿ
ಕೊಂಚಾಟದ ಕೂಸು
ತಾರಾಮಾರ ಎರಚಿದ್ದು
ನರಕುನ್ನಿ ಗುಲಗಂಜಿ.

ಏಳು

ಬಯಕೆ ಭಾವನೆ
ಬವಣೆಗೆ ಒಡ್ಡಿ
ಹಿಂಸೆಗೆ ಸಂದಿದೆ
ಜೀವದ ಬುದ್ಧಿ.

ಮನೋವಿಶ್ಲೇಷಣೆ

ಬಿ. ನಿಜಲಿಂಗಪ್ಪ

ಮನೋವಿಶ್ಲೇಷಣೆಯು, ಮಾನಸಿಕ ಮತ್ತು ನರರೋಗಿಗಳ ಚಿಕಿತ್ಸೆಗಾಗಿ ರೂಪುಗೊಂಡಿತು. ಆದರೆ ಈಗ ಅದು ತನ್ನದೇ ಆದ ಸಿದ್ಧಾಂತಗಳಿಂದ ಒಂದು ಪ್ರತ್ಯೇಕ ಶಾಸ್ತ್ರವೇ ಆಗಿದೆ. ಇದರ ಸ್ಥಾಪಕ ಜರ್ಮನಿಯ ಸಿಗ್ಮಂಡ್ ಫ್ರಾಯ್ಡ್. ಈ ವಾದದ ಮೂಲ ಸಿದ್ಧಾಂತಗಳ ಸ್ಪಷ್ಟೀಕರಣ, ಸಮರ್ಥನೆ, ವಿರೋಧ, ಇತರ ಸಿದ್ಧಾಂತಗಳ ಮಂಡನೆ ಮುಂತಾದ ಚಟುವಟಿಕೆಗಳು ಫ್ರಾಯ್ಡ್‌ನಿಂದ ಪ್ರಾರಂಭವಾಗಿ ಇಲ್ಲಿಯವರೆಗೂ ನಡೆಯುತ್ತಲೇ ಇವೆ. ಈ ವಾದದ ಬಿಸಿ ತಟ್ಟದ ವಿಚಾರಧಾರೆಯೇ ಆಧುನಿಕ ಯುಗದಲ್ಲಿ ಇಲ್ಲ ಎನ್ನಬಹುದು. 'ಸಮ್ಮೋಹನ ಕ್ರಿಯೆಯಿಂದ (hypnotism) ಅಥವಾ ಸ್ವಚ್ಛಂದ ಸಂಭಾಷಣೆಯಲ್ಲಿನ ವಿಚಾರಸಾಹಚರ್ಯದಿಂದ ಅನೇಕ ಹಳೆಯ ಅನುಭವಗಳು ಪುನರುಜ್ಜೀವಗೊಳ್ಳುತ್ತವೆ', ಎನ್ನುವುದನ್ನು ಫ್ರಾಯ್ಡ್ ಕಂಡುಕೊಂಡ. ಅವನ ಪ್ರಕಾರ ಈ ಅನುಭವಗಳ ಮೂಲ ಕಾರಣ ಲೈಂಗಿಕ ಪ್ರವೃತ್ತಿ ಮತ್ತು ಅದನ್ನು ಸುಪ್ತಾವಸ್ಥೆಯಲ್ಲಿ ಹತ್ತಿಕ್ಕುವುದು. ಫ್ರಾಯ್ಡ್‌ನ ಸಿದ್ಧಾಂತವನ್ನು ಮೂರು ಶಬ್ದಗಳಲ್ಲಿ ಹೇಳಬಹುದು : ಬಾಲ್ಯದ ಹತ್ತಿಕ್ಕಲ್ಪಟ್ಟ ಲೈಂಗಿಕತೆ. ಅವನ ವಾದವನ್ನು ಹೀಗೆ ಹೇಳಬಹುದು — ಜೀವನದಲ್ಲಿ ಒಂದು ಮುಖ್ಯ ಪ್ರೇರಕಶಕ್ತಿ ಇದೆ. ಇದು ಮಗುವಿನ ಹುಟ್ಟಿನಿಂದಲೇ ಕಾರ್ಯಶೀಲವಾಗಿರುತ್ತೆ. ಅಲ್ಲದೆ ಇದು ವ್ಯಕ್ತಿಯ ಎಲ್ಲಾ ಚಟುವಟಿಕೆಗಳಲ್ಲೂ ಪರೋಕ್ಷವಾಗಿ ವ್ಯಕ್ತಗೊಳ್ಳುತ್ತದೆ. ಈ ಪ್ರವೃತ್ತಿಗೆ ವ್ಯಾಪಕ ಅರ್ಥವನ್ನು ಕೊಡಲು ಅವನು "ಲಿಬಿಡೊ" (libido) ಎಂಬ ಶಬ್ದವನ್ನು ಬಳಸಿದ್ದಾನೆ. ಮಗುವಿನ ಮನಸ್ಸಿನಲ್ಲಿ ಕೇವಲ "ಇಡ್" (id) ಮಾತ್ರ ವಿಕಸಿತವಾಗಿರುತ್ತೆ. ಆಗ ಹತ್ತಿಕ್ಕುವ ಪ್ರಶ್ನೆಯೇ ಏಳುವುದಿಲ್ಲ. ಆದರೆ ಕ್ರಮೇಣ ಸಾಮಾಜಿಕ ಹಾಗೂ ನೈತಿಕ ಪ್ರಭಾವಗಳಿಂದಾಗಿ 'ಅಹಂ' (Ego) ಮತ್ತು 'ಆದರ್ಶ ಅಹಂ' (Super-ego) ವಿಕಾಸಗೊಳ್ಳುತ್ತವೆ. ಇವುಗಳಿಂದಾಗಿ ಸಹಜ ಲೈಂಗಿಕೇಚ್ಛೆಗಳು ಹತ್ತಿಕ್ಕಲ್ಪಡುತ್ತವೆ. ಈ ಹತ್ತಿಕ್ಕಲ್ಪಟ್ಟ ಇಚ್ಛೆಗಳಿಂದ ಸುಪ್ತಮನಸ್ಸಿನ ನಿರ್ಮಾಣವಾಗುತ್ತದೆ. ಎರಡು ಅಂಶಗಳ

ಆಧಾರದ ಮೇಲೆ ಇಚ್ಛೆಗಳ ದಮನದ ಸಿದ್ಧಾಂತವು ನಿರೂಪಿಸಲ್ಪಟ್ಟಿದೆ. ಮೊದಲನೆಯ ದಾಗಿ ಯಾವುದು ನಿಷಿದ್ಧವೋ ಅದು ಇಚ್ಛೆಯ ವಿಷಯವಾಗುತ್ತದೆ. ಎರಡನೆಯದಾಗಿ ಯಾವುದರಿಂದ ಭಯವಾಗುತ್ತದೋ, ಅದೂ ಸಹ ಇಚ್ಛೆಯ ವಿಷಯವಾಗುತ್ತದೆ. ಪ್ರಬಲ ಇಚ್ಛೆಯ ದಮನವೇ ಜಾಗ್ರತ ಮನಸ್ಸಿನಲ್ಲಿ ಭಯದ ರೂಪವನ್ನು ತಾಳುತ್ತದೆ. ಇವುಗಳ ಆಧಾರದ ಮೇಲೆ ಸಿಗ್ಮಂಡ್ ಫ್ರಾಯ್ಡ್ ತನ್ನ ಸಿದ್ಧಾಂತವನ್ನು ರೂಪಿಸಿದ್ದಾನೆ.

ಮಗುವಿನ ಲೈಂಗಿಕ ಪ್ರವೃತ್ತಿ ಮೊದಲು ತಂದೆ ಅಥವಾ ತಾಯಿ, ಸೋದರ ಅಥವಾ ಸೋದರಿಯ ಕಡೆಗೆ ಪ್ರೇರಿತವಾಗಿರುತ್ತದೆ. ಆದರೆ ನೈತಿಕ ನಿಷೇಧಗಳಿಂದಾಗಿ ಈ ಪ್ರವೃತ್ತಿಯನ್ನು ಹತ್ತಿಕ್ಕಲಾಗುತ್ತದೆ. ಇದರಿಂದ ವ್ಯಕ್ತಿಯ ಮನಸ್ಸಿನಲ್ಲಿ ಕೆಲವು ಕುಂಠಿತ (complex) ಗಳುಂಟಾಗುತ್ತವೆ. ಇಂತಹ ಕುಂಠಿತಗಳಲ್ಲಿ "ಈಡಿಪಸ್ ಕುಂಠಿತ" (Oedipus complex) ಬಹಳ ಮುಖ್ಯವಾದುದು. ಈಡಿಪಸ್ ತನ್ನ ತಂದೆಯನ್ನು ಕೊಂದು ತನ್ನ ತಾಯಿಯನ್ನೇ ಮದುವೆಯಾಗುತ್ತಾನೆ. ಆದುದರಿಂದ ಈ ಪ್ರವೃತ್ತಿಗೆ ಅವನ ಹೆಸರನ್ನೇ ಇಡಲಾಗಿದೆ. ಮಗುವಿನ ಮನಸ್ಸಿನಲ್ಲಿ ವಿಷಮಲಿಂಗಿ ಜನಕರ ಬಗ್ಗೆ ಕಾಮೇಚ್ಛೆಯು, ಸಮಲಿಂಗಿ ಜನಕರ ಬಗ್ಗೆ ಈರ್ಷ್ಯೆಯೂ ಉಂಟಾಗುತ್ತದೆ. ಇವೆರಡನ್ನು ದಮನಗೊಳಿಸಿ ನೈತಿಕವಾಗಿ ಸಾಮಾಜಿಕವಾಗಿ ಸ್ವೀಕಾರಾರ್ಹವಾದ ಪ್ರೇಮ ಹಾಗೂ ಆದರದ ಭಾವನೆಗಳು ವ್ಯಕ್ತಗೊಳ್ಳುತ್ತವೆ. ವ್ಯಕ್ತಿತ್ವದ ಸಂಘಟನೆಯು ದುರ್ಬಲವಾದರೆ ಅಥವಾ ಭಾವನೆಗಳಿಗೆ ಪೆಟ್ಟು ತಗುಲಿದರೆ ಈ ಈಡಿಪಸ್ ಕುಂಠಿತವು ಅನೇಕ ಮನೋ ರೋಗಗಳಿಗೆ ಎಡೆ ಕೊಡುತ್ತದೆ. ಇಷ್ಟಲ್ಲದೆ ಸಾಧಾರಣವಾಗಿ ಸ್ವಸ್ಥವಾಗಿರುವ ಜೀವನದಲ್ಲಿಯೂ ಸಹಿತ ಈ ದಮನಗೊಳಿಸಲ್ಪಟ್ಟ ಬಯಕೆಗಳು ಹಾಗೂ ಕುಂಠಿತಗಳು ವ್ಯಕ್ತಗೊಳ್ಳಲು ಪ್ರಯತ್ನಿಸುತ್ತವೆ. ಆದರೆ ಆದರ್ಶ ಅಹಂನಿಂದ ನಿರ್ಮಿಸಲ್ಪಟ್ಟ ನಿರೋಧಗಳಿಂದಾಗಿ ಇವು ತಮ್ಮ ಸಹಜರೂಪದಲ್ಲಿ ವ್ಯಕ್ತಗೊಳ್ಳುವುದಿಲ್ಲ. ಅವರ ಬದಲು ಕಪಟರೂಪದಲ್ಲಿ ವ್ಯಕ್ತಗೊಳ್ಳುತ್ತವೆ. ಕನಸುಗಳು, ಜಾಗ್ರತ ಜೀವನದ ಚಿಕ್ಕ ಪುಟ್ಟ ತಪ್ಪುಗಳು ಇವುಗಳೇ ಆ ರೂಪಗಳು. ಇವು ಪ್ರಬಲವಾದಾಗ ಹಿಸ್ಟೀರಿಯಾ, ದ್ವಂದ್ವ ವ್ಯಕ್ತಿತ್ವ, ಅಪರಾಧ ಮನೋವೃತ್ತಿ ಮುಂತಾದ ಮಾನಸಿಕ–ನರ ದೌರ್ಬಲ್ಯಗಳು ಉಂಟಾಗುತ್ತವೆ. ಮನುಷ್ಯನ ಪ್ರತಿ ಚಿಕ್ಕಪುಟ್ಟ ವ್ಯವಹಾರದಲ್ಲಿಯೂ ಸಹಿತ ಸ್ವಪ್ರಯೋಜನದ ದೃಷ್ಟಿ ಇರುತ್ತದೆ. ಮಾನಸಿಕ ಜೀವನದಲ್ಲಿ ಯಾವುದೂ ಅಕಾರಣವಾಗಿಯಾಗಲಿ, ನಿರುದ್ದೇಶಿತವಾಗಿಯಾಗಲಿ ನಡೆಯುವುದಿಲ್ಲ. ಉದ್ದೇಶ ಅಥವಾ ಪ್ರೇರಣೆಯು ಪ್ರಮುಖವಾಗಿ ಯಾವುದೋ ಕಾಮೇಚ್ಛೆಯಾಗಿರುತ್ತದೆ. ಇದನ್ನು ನಾವು ಮನೋವಿಶ್ಲೇಷಣೆಯಿಂದ ತಿಳಿದುಕೊಳ್ಳಬಹುದು.

ಮನೋವಿಶ್ಲೇಷಣೆಯ ಸ್ಥಾಪಕ ಸಿಗ್ಮಂಡ್ ಫ್ರಾಯ್ಡ್. ಆದುದರಿಂದ ಅವನ ಸಿದ್ಧಾಂತ

ಗಳನ್ನೇ ಈ ವಾದದಲ್ಲಿ ಪ್ರಮುಖವಾಗಿ ವಿವರಿಸಲಾಗುತ್ತದೆ. ಕಲೆ ಮತ್ತು ಸಾಹಿತ್ಯದ ಮೇಲೆಯೂ ಸಹಿತ ಅವನ ವಿಚಾರಗಳು ಸಾಕಷ್ಟು ಪ್ರಭಾವ ಬೀರಿವೆ. ಫ್ರಾಯ್ಡ್‌ನ ಸಿದ್ಧಾಂತವನ್ನು "ಲೈಂಗಿಕ ವಾದ" ಎಂದೂ ಸಹ ಹೇಳಬಹುದು. ಅಜ್ಞಾತ ಮನಸ್ಸಿನ ಸಂಚಿತ ಪ್ರೇರಣೆಗಳು ಮತ್ತು ಇಚ್ಛೆಗಳಿಂದಲೇ ಕಲೆ ಮತ್ತು ಧರ್ಮಗಳು ಉದ್ಭವಿಸುತ್ತವೆ. ಈ ಲೈಂಗಿಕ ಶಕ್ತಿಯ ಔನ್ನತ್ಯದ ಫಲವಾಗಿಯೇ ಕಲಾವಿದರು ಕಲೆಗಳನ್ನು ರೂಪಿಸುತ್ತಾರೆ. ಮಾನಸಿಕ ಜೀವನದಲ್ಲಿ ವಾಸ್ತವಿಕತೆ ಮತ್ತು ಸುಖಾಭಿಲಾಷೆಯ ಮಧ್ಯೆ ಘರ್ಷಣೆ ಉಂಟಾಗುತ್ತದೆ. ಈ ಘರ್ಷಣೆಗೆ ಸಮಾಧಾನವನ್ನು ಕಲಾವಿದರು ಕಲೆಯ ಮೂಲಕ ಕಂಡುಕೊಳ್ಳುತ್ತಾರೆ. ಕಲೆಗೆ ಸಂಬಂಧಿಸಿದ ಫ್ರಾಯ್ಡ್‌ನ ಈ ಸಿದ್ಧಾಂತವು ಕಲಾವಿಮರ್ಶಕರ ಮೇಲೆ ಸಾಕಷ್ಟು ಪ್ರಭಾವ ಬೀರಿದೆ. ಆಧುನಿಕ ಸಾಹಿತ್ಯದ ನಾನಾ ಪ್ರಕಾರಗಳಲ್ಲಿಯೂ ಈ ವಾದದ ಛಾಯೆಯನ್ನು ನಾವು ಕಾಣಬಹುದು. ಫ್ರಾಯ್ಡ್‌ನ ನಂತರ ಅನೇಕರು ಸಂಶೋಧನೆ ನಡೆಸಿ ಹೊಸ ಹೊಸ ಸಿದ್ಧಾಂತಗಳನ್ನು ನಿರೂಪಿಸಿದರು. ಇವರಲ್ಲಿ ಆ್ಯಡ್ಲರ್ ಮತ್ತು ಜುಂಗ್ ಬಹು ಮುಖ್ಯರು.

ಈ ವಿಚಾರಗಳ ಬಗ್ಗೆ ಆ್ಯಡ್ಲರನ ವ್ಯಾಖ್ಯೆ ಸ್ವಲ್ಪ ಭಿನ್ನವಾದದ್ದು. ಇವನ ಪ್ರಕಾರ ಮನೋವಿಜ್ಞಾನದಲ್ಲಿ ಅಹಂ ಎಷ್ಟು ಮುಖ್ಯವೊ ಲಿಬಿಡೊ ಅಥವಾ ಕಾಮಪ್ರವೃತ್ತಿ ಅಷ್ಟು ಮುಖ್ಯವಲ್ಲ. ಕಾಮಪ್ರವೃತ್ತಿಗೆ ಫ್ರಾಯ್ಡ್ ಅನವಶ್ಯಕವಾಗಿ ಹೆಚ್ಚು ಮಹತ್ವವನ್ನು ಕೊಟ್ಟಿದ್ದಾನೆ. ಮಾನಸಿಕ–ನರರೋಗಗಳಿಗೆ ಮೂಲ ಕಾರಣ ಕೇವಲ ಕಾಮಪ್ರವೃತ್ತಿಯೇ ಆಗಬೇಕಾಗಿಲ್ಲ. ಅಹಂನ ಬೇಡಿಕೆಗಳಿಂದ ಸಹಿತ ಈ ರೋಗಗಳು ಉಂಟಾಗಬಹುದು. ಅಹಂ ಸ್ಥಾಪನೆಯೇ ಪ್ರತಿ ವ್ಯಕ್ತಿಯಲ್ಲಿಯೂ ಸ್ವಾಭಾವಿಕವಾದ ಮೂಲ ಪ್ರವೃತ್ತಿಯಾಗಿರುತ್ತದೆ. ಒಂದು ಕಡೆ ಅಹಂ ಸ್ಥಾಪನೆಯ ಬಯಕೆ, ಮತ್ತೊಂದು ಕಡೆ ಜೀವನದ ವಾಸ್ತವಿಕತೆಯನ್ನು ವಿರೋಧಿಸುವುದು—ಮಾನಸಿಕ ಜೀವನದ ಪ್ರಮುಖ ಸಮಸ್ಯೆಯಾಗಿದೆ. ಈ ಇಚ್ಛೆಯು ಜೀವನದ ಮೂರು ಮುಖ್ಯ ಕ್ಷೇತ್ರಗಳಾದ ಸಮಾಜ, ಉದ್ಯೋಗ, ಹಾಗೂ ಮದುವೆಯಲ್ಲಿ ವ್ಯಕ್ತವಾಗುತ್ತವೆ. ಹೀಗೆ ಆ್ಯಡ್ಲರನ ಮನೋವಿಜ್ಞಾನದಲ್ಲಿ ಅಹಂ ಸ್ಥಾಪನೆಯೇ ಪ್ರಮುಖವಾದುದು. ಮನೋರೋಗದ ಮೂಲ ಕಾರಣ ಸ್ವಹೀನಭಾವನೆಯಾಗಿದೆ ವಾಸ್ತವಿಕತೆಯೊಡನೆ ನಡೆಸುವ ಹೋರಾಟದಲ್ಲಿ ವ್ಯಕ್ತಿಗೆ ಅಹಂ ಸ್ಥಾಪನೆ ಮಾಡಿಕೊಳ್ಳಲಾಗುವುದಿಲ್ಲ. ಆಗ ತನ್ನ ಬಗೆಗೆ ಹೀನಭಾವನೆ ಉಂಟಾಗುತ್ತದೆ. ಇದು ಕ್ರಮೇಣ ಬೆಳೆಯುತ್ತದೆ. ಅವನು ಇದರಿಂದ ಬಿಡುಗಡೆ ಹೊಂದಲು ಯತ್ನಿಸುತ್ತಾನೆ. ದಮನಗೊಳಿಸುತ್ತಾನೆ. ಇದರ ಫಲವಾಗಿ ಕೆಲವರಲ್ಲಿ ಗರ್ವ ಹೆಚ್ಚಾಗುತ್ತದೆ. ಇದನ್ನು ನಾವು ಸ್ವಹೀನಭಾವನೆಯ ಕಪಟ ರೂಪವೆಂದು ತಿಳಿಯಬಹುದು. ಸ್ವಹೀನಭಾವನೆಯಿಂದ ತಪ್ಪಿಸಿಕೊಳ್ಳಲು ವ್ಯಕ್ತಿಯು ಕೆಲವು

ಸರಳೋಪಾಯಗಳನ್ನು ಕಂಡುಕೊಳ್ಳುತ್ತಾನೆ. ಆ ಉಪಾಯಗಳೇ ಆತನ ಜೀವನ ಶೈಲಿಯಾಗುತ್ತದೆ. ಇದು ಬದುಕಿನ ಆರಂಭದಲ್ಲಿಯೇ ನಿರ್ಧರಿತವಾಗಿರುತ್ತದೆ. ಕುಟುಂಬದಲ್ಲಿ ವ್ಯಕ್ತಿಗಿರುವ ಸ್ಥಾನದ ಆಧಾರದ ಮೇಲೂ ಇದು ಅವಲಂಬಿತವಾಗಿರುತ್ತದೆ. ಏಕ ಪುತ್ರ, ಜ್ಯೇಷ್ಠ ಪುತ್ರ, ದ್ವಿತೀಯ ಪುತ್ರ, ಕನಿಷ್ಠ ಪುತ್ರ—ಎಲ್ಲರ ಜೀವನ ರೀತಿಯು ಕೌಟುಂಬಿಕ ಪರಿಸರದಿಂದ ನಿರ್ಧರಿತವಾಗುತ್ತದೆ.

ಆ್ಯಡ್ಲರನ ಸಿದ್ಧಾಂತಗಳು ಸಾಹಿತ್ಯ ಮತ್ತು ಇತರ ವೈಚಾರಿಕ ಕ್ಷೇತ್ರಗಳ ಮೇಲೆ ಫ್ರಾಯ್ಡ್‌ನಷ್ಟು ಪ್ರಭಾವ ಬೀರದಿದ್ದರೂ, ಆತ ಪ್ರತಿಪಾದಿಸಿದ ತತ್ವಗಳು ಮಾನಸಿಕ ಜೀವನದ ಅನೇಕ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಾಕಷ್ಟು ಸಹಾಯಕವಾಗಿವೆ ಜುಂಗನು ಮನೋವಿಶ್ಲೇಷಣ ಸಿದ್ಧಾಂತಗಳಲ್ಲಿ ಸ್ವಲ್ಪ ಸುಧಾರಣೆ ಮಾಡಿ ತನ್ನ ವಾದವನ್ನು ಮಂಡಿಸಿದನು. ಲೈಂಗಿಕತೆ ಜೀವನದ ಪ್ರಮುಖ ಪ್ರೇರಕಶಕ್ತಿ ಎನ್ನುವುದನ್ನು ಇವನು ಅಲ್ಲಗಳೆದನು. "ಲಿಬಿಡೊ" ಶಬ್ದಕ್ಕೆ ಹೆಚ್ಚು ವಿಸ್ತಾರವಾದ ಅರ್ಥ ಕೊಟ್ಟನು. ಇದರಲ್ಲಿ ಫ್ರಾಯ್ಡ್‌ನ 'ಲೈಂಗಿಕ ಪ್ರವೃತ್ತಿ' (sexual instinct) ಮತ್ತು ಆ್ಯಡ್ಲರನ 'ಅಹಂ ಸ್ಥಾಪನಾಪ್ರವೃತ್ತಿ' (self assertion) ಇವೆರಡರ ಸಮ್ಮಿಳನವಾಗಿದೆ. ವ್ಯಕ್ತಿಯ ಎಲ್ಲಾ ವ್ಯವಹಾರಗಳಲ್ಲೂ ಗೋಚರಿಸುವ ಒಂದು ಸಾಮಾನ್ಯ ಪ್ರೇರಕಶಕ್ತಿ ಇದೆ. ಇದೇ ಜೀವಶಕ್ತಿ ಅಥವಾ ಮನೋಶಕ್ತಿ. ಇದು ಬೆಳವಣಿಗೆ, ಕಾರ್ಯಚಟುವಟಿಕೆ ಹಾಗೂ ಸಂತಾನೋತ್ಪತ್ತಿ—ಈ ಮೂರರಲ್ಲೂ ವ್ಯಕ್ತಗೊಳ್ಳುತ್ತದೆ.

ಜುಂಗನ ಸಿದ್ಧಾಂತಗಳಲ್ಲಿ ವ್ಯಕ್ತಿತ್ವದ ಭಿನ್ನತೆಗಳ ಬಗೆಗಿನ ಸಿದ್ಧಾಂತ ಪ್ರಮುಖವಾದುದು. ವ್ಯಕ್ತಿಗಳು ಎರಡು ವರ್ಗದವರಿರುತ್ತಾರೆ : ಅಂತರ್ಮುಖಿಗಳು ಹಾಗೂ ಬಹಿರ್ಮುಖಿಗಳು. ಅಂತರ್ಮುಖಿಗಳ ವಿಚಾರ ಮತ್ತು ಶಕ್ತಿಗಳು ಸ್ವಕೇಂದ್ರಿತವಾಗಿರುತ್ತವೆ. ಆದರೆ ಬಹಿರ್ಮುಖಿಗಳ ಶಕ್ತಿ ಮತ್ತು ವಿಚಾರಗಳು ಸಾಮಾಜಿಕ ಹಾಗೂ ಭೌತಿಕ ಚಟುವಟಿಕೆಗಳ ಕಡೆ ಸೆಳೆಯಲ್ಪಟ್ಟು ಅಲ್ಲಿ ವ್ಯಕ್ತವಾಗುತ್ತವೆ. ಅಂತರ್ಮುಖಿಯು ವಿಚಾರ ಹಾಗೂ ಭಾವನೆಗಳಲ್ಲಿ ಸ್ವಕೇಂದ್ರಿತನಾದುದರಿಂದ ಹೆಚ್ಚು ಭಾವುಕನೂ, ಕಲ್ಪನಾಶೀಲನೂ, ಏಕಾಂತಪ್ರಿಯನೂ ಹಾಗೂ ಅವ್ಯವಹಾರಿಕನೂ ಆಗಿರುತ್ತಾನೆ. ಬಹಿರ್ಮುಖಿಯು ವ್ಯವಹಾರ ಕುಶಲನೂ, ಸಾಮಾಜಿಕನೂ ಮತ್ತು ಕ್ರಿಯಾಶಾಲಿಯೂ ಆಗಿರುತ್ತಾನೆ.

ವೈಚಾರಿಕ ಜಗತ್ತಿನಲ್ಲಿ ಮಾರ್ಕ್ಸ್‌ನ ಸಿದ್ಧಾಂತಗಳು ಹೇಗೋ ಹಾಗೆ ಫ್ರಾಯ್ಡ್‌ನ ಮನೋವಿಶ್ಲೇಷಣೆಯ ಸಿದ್ಧಾಂತಗಳು ಮನೋವಿಜ್ಞಾನದಲ್ಲಿ ಕ್ರಾಂತಿಯನ್ನೇ ಉಂಟುಮಾಡಿವೆ. ಇದು ಕಲಾಕ್ಷೇತ್ರಗಳಲ್ಲಿನ ನಾನಾ ವಾದಗಳಿಗೆ ಪ್ರೇರಣೆ ನೀಡಿವೆ. ನೈತಿಕ ಮೌಲ್ಯಗಳ ಮೇಲೆ ಹೊಸ ಬೆಳಕನ್ನು ಬೀರಿದೆ. ಸ್ವಚ್ಛಂದ ವಿಚಾರಿಗಳ ಹೊಸ ಪೀಳಿಗೆಗೆ ಜನ್ಮ ಕೊಟ್ಟಿದೆ.

ಲೂಸಿಯ ಕತೆ

ಆರ್. ಮೋಹನ

ಆ ದೊಡ್ಡ ಗುಡಿಸಲಿಗೆ ನಾವು ಕೊಟ್ಟ ಹೆಸರು 'Officer's Mess' ಎಂದು. ಏಕೆ ಎನ್ನುತ್ತೀರಿ ? ತಿರುಳಿಲ್ಲದ ಆಕೃತಿಗೆ ಅಧಿಕಾರದ ನಾಮಕರಣವನ್ನು ಮಾಡದಿದ್ದರೆ ಕಾಡಿನಲ್ಲಿ ಸೈನಿಕ ಶಿಸ್ತನ್ನು ನಿಭಾಯಿಸುವುದಾದರೂ ಹೇಗೆ ? ಬಿದಿರಿನ ಕಂಬ, ಹುಲ್ಲಿನ ಛಾವಣಿ, ಬೂದು ಬಣ್ಣದ ಪೇಂಟಿಂಗ್ ಮಾಡಿದ ದಪ್ಪ ರಟ್ಟಿನ ಗೋಡೆ, ಇವುಗಳಿಂದ ಕಟ್ಟಿದ ಆ ಗುಡಿಸಲಿಗೆ 'ಮೆಸ್' ಎಂದು ಹೆಸರಿಡದಿದ್ದರೆ ನಾವು ಅಧಿಕಾರಿಗಳೆಲ್ಲ ಯೂನಿಫಾರ್ಮಿನ ಥಡಿ ಬಿಗಿಯದೇ ಬರುತ್ತೇವೆಯೆ ?

ಆದರೂ ಒಮ್ಮೊಮ್ಮೆ ನನಗೆ ನಗು ಬರುತ್ತದೆ. ಆ ಮೆಸ್ಸಿನ ಸುತ್ತಲೂ ಹರಡಿದ ಅಡವಿ. ವರ್ಷವಿಡೀ ಅಳುವ ಅಸ್ಸಾಮಿನ ಆಕಾಶ. ಗುಡಿಸಿಲಿನ ಛಾವಣಿಯನ್ನು ತಟ್ಟುವ ಕಪ್ಪು ಮೋಡಗಳ ಸೈನ್ಯ. ಆನೆ ಎತ್ತರದ ಹುಲ್ಲು. ಹುಲ್ಲೇ ಹಾಗೆ ಬೆಳೆದರೆ ಗಿಡಗಳ ಸೊಕ್ಕಿಗೆ ಕಡಿಮೆಯೆ ? ಅವುಗಳನ್ನು ತಬ್ಬಿ, ಸಂದಿನಲ್ಲಿ ಸಿಲುಕಿ, ಸುರುಳಿಯಾಗಿ, ತೂತಾಗಿ, ಗಟ್ಟಿಯಾಗಿ, ಒಟ್ಟಿನಲ್ಲಿ ಕೆಳಗೆ ಹಬ್ಬಿದ ಕತ್ತಲನ್ನು ಹೆಚ್ಚಿಸಿ, 'ನಾವೂ ಬಲಶಾಲಿಗಳೇ' ಎಂದು ಬೀಗುವ ಬಳ್ಳಿಗಳು.

ವನರಾಶಿಯ ಪೆಡಸನ್ನು ಕಂಡರೆ ಅಚ್ಚರಿಯಾಗುತ್ತದೆ. ಈ ಕ್ಷಣ ಬೋಳಿಸಿದ ನೆಲದ ಮೇಲೆ ಮರುಕ್ಷಣ ಚಿಗಿಯುವ ಹುಲ್ಲು. ನಮ್ಮೊಡನೆ ಸೆಣಸುವುದಕ್ಕೆ ನಿರ್ದಾಕ್ಷಿಣ್ಯವಾಗಿ ನಿಂತ ಕ್ರೂರ ಹಸಿರು.

ಆ ನೆಲವೋ ! ನೀರು ಬಿದ್ದೂ ಬಿದ್ದೂ, ಕಾಲಿಟ್ಟರೆ ಮೊಣಕಾಲೆಳೆಯುವ ಕೆಸರು.

ನಮ್ಮ ಮೆಸ್ಸಿನ ಮೇಕ್‌ಅಪ್ (Make-up) ಮಾಡಿಕೊಂಡ ಮುದಿ ಸೋಫಾ. ಒಂದು ಮೂಲೆಯಲ್ಲಿ ಬಾರ್. ಅಂದು ನಾನೊಬ್ಬನೆ. ಬಾರ್‌ನ ಹಿಂದೆ ಇರುವ ಜವಾನ ಸಹ ನನ್ನ ಎದುರಿಗೆ ವ್ಹಿಸ್ಕಿ ಶೀಸೆ, ಸೋಡಾ, ಗ್ಲಾಸನ್ನಿಟ್ಟು ಹೊರಟುಹೋಗಿದ್ದ. ನಾನು, ನನ್ನ ವ್ಹಿಸ್ಕಿ, ನನ್ನ ಸಿಗರೇಟು, ಸುಡುವ ನೆನಪುಗಳು.

ಒಂದು ಮೂಲೆಯಲ್ಲಿ 'ಸ್ಸಿಯ್' ಎಂದು ಭುಸುಗುಡುತ್ತ ತನ್ನಿರವನ್ನು ಘೋಷಿಸುತ್ತಿದ್ದ ಗ್ಯಾಸ್ ದೀಪ. ಅದರ ಬೆಳಕಿನಲ್ಲಿ ಬಾಗಿಲಿನಿಂದ ಮಣಿಮಾಲೆಗಳಂತೆ ತೋರುವ ಮಳೆಯ ನೀರಹನಿ.

ಹೊಗೆಯ ತೆರೆಯಲ್ಲಿ ಎಳೆ ಎಳೆಯಾಗಿ ನೆನಪಿನ ಸರಪಣಿ ತಲೆಗೆ ಕುಣಿಕೆ ಹಾಕಿಕೊಳ್ಳುತ್ತವೆ. ಮೀನಾಳಿಗೆ ಪತ್ರ ಬರೆಯೋಣ ಎಂದು ಮೂರು ತಿಂಗಳಿನಿಂದ ಆಶೆ. ಆದರೆ ಅಳುವುದಕ್ಕೆ ಅಭಿಮಾನ ಅಡ್ಡವಾಗುತ್ತದೆ. ತಲೆ ಎಂಬುದು ರತಿಯ ಎಲ್ಲ ಹಳಸಿದ ವಿಲಾಸಗಳ ಅಡಕಲು ಕೋಣೆ. ಸೈನ್ಯ ಜೀವನದಲ್ಲಿ ದೇಹ ಬಲಿತಂತೆಲ್ಲ ತಲೆಯನ್ನು ಮೂಸಿ ನೆಕ್ಕುವ ಶ್ವಾನ ಬಳಗ ವ್ಯಾಪಿಸುತ್ತದೆ. ಆ ಕನಸುಗಳಲ್ಲಿ ಬದಲಾವಣೆ ಇಲ್ಲ, ವೈವಿಧ್ಯವಿಲ್ಲ, ಆಳಗಲಗಳಿಲ್ಲ. ಅದೊಂದು ಕೊಳೆತ ತಪಸ್ಸು. ಹೆಣ್ಣು ದೇಹದ ಆಸೆ ಜೀವನದ ಕೇಂದ್ರ. ಗಿಮಿಗಿಮಿ ಸುತ್ತಿ, ಹಳಸಿ, ದೇಹವೆಲ್ಲ ಒಂದು ಸುಳಿಯ ಆವಿರ್ಭಾವ.

ಕಳೆದ ರಜೆಯಲ್ಲಿ ಕಡೆಗೂ ಮೀನಾ ಸಿಕ್ಕಾಗ, ಘನೀಭೂತವಾಗಿ, ಅಯಸ್ಕಾಂತದ ಆಕರ್ಷಣೆಯ ಹರಹಿನಂತೆ ಬಲಿತ ಬೇಡಿಕೆ ದ್ರವಿಸಿತು. ಅದರಲ್ಲೂ ಅದಕ್ಕಾಗಿ ಹೇಳಿ ಮಾಡಿಸಿದ ಮೀನಾ. ಶ್ಯಾಮಲೆ, ಹಸ್ತಿನಿ, ಪೀನಪಯೋಧರೆ, ಘನ ನಿತಂಬಿನಿ.

ಮೀನಾಳಿಗೆ ಏನೋ ಹೊಸತನ್ನು ಕಂಡ ಥ್ರಿಲ್. ಕೈ ತುಂಬ ಹಣ ಸಂಪಾದಿಸಿ, ವಿಜಯಿ ಎಂದು ಪಟ್ಟಿ ಹಚ್ಚಿಸಿಕೊಂಡ ಅಧಿಕಾರಿಗೆ ಸ್ವರ್ಗ ಎಂದರೆ ತಾನೆ! ತನ್ನ ಗಂಡನೆದುರಿಗೆ ನಿಂತರೆ ಹಾಗೆ ಕಣ್ಣುಗಳು ಬಾತು ಸೀಳಿಯಾವೆ ? ತನ್ನ ದೊಡ್ಡ ಮೊಲೆಗಳನ್ನು ರಸಪಾಕದಂತೆ ಹಿಂಡಿ, ತೇಲ್ಮುಳುಗಿ ಮೆದ್ದವರುಂಟೆ ? ಮೈಥುನ ಎಂದರೆ ಒಂದು ಗಂಡಿಗೆ ಅಮಾನುಷ ಉನ್ಮಾದವೂ ಆಗಬಹುದು ಎಂದು ಅವಳು ಅರಿತವಳಲ್ಲ. ಆ ಉನ್ಮತ್ತತೆಯ ವಿಕಾರಕ್ಕೆ ತಾನು ಕೇಂದ್ರ. ಅದರ ಪ್ರಯೋಗರಂಗ.

ಆದರೂ, ಅಂಕುಶ ಕೈಯಲ್ಲಿರಲಿ ಎಂಬ ಸ್ತ್ರೀಸಹಜ ಬಯಕೆ. ಅದರಿಂದ ತಿವಿದು ನೋಯಿಸಿ, ನನ್ನ ನೊಂದ ಕಣ್ಣುಗಳನ್ನು ಕಂಡು ನಲಿಯುವ ಆಸೆ. "ದೇಹ ದ್ರವಿಸಲಿಲ್ಲ" ಎಂದಳು. ಮುಖಕ್ಕೆ ಬಾರಿಸಿದಂತಾಯಿತು.

ಮೆಸ್ಸಿನಲ್ಲಿ ಕುಳಿತಾಗ ಅವಳು ಬೆತ್ತಲೆಯಾಗಿ ಬಂದು ಮೈಯನ್ನಾವರಿಸುತ್ತಾಳೆ. ದಪ್ಪನ್ನ ಹೆಣ್ಣು. ಮುಖವೆಲ್ಲ ಮೊಲೆಯ ಮಡಿಕೆಗಳಲ್ಲಿ ಸಿಲುಕಿಕೊಂಡಂತೆನಿಸುತ್ತದೆ. ಉಸಿರುಗಟ್ಟಿ. ಮೈ ಉಕ್ಕಾಗಿ, ವಿದ್ಯುತ್ ಸಂಚಾರವಾಗಿ ಸೆಟೆದರೆ ಸಿಗರೇಟಿನ ಹೊಗೆ.

ಹನಿ ಉಪ್ಪು ಹಾಲು ಕೆಡಿಸಿದಂತೆ, ಅವಳ ಗಂಡನ ಬಗ್ಗೆ ಕನಿಕರ ನನಗೆ. "ನಾನು ಗರ್ಭಿಣಿ. Thanks" ಎಂದು ಬರೆದಿದ್ದಳು. Consolation prize ನ ಹಾಗೆ.

ಯಾರಿಗೆ ಗೊತ್ತು ? ಮೂರು ವರ್ಷ ಗಂಡ ಮಾಡದ ಕೆಲಸವನ್ನ, ಗಳಿಗೆಯಲ್ಲಿ, ಅದೂ ಸೋಲಿನಲ್ಲಿ ನಾನು ಮಾಡಿದೆನೆ ? ಸುಳ್ಳು ಬೊಗಳುವಿಕೆ. ಇದ್ದಕ್ಕಿದ್ದಂತೆ ಗಹಗಹಿಸಿ ನಕ್ಕೆ, ನಗು ಕಾಡಿನಲ್ಲಿ ಮಾರ್ದನಿ ಈಯುವಂತೆ. ನಗೆಯ ತೆರೆ ತೊಯ್ದು ತರುಲತೆಗಳಲ್ಲಿ ಅಲೆ ಅಲೆಯಾಗಿ ಹರಡಿತು.

ನಗು ಕೇಳಿಸಿದಂತೆ ಲೂಸಿ ಬಾಲವನ್ನೆತ್ತಿ, ನಾಲ್ಕು ಕಾಲುಗಳ ಮೇಲೆ ಸೆಟೆದು, ತಲೆ ಎತ್ತಿ ನನ್ನ ಕಡೆ ನೋಡಿದಳು. ಮಗುವಿಗೆ ಬಂಗಾರದ ಸರ ಮಾಡಿಸಲೆ ಎಂದು ತೊಡೆ ಹೊಯ್ದು ವಿಕಟಾಟ್ಟಹಾಸವನ್ನು ಮೆರೆದ ನನ್ನನ್ನು ಶೋಧಿಸುವ ಕೆಲಸ ಲೂಸಿಗೇಕೆ ? ಅದಕ್ಕೆ ಮೆಸ್ಸಿನ ನಮ್ಮೆಲ್ಲರ ಬಳಿಯಲ್ಲು ಸಲಿಗೆ. ಮುಚ್ಚುಮರೆ ಸಹ ಇರಲಿಲ್ಲ. ಮೊನಾ ಅಂತಹ ಸೋಗಿನಲ್ಲಿ ಮೇಲ್ತರಗತಿ. "ಸೀರೆ ಸುಕ್ಕಾದೀತು" ಎಂದು ಬಿಚ್ಚಿಟ್ಟರೂ "ಮಾಡಲೇ ಬೇಕೆ ?" ಎಂದು ನಾಟಕವಾಡುವವಳು. ಆದರೂ ಎಂತಹ ರುಚಿ. ತಿಂದು ಬಿಡಬೇಕು. ನುಂಗಬೇಕು. ಕೋಣೆಯ ಕಿಟಕಿ ಬಾಗಿಲುಗಳನ್ನು ತೆರೆದು ಹೊರಗೆ ಹೊರಟಾಗ ಸೀರೆ ಕುಪ್ಪಸಗಳಲ್ಲಿ ಸುಕ್ಕಾಗಿರಲಿಲ್ಲ. ಅವಳ ಮಾತನ್ನು ನಂಬಬಹುದಾದರೆ ಬೀಜ ನೆಟ್ಟಾಗಿತ್ತು. ಭಲೆ ಭಲೆ ! ಸಾರಥಿ !

ಲೂಸಿಯ ಬಳಿ ದೊಡ್ಡ ದೊಡ್ಡ ಹೆಜ್ಜೆ ಇಡುತ್ತ ಬಂದೆ. ಬಾಗಿಲ ಬಳಿ ತಲೆ ಎತ್ತಿ ನೋಡುತ್ತ ನಿಂತಿತ್ತು. ಅದರ ಹೊಟ್ಟೆಯೂ ಭಾರ. ಅದಕ್ಕೆಂದೇ ಟಾಮಿ ಇತ್ತೀಚೆಗೆ ಬೇರೆ ಮೆಸ್ಸಿಗೆ ವರ್ಗವಾಗಿದೆ. ಲೂಸಿಯ ಮುಖ ನೋಡಿದರೆ ಮತ್ತೆ ನಗು ಒತ್ತರಿಸಿತು, ಹೆರಿಗೆ ಮಾಡಿಸಲು ಬಂದ ಸೂಲಗಿತ್ತಿಯನ್ನು ನೋಡುವ ಪತಿವ್ರತೆಯಂತೆ ಅವಳು ನನ್ನನ್ನು ನೋಡುವುದನ್ನು ಕಂಡು.

ನನ್ನ ಕಬ್ಬಿಣದ ಕೈಯಿಂದ ಆ ಪುಟ್ಟ ಮುಖಕ್ಕೆ ಬಾರಿಸೋಣ ಎಂದು ಬಾಗಿದೆ. ನೋವಿನಿಂದ ಲೂಸಿ ಮೂರು ಸಲ ಹೊರಳಾಡಿ ಮಿಂವ್‌ಗುಟ್ಟಿ ಓಡಿಹೋಗಲಿ.

ಒಮ್ಮಿಂದೊಮ್ಮೆಗೇ ಲೂಸಿಯ ಇಡಿಯ ದೇಹ ಕದನಕ್ಕೆ ಸಿದ್ಧವಾಯಿತು. ಬಾಗು ಬಿಗಿವುಗಳು ಚಂಗನೆ ನೆಗೆದು ಪರಚುವುದಕ್ಕೆ ತಯ್ದವು. ಆದರೆ ನನ್ನ ಕಡೆಗಲ್ಲ. ಅದರ ಹಿಂದಿರುಗಿದ ಮೊಗವನ್ನು ಹಿಂಬಾಲಿಸಿದಾಗ ಭಯದಿಂದ ಮೈ ಜುಮ್ಮೆಂದು ರೋಮ ರೋಮವೂ ನಿಮಿರಿತು.

ಬಾಗಿಲಿನ ಆಚೆ ನಿಶ್ಶಬ್ದವಾಗಿ ಕಟ್ಟೆಗೆ ನೆಗೆದು ನಿಂತ ಆ ವಿಚಿತ್ರ ಕಾಡುಪ್ರಾಣಿ. ಬೆಕ್ಕಲ್ಲ, ಚಿರತೆಯಲ್ಲ. ಪ್ರಕೃತಿಯ ನಿರಂತರ ಪ್ರಯೋಗದಲ್ಲಿ ಎಲ್ಲೋ ಪಟ್ಟಿಯಿಂದ ಕಳಚಿ ಬಿದ್ದ ವೈಚಿತ್ರ್ಯ. ಬೆಕ್ಕಿನ ಕಾಲು ಬೆನ್ನು, ಆಕಾರ ಕಾಡುಬಾವುಗದ ಎರಡರಷ್ಟು. ಬಾಲ ಚಿರತೆಯದು. ಮುಖ ಹುಲಿಯದು. ಅದರ ಬಗ್ಗೆ ಬಹಳ ಕೇಳಿದ್ದೆ. ಕಂಡಿರಲಿಲ್ಲ.

ಯಾವ ಆಮಿಷಕ್ಕೂ ಒಳಗಾಗದ ಸ್ವತಂತ್ರ ಅರಣ್ಯಜೀವಿ, ಅದರಲ್ಲಿ ಸಂದೇಹ, ಕೀಳು ಮನೋಭಾವ, ತುಡಿಯುವ ಕೈಗೂಡದ ಹಂಬಲ, ನೈಜತೆಯ ಕುಠಾರ, ಇವಾವೂ ಇಲ್ಲ. ಅದರ ರಾಜ್ಯಭಾರಕ್ಕೆ ಪ್ರಜಾತಂತ್ರದ ಭಯವಿಲ್ಲ. ನಿಂತಲ್ಲಿ ಸಿಂಹಾಸನ. ಬಾಲವೇ ರಾಜದಂಡ. ಎಟೆನ್‌ಶೆನ್ ನಿಂತು ಸೆಲ್ಯೂಟ್ ಕೊಡಬೇಕೆನ್ನಿಸಿದರೂ ಧೈರ್ಯ ಸಾಲಲಿಲ್ಲ. ಅದು ಎಲ್ಲಿ, ಯಾವಾಗ ಕಂಡರೂ ಗುಂಡಿಕ್ಕಬಾರದೆಂಬ ಕಟ್ಟಪ್ಪಣೆ. ಅದರ ಭೀಕರ ಸುಂದರ ಕ್ರೌರ್ಯ ನಮ್ಮನ್ನು ಮಂತ್ರಮುಗ್ಧರನ್ನಾಗಿಸುತ್ತದೆ.

ಅರಣ್ಯದ ಗುಪ್ತ ಭಯಂಕರ ಶಕ್ತಿಯ ಪ್ರತೀಕ. ನಮ್ಮ ಮೆಸ್ಸಿನ ನಿಯತ ಬ್ರೆಡ್ಡಿನ ತುಣುಕುಗಳಿಗೆ, ಮಾಂಸದ ಎಂಜಲಿಗೆ ಬಾಯಿಕ್ಕದ ಅಭಿಮಾನಿ. ತಿಂದರೆ ಬೇಟೆಯಾಡಿ ಬಿಸಿ ರಕ್ತವನ್ನೇ ಕುಡಿಯುತ್ತೇನೆ ಎನ್ನುವ ಸ್ವಾತಂತ್ರ್ಯಪ್ರಿಯ. ನಾನು ಹಿಂದು ಹಿಂದಕ್ಕೆ ಹೆಜ್ಜೆ ಇಕ್ಕುತ್ತ, ತಡಕಾಡಿ ಸೋಫಾದ ಬಳಿ ಬಂದೆ.

ಹೆಣ್ಣು ಲೂಸಿ ಭಯದಿಂದ ಕಂಪಿಸುತ್ತಿತ್ತು. ಧೈರ್ಯ ಸ್ಥೈರ್ಯಗಳಿಗಾಗಿ ನನ್ನಲ್ಲಿ ಬರಬೇಕೆ ? ಲೂಸಿ ನನ್ನ ಬಳಿ ಬಂದು ನನ್ನ ತೊಡೆಯೇರಿ ಹುದುಗಲೆತ್ನಿಸಿದಂತೆಲ್ಲ ನನಗೂ ಆ ಬಾವುಗಕ್ಕೂ ಸ್ನೇಹ. "ನಾನು ನಿನ್ನ ಹಿತೈಷಿ. ಹಾಗೆ ನೋಡುವ ಕಾರಣವಿಲ್ಲ" ಎಂದೆ, ಕಣ್ಣು ಮಿಟುಕಿಸಿ. ನನ್ನನ್ನದು ನಂಬಲಿಲ್ಲ. ನನಗೆ ಅಚ್ಚರಿಯಾಗಲಿಲ್ಲ. ಅಷ್ಟು ಸುಲಭವಾಗಿ ಯಾರಲ್ಲಿಯೂ ನಂಬಿಕೆ ಹುಟ್ಟಿಸಿದಂತೆ ಅನುಭವವಿಲ್ಲ.

ನನ್ನ ಸ್ನೇಹದ ಪತಾಕೆಯನ್ನು ಹಾರಿಸುವವನಂತೆ ಸಿಗರೇಟು ಹಚ್ಚಿದೆ. ಅದರ ಪ್ರಬಲ ದೃಷ್ಟಿಯೆಲ್ಲ ಲೂಸಿಯ ಮೇಲೆ—ಲೂಸಿಯುದರ ಮೇಲೆ.

“That is right. ನಿನ್ನನ್ನು ತಿನ್ನುತ್ತಿರುವ ಹಸಿವು ನಿನ್ನನ್ನೂ ನನ್ನನ್ನೂ ಒಂದೇ ಸೂತ್ರದಲ್ಲಿ ಬಂಧಿಸಿದೆ. ಓ ಮಹಾರಾಜ! ಇದಿಗೋ ನನ್ನ ಸ್ನೇಹ ಹಸ್ತ. ಈ ಹವಿಸ್ಸಿನ ಅರ್ಪಣೆಯಿಂದ ತೃಪ್ತನಾಗಿ ಆ ಅಸಾಧ್ಯ ಆತ್ಮವಿಶ್ವಾಸವನ್ನು ದಯಪಾಲಿಸು. Let us strike a bargain”.

ಆದರೆ ನನ್ನ ಸಹಾಯವನ್ನು ಕಸ ಎಂದೆಣಿಸಿತು ಕಾಡುಬೆಕ್ಕು.

“ಮೀನಾಳನ್ನು ಬಸಿರು ಮಾಡಿದ್ದೇನೆ” ಎಂದೆ, ಪ್ರಮಾಣ ಪತ್ರವನ್ನು ತೋರಿಸುವಂತೆ. ಹಿಂದೆಯೇ ಹುಳಿತ ಬೀರ್ ಮುಕ್ಕಳಿಸಿದಂತೆ ಬಾಯಿ ದಂಗೆ ಎದ್ದಿತು. “ಸೋತೆ ಎಂದು ನಾನು ನಂಬಿಲ್ಲ. ನನ್ನ ನಂಬಿಕೆ ಮುಖ್ಯ ತಾನೆ” ಎಂದು ಪ್ರಾರ್ಥಿಸಿದೆ. ಲೂಸಿಗೆ ಕಡೆಗೂ ನನ್ನ ಸ್ನೇಹದ ಮೇಲೆ ನಂಬಿಕೆ ಹೋಯಿತು. ನನ್ನ ಹಿಡಿತದಿಂದ ಪಾರಾಗಲು ಕೊಸರಾಡಿತು.

ಮೀನಾಳನ್ನು ಬಂಧಿಸಿದಾಗ ಪಾರಾಗುವ ಇಂತಹ ಒಂದು ಫಾರ್ಸು ನಡೆದಿತ್ತು. ಬೆತ್ತಲೆಯಾಗಿ ಮಲಗಿ ಹಸಿದು ಬಾಯಿ ತೆರೆದಿದ್ದರೂ “ಇಷ್ಟಕ್ಕೆ ಸಾಕು” ಎಂದು ಜಗಳ ಹೂಡಿದ್ದಳು. ಸದ್ಯ, ಅವಳು ನಿಜವನ್ನೇ ನುಡಿದಿದ್ದರೂ ನಂಬುವ ಸ್ಥಿತಿಯಲ್ಲಿರಲಿಲ್ಲ. ದೊಡ್ಡ ಮೈಯಾದರೂ ಯೌವ್ವನದಿಂದ ತುಂಬಿ ಒಸರುವ ಹೆಣ್ಣು. ನಿತಂಬ ಹಿಡಿದರೆ ಸಾಕು, ಎಲ್ಲ ಬೇಡಗಳು ಆಹಾಗಳಾಗುವುದಕ್ಕೆ.

ಲೂಸಿಯ ರಕ್ಷಣೆಗೆಂಬಂತೆ ಕಾಡುಬೆಕ್ಕು ಬಾಗಿಲಿನಿಂದ ಸೋಫಾದವರೆಗೆ ನೆಗೆಯಿತು. ಅದರ ಉಗುರು ಮುಂಗೈಗೆ ನಟ್ಟು ರಕ್ತ ಬಳಬಳನೆ ಸೋರಿತು. ಲೂಸಿಯನ್ನು ಬಿಟ್ಟೆ. ಲೂಸಿ ಮೆಸ್ಸಿನ ತುಂಬ ವೇಗದಿಂದ ಓಡಿಯಾಡತೊಡಗಿತು. ಕಾಡಿನ ಮಧ್ಯ ಈ ಪ್ರಣಯ ದೃಶ್ಯವನ್ನು ನೋಡುತ್ತ ಕುಳಿತೆ. ಸೋಫಾ ನನ್ನ ರಕ್ತದಿಂದ ಕೆಂಪಾಗತೊಡಗಿತ್ತು.

ಮೀನಾಳನ್ನು ಭಿಕ್ಷೆ ಬೇಡುವ ಕಾರಣವೇ ಇರಲಿಲ್ಲ. ಎಂತಹ ಮೂರ್ಖ ನಾನು ಎಂದು ಕುದಿದೆ. ನನ್ನ ಹೋಟೆಲ್ ಕೋಣೆಗೆ ಅವಳು ಬಂದಾಗಲೇ ನನ್ನ ಹಿಡಿತದ ಪುರಾವೆ ಸಿಕ್ಕಾಯಿತಲ್ಲ! ಆದರೂ ಸಂಪ್ರದಾಯದ ಸೋಗನ್ನು ಹಾಕುವ ಹೇಡಿತನ. ನನ್ನನ್ನು ಕೆಡಿಸಿದರೂ ಕೆಟ್ಟವನಲ್ಲ. “ನಾನು ಕೆಟ್ಟರೂ ಅವನ ತಪ್ಪಲ್ಲ. ಇದೊಂದು ಮಾನವಾ

ತೀತ ಪ್ರೇಮದ ದಿವ್ಯ ಘಟನೆ" ಎಂದು ರಂಗೇರಿಸುವ ಎಂಬ ಹುಚ್ಚು. ನಿಜವಾಗಿ, ಅರೆಬೆಂದ ಪುಸ್ತಕೀಯ ಅಸತ್ಯಗಳು ಎಂತಹ ಪ್ರಭಾವವನ್ನು ಬೀರಲು ಸಾಧ್ಯ. ಉದ್ದೇಶ ಅಷ್ಟು ನಿಚ್ಚಳವಾಗಿ ಇಬ್ಬರಿಗೂ ಕಾಣುವಾಗ ಯಾಕಾದರೂ ಆ ನಾಟಕ ? ಅದರಿಂದ ಸಾಧಿಸಿದ್ದು ಮೇಲ್ಮೆಯಲ್ಲ, ಕೀಳ್ಮೆ ; ನನ್ನ ವ್ಯಕ್ತಿತ್ವದ ಮೇಲೆ ಮಸಿ.

ಆದರೆ ಒಂದು ಮಾತನ್ನ ಪ್ರಾಮಾಣಿಕವಾಗಿ ನೆನೆಯುತ್ತೇನೆ. ರಜೆಯಲ್ಲಿ ಹೋದ ಅಧಿಕಾರಿಗೆ ಹೆಣ್ಣಿನ ಕೊರತೆ ಇಲ್ಲ. ಆದರೆ ನಾನು ಮತ್ತೆ ಮತ್ತೆ ಅರಿಸಿದುದು ಮಿನಾಳನ್ನ. ಇಂದಿಗೂ ಕಾವ್ಯಮಯ, ಶೃಂಗಾರಮಯ ಮತ್ತು ಕಡೆಗೆ ರತಿಯ ಕನಸು ಅವಳ ಕೋಮಲ ಶ್ಯಾಮಲ ಚರ್ಮವನ್ನು ನೆನೆದು. ರತಿರಸದಲ್ಲಿ ಮಿಂದು ಎಣ್ಣೆಯಲ್ಲಿ ಅದ್ದಿದ ನೇರಿಳೆಯಂತೆ ಮಿನುಗುವ ಅವಳ ಬೆತ್ತಲೆಯ ದೇಹದ ಮೇಲೆ. ಹಳಗನ್ನಡದ ಕವಿ ಬೇಡರ ಜವ್ವನೆಯೊಬ್ಬಳ ಸೌಂದರ್ಯವನ್ನು ವರ್ಣಿಸುತ್ತ ಎಣ್ಣೆಯಲ್ಲಿ ಅದ್ದಿದ ನೇರಿಳೆ ಎಂದು ಬರೆದುದನ್ನು ಓದಿದೊಡನೆಯೇ ರಸಸ್ಪಂದನವಾದದ್ದು ಮಿನಾಳಿಂದಾಗಿ.

ಇದೂ ನನ್ನನ್ನು ಬೆಳೆಯಿಸಿದ ರೋಮ್ಯಾಂಟಿಕ್ ಭಾವಗಳಿಂದಾಗಿಯೇ ಎಂದು ಪ್ರಶ್ನಿಸಿಕೊಂಡರೂ ಇಲ್ಲ ಎನ್ನಿಸುತ್ತದೆ. ಹಾಗಾದರೆ ಅದೇನು ಎಂದು ನನಗೆ ಅಭ್ಯಾಸವಿಲ್ಲದ, ಅಪರಿಚಿತ, ಅಪ್ರಾಮಾಣಿಕ ಎಂದು ಸಂದೇಹಿಸಲ್ಪಡುವ ಅತೀತ ನಿಯಮವೇ ಎಂದು ಯೋಚಿಸಿದರೆ ಅದನ್ನೇ ತಪ್ಪೋಣ ಎನ್ನಿಸುತ್ತದೆ. ಎಷ್ಟು ಪ್ರಿಯವಾದ ಕಲ್ಪನೆ ! ಅದು ಸತ್ಯವಾಗಿರಲಿ ಎಂದು ಮನದುಂಬಿ ಹಾರೈಸುತ್ತೇನೆ. ಮಿನಾಳನ್ನು ಮರೆಯಲಾರೆ— ಏಕೆ ಎಂದರೆ rational, ವಿವೇಕ ಸಮ್ಮತ ಜವಾಬಿಲ್ಲ. ಹಾಗಾದರೆ ಏನದು ? ಬಯಕೆಯೇ ಬುಡವಿಲ್ಲದ್ದು ಎಂದರೆ ಒಪ್ಪಲಾರೆ. After all, ನನಗೂ ಕಾಡುಬೆಕ್ಕಿಗೂ ನಡುವೆ ಇರುವ ಕಂದರ, ನನ್ನ ದಂಡೆ ಬಹು ಕೆಳಗೆ ಎಂದರೂ, ಒಂದು ಭೇದವಲ್ಲವೆ ?

ಆದರೂ ಎತ್ತಿನ ಕೋಡನ್ನು ಹಿಡಿದು ಸೆಣಸಾಡಿದಂತೆ ದಣಿದುಬಿಡುತ್ತೇನೆ.

ಯಾವಾಗ ಯಾವುದು ಅನುಕೂಲವಾದರೆ, ಅದೇ ನಿಯಮ ! ನನ್ನ ಒಂದು ದೃಢ ನಂಬಿಕೆಯನ್ನು ಬುಡದಿಂದ ಅಗೆದು ಅಭದ್ರವಾಗಿಸುವುದಕ್ಕೆ ಮಿನಾ ಕಾರಣ. ಕೆಳಗೆ ಮಲಗಿ, ತೂಗಿ ಸ್ಪಂದಿಸುತ್ತ, ವಿರುದ್ಧ ಪಶು ಮಹದಾನಂದದಲ್ಲಿ ಕಣ್ಮುಚ್ಚಿ ಮುಳುಗಿ ಆಹಾ ಎಂದ ಅವಳ ಮೇಲೆ ನಾನಿದ್ದರೇನು, ಅವಳ ಗಂಡನಿದ್ದರೇನು ?

ನನ್ನ ದೇಹವೆಲ್ಲ ನಿಮಿರಿ ನಿಂತು, ಹೊನಲಾಗಿ, ಹಗುರಾಗಿ, ಹಣಿದು, ತಣಿದು ಹೋಗಿ,

ತಲೆ ಹೂ ಹೂ ಆದುದನ್ನು ನೆನೆದಾಗ ಎಷ್ಟೋ ತೃಪ್ತಿ ಉಂಟಾಗುತ್ತದೆ. ಅದೊಂದು ಎಂದಿಗೂ ಮರೆಯದ ಅನುಭವ ಎಂದು ನನಗೆ ನಾನೇ, ಕ್ಲಿಷೆಯಾದರೂ ನಿಜ, ಹೇಳಿ ಕೊಳ್ಳುತ್ತೇನೆ. ಆದರೆ ಆ ಸುಖಸ್ವಪ್ನದಲ್ಲಿ ಹುಳಿ ಬೆರೆಸಿದಂತೆ ಅವಳು ಆ ಅನುಭವ ದಿಂದ ಬೇರೆ ನಿಂತುದು. ನನ್ನ ಪೌರುಷಕ್ಕೆ ಪ್ರಶ್ನಚಿಹ್ನವನ್ನು ತೂಗು ಹಾಕಿ, ಆಮೇಲೆ ಗರ್ಭಿಣಿ ಎನ್ನುತ್ತಾಳಲ್ಲ! ಅಬ್ಬ! ಅದೊಂದು ಕೊರತೆ ಇರದಿದ್ದರೆ ನಾನು ಕಾಡುಬೆಕ್ಕಿನ ಎತ್ತರಕ್ಕೆ! ಕಂದರವಿದ್ದರೂ ಸಮಾನತೆಯನ್ನು ಮೆರೆಯುತ್ತಿದ್ದೆ.

ನಾನೊಂದು ಹಳೆಯ ನಿರ್ಣಯಕ್ಕೆ ಬರಲು ಆತುರಪಡುತ್ತಿದ್ದೇನೆ. ಶುದ್ಧ, ಬೆರಕೆ ಯಿಲ್ಲದ ಸುಖ ಇಲ್ಲ ಎಂಬ ಮಾತಿಗೆ. ಅದಕ್ಕೆ ಬೆಂಬಲವೀಯುವುದಕ್ಕೆ ಮೆಸ್ಸಿನ ಜವಾನ ಧರಮ್ ಸಿಂಗ್ ಬೆಕ್ಕುಗಳ ಕಾದಾಟ ನೋಡಿದ. ಓಡಿ ಹೋಗಿ ಕೋವಿ ತೆಗೆದುಕೊಂಡು ಬಂದ. ನಾನು ಆದೇ ಮೀನಾಳಿಗೆ ಪತ್ರ ಬರೆಯಲು ನಿರ್ಧರಿಸಿದ್ದೆ. "ನಿಜವಾಗಿ ಹೇಳು. ಸುಳ್ಳು ಹೇಳಬೇಡ. ನಿನ್ನೊಡನೆಯ ಆ ಅತಿ ಸವಿಯ ನೆನಪಿನಲ್ಲಿ ಆ ಕಹಿ ಬೆರೆತಿದೆ. ನಿಜ ಹೇಳು" ಎಂದು. "ಇಲ್ಲದಿದ್ದರೆ" ಎಂದು ಒಂದು ಬೆದರಿಕೆಯನ್ನೂ ಬೆರೆಸೋಣ ಎಂಬ ಹೇಡಿತನದ ನಿರ್ಣಯವೂ ಬಂದು ಸೇರಿಕೊಳ್ಳಲು ಹವಣಿಸುತ್ತಿತ್ತು.

"ಧರಮ್ ಸಿಂಗ್!" ಎಂದೆ, ಅಧಿಕಾರದ ದರ್ಪದಿಂದ. ಆ ವೇಳೆಗೆ ಲೂಸಿಯ ಕೂಗು, ಬಾವುಗದ ಗರ್ಜನೆ ಇಡಿಯ ಕಾಡನ್ನು ಎಬ್ಬಿಸುವಷ್ಟಾಗಿತ್ತು, ಒಂದೆರಡು ಚೇರುಗಳನ್ನು ಉರುಳಿಸಿಯಾಗಿತ್ತು. ಲೂಸಿ ಕಡೆಗೂ ಮೆಸ್ಸಿನ ಹೊರಗೆ, ಮಳೆಯಲ್ಲಿ ಓಡಿ ಹೋಯಿತು. ಅದರ ಹಿಂದೆಯೇ ಬಾವುಗ. ಅದೆಂತಹ ಬಾವುಗ! ಇನ್ನೂ ಹಿಡಿಯಲಿಲ್ಲ.

"ಏನು ಸ್ಸರ್?" ಎಂದು ಕೇಳಿದ ಅವನು. ಹಿಂದೆಂದೂ ಅವನಲ್ಲಿ ಕಾಣದ ಅವಿಧೇಯತೆ ಅವನ ದೃಷ್ಟಿಯಲ್ಲಿ ಕಂಡು ಬೆಚ್ಚಿದೆ. ತಿರಸ್ಕಾರ ಕಂಡು. ಮೀನಾಳನ್ನು ಬೆದರಿಸುವುದು ಬೇಡ ಎಂದುಕೊಂಡೆ.

"ಆ ಕೋವಿ ಏಕೆ? ಆ ಕಾಡುಬೆಕ್ಕನ್ನ ಕೊಲ್ಲಬಾರದು ಎಂಬುದು ಗೊತ್ತಿಲ್ಲವೆ?"

"ಲೂಸಿ, ಮೆಸ್ಸಿನ ಬೆಕ್ಕು, ಅದಕ್ಕೆ ಗಬ್ಬ."

ಗಬ್ಬವಾದರೇನಂತೆ. Can't she oblige? —ಎಂದು ಕೇಳಬೇಕೆನಿಸಿತು.

"ಕೋವಿ ಒಳಗಿಡು" ಎಂದೆ.

"ಹಾಗೆ ನನ್ನ ಕಡೆ ನೋಡಬೇಡ. ಸೀಳಿ ಹಾಕಿಯೇನು" ಎಂದು ಒದರಿದೆ.

ಅದೇ ವೇಳೆಗೆ ಲೂಸಿಯ ಆಕ್ರಂದನ ಬಾನಿಗೆ ಮುಟ್ಟಿತು. ಮಳೆ, ಗುಡುಗು, ಕತ್ತಲೆ, ಕಾಡನ್ನು ಭೇದಿಸಿ ನಡುಗಿಸಿತು. ನಾನೂ ಧರವ್ ಸಿಂಗ್ ಹೊರಗೋಡಿದೆವು. ಗಾಳಿ ಜೋರಾಗಿ ಬೀಸಿ ಮೆಸ್ಸಿನೆದುರಿನ ಮರಗಳೆಲ್ಲ ತೊನೆದಾಡುತ್ತಿದ್ದವು. ಮಳೆ ನೀರಿನಿಂದ ತೊಯ್ದುಹೋದೆ. ಕತ್ತಲೆಯಲ್ಲಿ ಹುಲ್ಲು, ಗಿಡ, ಬಳ್ಳಿಗಳ ತೂಗುವ ತುದಿಗಳು, ಅವು ಗಳಾಚೆ ಕತ್ತಲೆಯೇ ಮೈವೆತ್ತಂತೆ, ಬೆರಳು, ಕೈ ಕಾಲುಗಳನ್ನು ಹುಟ್ಟಿಸಿಕೊಂಡು ನಿಂತಂತೆ ಹರಡಿದ ಅರಣ್ಯ.

ಧರವ್ ಸಿಂಗ್ ಕೆಸರಿನಲ್ಲಿ ಏಳುತ್ತ ಬೀಳುತ್ತ ಓಡಿದ. ನಾನು ನಿಂತಲ್ಲಿಯೇ ನಿಂತೆ. ಗ್ಯಾಸ್ ದೀಪ ಆರಿಹೋಗಿತ್ತು. ಪ್ರಕೃತಿಯ ತಾಂಡವದಲ್ಲಿ ನಾನೂ ಒಬ್ಬ. ನಿಂತಿದ್ದೆ. ರಾಕ್ಷಸ ಮರಗಳ, ಆನೆಹುಲ್ಲಿನ ನಡುವೆ. ಆದರೂ ನಾನು ಒಂದು ಅಂಶ, ಉಳಿದುದೆಲ್ಲಿ ಬೇರೊಂದಂಶ. ನನಗೆ ಆ ಅಂಶದೊಡನೆ ಮಾತನಾಡಿ, ಸಂಬಂಧ (a communion) ಸ್ಥಾಪಿಸಬೇಕು ಎಂಬ ಬಯಕೆ.

ಧರವ್ ಸಿಂಗನ ಹೆಜ್ಜೆ. ಸೋಸಿ ಸೂಸಿದ ಕತ್ತಲೆಯ ಮರಿಯಂತಹ ನಸು ಬೆಳಕಿನಲ್ಲಿ, ರಕ್ತದಿಂದ ತೊಯ್ದು ಮಡಿದ ಲೂಸಿಯ ದೇಹವನ್ನು ಹೊತ್ತು ತಂದಿದ್ದ. ನನ್ನೆದುರಿಗೆ ಕೈ ಚಾಚಿ ಹಿಡಿದ. ಬೀಸಿ ಅವನ ಕೆನ್ನೆಗೆ ಬಾರಿಸಬೇಕೆನ್ನಿಸಿತು.

"ನಾನೇನು ಮಾಡಲಿ ? ನಾನು ಕೊಂದೆನೆ ಲೂಸಿಯನ್ನ ? ನಾನೆ ?" ಎಂದೆ. ನನ ಗುಂಟಾದ ಗಾಯವನ್ನು ತೋರಿಸಿದೆ. ನನ್ನ ಪ್ರತಿಕ್ರಿಯೆ ನ್ಯಾಯವೇ ಎಂದು ಧರವ್ ಸಿಂಗ್ ಹೇಳಲಿಲ್ಲ.

ಹಾದಿಗಳೆಲ್ಲಿವೆ ?

ಅಶೋಕ ಕುಲಕರ್ಣಿ

ಪಾತ್ರಗಳು :

ತಾಯಿ
ಮೋಹನ : ಅವಳ ಮಗ
ಮೀನಾಕ್ಷಿ : ಅವಳ ಮಗಳು
ಅಂತಪ್ಪ : ತಮ್ಮ
ಸುರೇಶ ಹಾಗೂ ಮಲ್ಹಾರಿ : ಮೋಹನನ ಗೆಳೆಯರು
ಸುರೇಶನ ತಂದೆ
ಗುರುನಾಥ : ತಾಯಿಯ ದೂರದ ಸಂಬಂಧಿಕ
ಶಾಂತಪ್ಪ : ಕಾಲೇಜಿನ ಚೇರ್‌ಮನ್
ಕಾಲೇಜಿನ ಪ್ರಿನ್ಸಿಪಾಲ
ಗೌಡ, ಲಿಂಗಯ್ಯ ಮತ್ತು ಹಳ್ಳಿ : ಕಾಲೇಜಿನ ಪ್ರಾಧ್ಯಾಪಕರು
ನಾರಾಯಣ, ಬಿಳಿಗಿ, ಚೌಡ ಗೌಡ, ಮಲ್ಲೇಶಿ : ಕಾಲೇಜಿನ ಕಾರ್ಯದರ್ಶಿಗಳು
ಪೋಲಿಸ್ ಇನ್ಸಪೆಕ್ಟರ್

(ದೃಶ್ಯಗಳನ್ನು ಬದಲಿಸದೇ ರಂಗದ ಮೇಲೆ ಇರುವ ಪಾತ್ರಗಳೇ, ಮುಂದೆ ಬರುವ ಕ್ರಿಯೆಯಲ್ಲಿಯ ವಿವಿಧ ಪಾತ್ರಗಳನ್ನು ವಹಿಸಿ ನಟಿಸಬಹುದು. ರಂಗದ ಮೇಲೆ ಇರುವ ಪಾತ್ರಗಳ ಸಂಖ್ಯೆ ಮುಂದೆ ಬರುವ ಕ್ರಿಯೆಯಲ್ಲಿಯ ಪಾತ್ರಗಳ ಸಂಖ್ಯೆಗಿಂತ ಕಡಿಮೆ ಎನ್ನಿಸಿದಲ್ಲೆಲ್ಲ, ಹೊಸ ಪಾತ್ರಧಾರಿಗಳು ಯಾವ ಸಂಕೋಚವೂ ಇಲ್ಲದೇ ರಂಗವನ್ನು ಪ್ರವೇಶಿಸಿ, ತಮ್ಮ ಕಾರ್ಯವಾದೊಡನೆ ರಂಗದಿಂದ ನಿರ್ಗಮಿಸಬಹುದು)

ಈ ನಾಟಕವನ್ನು ಪ್ರಯೋಗಿಸುವವರು ಲೇಖಕರ ಲಿಖಿತ ಅಪ್ಪಣೆ ಪಡೆಯಬೇಕು.

ದೃಶ್ಯ ೧

(ಮನೆಯ ಎದುರಿನ ಕೋಣೆಯೇ ರಂಗಸ್ಥಳ. ಇಲ್ಲಿ ಕೆಲವೊಂದು ದೇವರ ಫೋಟೊಗಳನ್ನು ಹಾಕಿದ್ದಾರೆ. ಒಂದೆರಡು ಇಜಿಚೇರ್‌ಗಳನ್ನು ಮತ್ತು ಟೇಬಲ್ ಇಟ್ಟಿದ್ದಾರೆ. ಇಜಿಚೇರ್‌ಗಳಲ್ಲಿ ಮೀನಾಕ್ಷಿ ಮತ್ತು ಮೋಹನ ಕೂತಿದ್ದಾರೆ, ರಂಗದ ಹಿಂಬದಿಯಿಂದ ತಾಯಿ ಹೊರಗೆ ಬರುತ್ತಾಳೆ.)

ತಾಯಿ : ಯಾರೇೂ. ಹೊರಗ ಬಾಗಲಾ ಬಡದಂಗಾತು.

ಮೀನಾಕ್ಷಿ : ಯಾರೂ ಇಲ್ಲ, ಬಾಗಲಕ್ಕ ಗಾಳಿನ ಬಡಿಲಿಕ್ಕೆ ಹತ್ತೆದ ಅವ್ವ.

ಮೋಹನ : ಯಾವಾಗಲೂ ತಮ್ಮ ಸುತ್ತ ಭ್ರಮಾ ಕಟ್ಟಿಕೊಂಡವರಿಗೆ ಬಾಗಲಾನೂ ಬಡದಂಗ ಕೇಳಸ್ತದ, ಮತ್ತ ಮಳೀನೂ ಬಂದಂಗ ಕೇಳಿಸ್ತದ.

ಮೀನಾಕ್ಷಿ : ಅವ್ವಗ ಮೊದಲsss ತ್ರಾಸ ಆಗೇದ. ನೋಡಕೊಂಡ ಮಾತಾಡು.

ತಾಯಿ : (ಅಳುತ್ತ) ಅವರು ಹೋಗ್ಯಾರ, ಹೋಗ್ಯಾರ. ನಡಿಸೇ ಬಿಟ್ಟಿದಿ ಏರಾಟಗಿ. ನಡಸು.

ಮೋಹನ : (ಇಜಿಚೇರಿನಿಂದ ಏಳುತ್ತ) ಅಪ್ಪ ಸತ್ತದ್ದಕ್ಕ ನನಗೂ ದುಃಖ ಆಗೇದ, ತ್ರಾಸ ಆಗೇದ. ಆದರ, ಸತ್ತವ ಏನರ ನಾವು ಅತ್ತರ ಹೊಳ್ಳಿ ಬರತಾನೇನು ?

ತಾಯಿ : ನಾನು ನಿನ್ನ ತಾಯಿ ತಿಳೀತಿಲ್ಲೊ. ನೀ ಏನ್ ನನಗ ಬುದ್ಧಿವಾದಾ ಹೇಳಬೇಕಾಗಿಲ್ಲ.

ಮೋಹನ : "ನಾ ನಿನ್ನ ತಾಯಿ" ಅಂತ ನನ್ನ ಮ್ಯಾಲೆ ಭಾರಾ ಹಾಕಿವರ, ನಾ ಏನ ಮತ್ತ, ನೀ ಹೊಸಾ ತಾಯಿ ಆದಿ, ಅಂತೇನ ಕರಿಯುದಿಲ್ಲ. ಯಾಕಂದರ ಮೊದಲಿನಿಂದ ತಾಯಿ ಆಗೇಬಿಟ್ಟಿದಿ.

ತಾಯಿ : (ಹಂಗಿಸುವವಳಂತೆ) ಒಂಬತ್ತ ತಿಂಗಳ ಇಟಗೊಂಡ ಹಡದೇನಿ ನಿನ್ನ ತಿಳಿತಿಲ್ಲೊ.

ಮೀನಾಕ್ಷಿ : ಇರಲಿ ಬಿಡಬಾರದ ? ಒಮ್ಮೆ ನಿಮಗೂ ಅಂವಗೂ ಕೂಡುದೇ ಇಲ್ಲಾ ಅಂದ ಮ್ಯಾಲೆ, ಯ್ಯಾಕ ಈ ಮಾತು ?

ಮೋಹನ : ಅಪ್ಪ ಸತ್ತ ಮ್ಯಾಲೆ. ನಾ ಯ್ಯಾಕ ಅಳಲಿಲ್ಲ. ನನಗ ಗೊತ್ತದ, ಹೊರತು ನಿಮಗಲ್ಲ.

ಮೀನಾಕ್ಷಿ : ಅವನ ಸಂಗತಿ ಏನss, ಕೂಳಿಗೆ ಮೂಲಾಗಿ ಕೂತಾನ.

ಮೋಹನ : ಹೊರಗಿನ ಕೂಳು ತಿಂದು ಜೀವಿಸಬೇಕಂದರ, ಒಳಗಿನ ಬಾಗಲಾನ ಮುಚಿಗೊಂಡಾವ—ನಾನರ ಏನ ಮಾಡಲಿ ?

ತಾಯಿ : ಮುಚ್ಚಿದ ಬಾಗಲಾ ತಗೀಲಿಕ್ಕೆ ಎಷ್ಟು ಹೊತ್ತು ಹಿಡಿತದೋ ? ನನ್ನ ಮೊದ್ಲಿನ ಮೂರ ಮಕ್ಕಳಾದರೂ ಹಿಂಗ ಪುಚ್ಚ ಬಲಿತ ಮ್ಯಾಲೆ ಹಾರಿ ಹೋದ್ವು. ಹಂಗs ನೀನು ಹೋಗಾವಾ. ಕಡೀಕೂ ಉಳಿಯೋಕಿ ನಾ ಒಬ್ಬಾಕೀನ.

ಮೀನಾಕ್ಷಿ : (ಇಜಿಚೇರಿನಿಂದ ಏಳುತ್ತ) ಮತ್ತ ಯ್ಯಾಕ ಅಳತೀದಿ ಸುಮ್ನ ?

ತಾಯಿ : ಕರಳು ಬಳ್ಳಿ ಅನ್ನೋದ ಸುಳ್ಳ ? ನಾ ಇವರ್ನ ಹಿಂಗ ಹಡದದ್ದ ಸುಳ್ಳ ?

ಮೀನಾಕ್ಷಿ : (ಬಾಗಿಲ ತೆಗೆಯುತ್ತ) ನಾನಂತೂ ಬಾಗಲಾ ತಗದಿನಿ, ಗಾಳಿ ಒಳಗ ಬಿಟ್ಟೀನಿ.

ಮೋಹನ : (ಬಾಗಿಲದ ಕಡೆ ಕೈ ತೋರಿಸಿ) ಬಾಗಲಾ ಏನೋ ತಗದಿದಿ, ಆದರ ನನಗೊಂದು ಹಾದಿ ಸಿಗಬೇಕಲ್ಲಾ. ನಿಮ್ಮ ನಿಮ್ಮ ಎದ್ಯಾಗ ಮುಚಗೊಂಡ ಬಾಗಲಾ ತಗರಿ, ಅಂದರ ನನ್ನ ಮುಖದಾಗ ನಿಮ್ಮ ಮುಖಾ, ನಿಮ್ಮ ಮುಖದಾಗ ನನ್ನ ಮುಖಾ ಕಂಡಾವು.

ತಾಯಿ : ನನ್ನ ಎದ್ಯಾಗಿನ ಬಾಗಲಾ ತಗದಿದ್ದೀನಂತ ನೀ ಹುಟ್ಟೀದಿ.

ಮೋಹನ : (ವಾದಿಸುವವನಂತೆ) ಛೆ ನೀನ ! ನೀ ನಿನ್ನ ಎದ್ಯಾಗಿನ ಬಾಗಲಾ ತಗದಿದ್ದರ, ನಾ ಸಾಯುತ್ತಿದ್ದೆ. ನೀ ನಿನ್ನ ಹೊಟ್ಟಿ ಬಾಗಲಾ ತಗದೀ, ಅದಕ್ಕ ಹಿಂಗ ನಾ ಹುಟ್ಟಿದೆ. ಏನದ ? ನಿನ್ನ ಮುಖದಾಗೂ ಕತ್ತಲಿ, ನನ್ನ ಮುಖದಾಗೂ ಕತ್ತಲಿ, ಒಬ್ಬರಿಗೊಬ್ಬರು ಎಲ್ಲಿ ಕಾಣಸ್ತೆವಿ ?

ತಾಯಿ : ಒಬ್ಬ ಮಗಾ, ತಾಯಿಗೆ ಆಡೋ ಮಾತಲ್ಲಪಾ ಇವು.

ಮೀನಾಕ್ಷಿ : ಹೆಚ್ಚಗಿ ಮಾತ ಬ್ಯಾಡಾ, ನೀ ನಡದ ಬಿಡು.

ಮೋಹನ : ಮೀನಾಕ್ಷಿ, ಜೀವನದಾಗ ಮೊದಲೇ ಸಲಾ ಹೇಳ್ತಿನಿ. ನೀ ಹೀಂಗ ಜೀವಿಸಿದರ ಭಾವ್ಯಾಗಿನ ಆವಿ ಆಗತಿದಿ.

ತಾಯಿ : (ಏನೋ ಹೊಳೆದವಳಂತೆ) ಹುಡಗಾಟಾ ನಡಿಸ್ಯಾನ, ಹಾದಿಲ್ಲಂತ ಹಾದಿ, ನೆಲದ ಮ್ಯಾಲೆ ಸಾವಿರಾರು ಬಿದ್ದಾವ.

ಮೀನಾಕ್ಷಿ : (ಬೇಕು ಬೇಡದವರಂತೆ) ಯಾವುದರ ಒಂದ ಹಾದಿ ಹಿಡದರಾತು.

ಮೋಹನ : (ತಗ್ಗಿದ ಧ್ವನಿಯಲ್ಲಿ) ನಾ ನಿಮ್ಮ ಸಂಗತಿ ಮಾತಿಗೆ ಇಳಿದದ್ದೇ ತಪ್ಪು. ಬರೇ ಮಾತಿನ್ಯಾಗರ ಎಲ್ಲರ ಒಂದ ಕಡೆ ಕೂಡಿ, ನಮ್ಮನ್ನ ನಾವು ತಿದ್ದಿಕೊತೀವಿ ಅಂತ ತಿಳದಿದ್ದೆ. ಆದರ ಎಲ್ಲಾ ವ್ಯರ್ಥ. ನನಗ ನನ್ನ

ಬಗ್ಗೆ ಭ್ರಮಾ, ನಿಮಗ ನಿಮ್ಮ ಬಗ್ಗೆ ಭ್ರಮಾ.

ತಾಯಿ : ನಮ್ಮನ್ನೇನ ತಿದ್ದತಿದೆೋ. ನಿನ್ನ ತಿದ್ದಿಕೋ ಮೊದ್ಲ. ನಿಮ್ಮಣ್ಣನ್ನ ತಿದ್ದು, ಮ್ಯಾಲೆ ನನ್ನ ತಿದ್ದಿವಂತೀ.

ಮೋಹನ : ಸುಳ್ಳs, ಇದರಾಗ ಅವನ್ಯಾಕ ತುರಕತಿರಿ.

ಮೀನಾಕ್ಷಿ : ಅವನ ಹೆಸರ ಎತ್ತಿದರ ಎಷ್ಟ ಸಿಟ್ಟು, ನೋಡs ಇವಗ.

ಮೋಹನ : ಬರೆ ಮಾತಿಗೆ ಸಿಲಕೊ ಅಷ್ಟು ಸರಳಿಲ್ಲಾ ನನ್ನದು, ಅಣ್ಣಂದು ಮತ್ತ ನಿಮ್ಮಿಬ್ಬರದು ಸಂಬಂಧಾ. ಮಾತನಾಡದ ತಿಳಕೊಳ್ಳೊ ವಿಷಯ ಅವು. ಅದಕ್ಕs ಜೀವನದಾಗ ಮೌನ ಬೇಕು.

ತಾಯಿ : ಮಾತು ಹೆಂಗ ಹೊಳ್ಳಸ್ತಾನ ನೋಡಿದಿಲ್ಲೊ.

ಮೀನಾಕ್ಷಿ : ಅವಸದೇನs, ನನಗ ಮೋದ್ಲಿಂದ ಗೊತ್ತದ. ಬರೇ ಪ್ರಿಟೆಂಡ ಮಾಡತಾನ. ಯ್ಯಾಕ ಸುಮ್ಮನ, ನೀವು, ನೀವು, ಏನರ ಮಾಡ ಕೊಳ್ಳರೀ, ನಾನಂತೂ ಓದಿಕೋತ ಕೂಡತೀನಿ.
(ಒಳಗೆ ಹೋಗುತ್ತಾಳೆ)
(ನಡುವೆ—'Shakespeare is a great dramatist. Faulkner wrote SOUND AND FURY.. ..SOUND AND FURY ..' ಎಂದು ಮೀನಾಕ್ಷಿಯ ಒಂದರಿಂದ ಇನ್ನೊಂದು ಧ್ವನಿ ರಿಂಗಣಗೊಳ್ಳು ತ್ತಿರುತ್ತದೆ. ಮತ್ತೆ ಮೀನಾಕ್ಷಿ, MACBETH ನ 'It is a tale told by an idiot' ಎನ್ನುವ ಸಾಲನ್ನು ಅನ್ನುತ್ತ ಹೊರಗೆ ಬರುತ್ತಾಳೆ.)

ಮೋಹನ : (ಕೆಣಕುವನಂತೆ) ನೀವಿಬ್ಬರು ಭಾವ್ಯಾಗಿನ ಆವಿ ನೋಡಿರಿ ?

ತಾಯಿ
ಮೀನಾಕ್ಷಿ : ನೋಡೇವಿ.

ಮೋಹನ : ಯಾರು ಇಲ್ಲದಾಗ ಹುಳಾ ಹಿಡಿಲಿಕ್ಕೆ ಭಾವಿ ನೀರ ಮ್ಯಾಲೆ ಓಡಾಡ ತಿರತದ. ಯಾರರ ಕಲ್ಲ ಒಗದ್ರ ಸಾಕು, ನಾಲ್ಕು ಕಾಲು ಹೊಟ್ಯಾಗ ಹಾಕ್ಕೊಂಡು ತಳಕ್ಕ ಸೇರತಿರತದ.

ಮೀನಾಕ್ಷಿ : (ಸಣ್ಣ ಹುಡುಗಿ ಹೇಳುವಂತೆ) ಅವ್ವಾ, ಮೋನ್ಯಾ ನಿನಗ ಆವಿ ಅಂತಾನ ನೋಡು.

ತಾಯಿ : ಅನ್ನಲೀ, ಅನ್ನಲೀ, ದೇವರ ಇಟ್ಟ ಬಿಟ್ಟಾನ ಆವಗ. ಪಾಪಾ ಜಾಸ್ತಿ ಆಧಂಗ ಇಂಥಾ ಮಾತು ಹೊರಬೀಳ್ತಾವ. ಅದು ಅವಂದು ತಪ್ಪ ಅಲ್ಲಾ. ದೇವರs ಅವನ ಕಡೆಂದ ಹೀಂಗ ಮಾತಾಡಸ್ತಾನ.

ಮೋಹನ : ಶೇಕ್ಸ್‌ಪಿಯರ್ ಅಂದಿ, ಫಾಕ್‌ನರ ಅಂದಿ, ಒಂದರ ನಿನ್ನದು ಅನ್ನೊ ಸ್ವಂತ ಮಾತು ? ಹೇಳು ಎಲ್ಲೆವ ? ಬಾಯಿಪಾಠಮಾಡಿದ್ದರಾಗಿಂದರ

ಹೇಳು ಹೌದಂದೇನು. ಛೆ! ಹೇಸಗಿ ಬರಲಿಕ್ಕೆ ಹತ್ತ್ಯದ ನನಗ ಥೇಟ್ ಗೊಂಬಿ ಇದ್ದ್ಹಂಗ್ ಇದ್ದಿ ನೋಡು.

ಮೀನಾಕ್ಷಿ : ನೀನರ ಏನೋ, ನೀನೂ ಗೊಂಬಿನ.

ಮೋಹನ : ನಾ ಯಾಕ ಗೊಂಬಿ ಆಗ್ಲಿ. ಇಷ್ಟೊತ್ತನಕಾ ನನ್ನ ಮಾತು ನೀ ಕೇಳಿರಬೇಕು.

ಹೋಗೋಣು ನಡಿ ನಾನು ನೀನು
ಈ ಪ್ರಶಾಂತ ಸಂಜಿಯಲ್ಲಿ,
ಹರಕು ಕೋಟಿಗೆ ಬಿದ್ದಾವೆನ್ನುವ ತೇಪೆಗಳೆಲ್ಲಾ,
ಸಾವಿರ ಕಣ್ಣಿಗೆ ಕಂಡಾವೆನ್ನುವ ಅಂಜಿಕೆ,
ನನಗೆಲ್ಲಿ ನಿನಗೆಲ್ಲಿ...............

ಅಂತ ನಾ ಬರದದ್ದು ಒಂದು ಗೊಂಬಿ ಬರಿಲಿಕ್ಕೆ ಸಾಧ್ಯ ಅದನs ?

ಮೀನಾಕ್ಷಿ : ನೀನು ಗೊಂಬಿ ಅಲ್ಲಾ ಅಂದರ ಯಾರ ಕೇಳತಾರೊ ? ದೇವರ ಕೈಯಾಗಿನ ಗೊಂಬಿಗಳ ನಾವೆಲ್ಲಾ ಅಂತ, ಒಂದು ಸಿನೆಮಾದ್ದು ಹಾಡದ.

ಮೋಹನ : (ಉದ್ವೇಗದಿಂದ) ಏನರ ಮಾಡ್ಲಿ ? ಒಂದು ತುಂಡ ಹಗ್ಗಾನರ ತಂದ ಕೊಡ್ರಿ, ಉರ್ಲರ ಹಾಕ್ಕೋತಿನಿ. ಮ್ಯಾಲೆ ನನ್ನಿಂದ, ನಿಮ್ಮಿಂದ ದೂರ ಓಡಿ ಹೋಗೋದು ಸಹಾ ಅಸಾಧ್ಯ ಆಗೇದ. ಎಲ್ಲೇರs ಓಡಿ ಹೋಗ್ಲಿ ?

ಮೀನಾಕ್ಷಿ : ಅವ್ವಾ ನಾ ಕೆಲಸಕ್ಕ ಹೋಗ್ತೀನಿ.

ಮೋಹನ : ನಿಮ್ಮಂಥಾವರ ಕೈಯಾಗ ಕಲತ ಹುಡುಗರ ಉದ್ಧಾರಾತು ಬಿಡು.

ಮೀನಾಕ್ಷಿ : (ಆವೇಶದಿಂದ) ಮೊದ್ಲ ನಿನ್ನ ಹಾದಿ ಹುಡಿಕ್ಕೊಳ್ಳೊ, ಮ್ಯಾಲೆ ನನಗ ಅಣಗಿಸೀಯಂತಿ.

ಮೋಹನ : (ಹುಚ್ಚನಂತೆ ಎಲ್ಲ ಮೂಲೆಗಳನ್ನು ಹುಡುಕುತ್ತ) ಎಲ್ಲಿನೂ ಸಿಗವಲ್ತು. ಎಲ್ಲಾ ಬರೆ ಮೂಲಿನ ಅವ. ಈ ಮನೀನ ಮೂಲಿ ಮ್ಯಾಲೆ ನಿಂತದ. ಇಲ್ಲಿ ಬರೋವರು ನಿಲ್ಲವರು ಎಲ್ಲಾರು ಮೂಲಿ ಅಂತಾ ತಲಿಯವರ.

ತಾಯಿ : ಹೊಸಾದ ತಗದಿದಿ ಏಳ, ರೊಳ್ಳಿ ಇವತ್ತು, ಹಾದಿ ಸಿಗವಲ್ತು ಅಂತ, ದರ್ದಿನಾ ಕಾಲೇಜಿಗೆ ಹೋಗ್ತಿದಿ, ಪ್ಯಾಟ್ಯಾಗ ಹೋಗ್ತಿದಿ.

ಮೋಹನ : ನನಗ ನಿಮಗ ಫರಕ ಬಂದದ್ದs ಇಲ್ಲೆ. ಹೊರಗಿನ ಹಾದಿ ಎಲ್ಲಾ ಗೊತ್ತಾವ ನನಗ. ಆದರ ಒಳಗಿನ ಹಾದಿ ಹುಡಕಬೇಕಾಗೇದ ನನಗ.

ತಾಯಿ
ಮೀನಾಕ್ಷಿ : (ನಗುತ್ತ) ಹುಡಿಕ್ಕೋತ ಕೂತಿರೋ. ಸಿಕ್ಕಾಗ ನಮ್ಮನ್ನು ಕರೀವಂತೀ.

ಮೋಹನ : ಒಮ್ಮೆಲೆ ಸಿಗಲಿಕ್ಕೆ ಅದು ಏನರ, ದೇವರ ಫೋಟೋಕ್ಕ ಕೈ

ಮಂಗಧಂಗ ?

ತಾಯಿ : ಆಡಿಸ್ಯಾಡು ; ಇರಲಿ, ಆದs ದೇವರ ನಿನಗ ಅಣಗಸ್ತಾನ.

ಮೀನಾಕ್ಷಿ : ಯ್ಯಾಕ ಅಳಿತೀವಿ ಗೊತ್ತಿಲ್ಲಾ. ಯಾಕ ಝಗಳಾಡತೇವಿ ಗೊತಿಲ್ಲಾ.

ತಾಯಿ : ಝಗಳಾಟಾನೂ ಇರೊದs ಹೊಡದಾಟಾನೂ ಇರೋದ. ಅಳೋದು ಇರೋದ. ಇಲ್ಲಿಕ್ಕರ ಜೀವನ ಹೆಂಗ ನಡೆದೀತ ಮಗಳ.

ಮೋಹನ : (ಅಣಗಿಸುತ್ತ) ಹೌದೇಳು, ನೀನು ಅಳದೇ ಇದ್ದ ದಿನಾನ ಇಲ್ಲ.

ತಾಯಿ : ಇವನ ಸಂಗತಿಯೇನ ಮೀನಾಕ್ಷಿ. ಕೆಲಸಕ್ಕ ನಡಿ.

(ಹೋಗುವರು.)

ದೃಶ್ಯ ೨

(ಮತ್ತೆ ಮೊದಲಿನ ದೃಶ್ಯದಲ್ಲಿದ್ದ ಮನೆ. ಮೋಹನ ಇಜಿಚೇರಿನಲ್ಲಿ ಕುಳಿತಿದ್ದಾನೆ. ಹೊರಗಿನಿಂದ ಬಾಗಿಲ ಬಡಿದ ಸದ್ದು. ಮೋಹನ ಬಾಗಿಲ ತೆಗೆಯುತ್ತಾನೆ. ತಾಯಿ ಒಳಗಿನಿಂದ ಪ್ರವೇಶಿಸುತ್ತಾಳೆ. ತಾಯಿಯ ತಮ್ಮನಾದ ಅಂತಪ್ಪ ಬರುತ್ತಾನೆ.)

ಅಂತಪ್ಪ : ಯಾಕವಾ ಅಕ್ಕಾ, ಹ್ಯಾಂಗ ಇದ್ದಿದಿ ?

ತಾಯಿ : ಹಿಂಗಿಂಗಂತೂ ಇದ್ದೀನಿ. (ಕಣ್ಣೀರು ತೆಗೆಯುವಳು)

ಅಂತಪ್ಪ : ಯಾಕೆ ? ಏನಾಗೇದ ಈಗ ಅಳೋಹಂತ ಪ್ರಸಂಗ ? ಸತ್ತವರು ಸತ್ತು ಹೋದ್ರು. ಇದ್ದವರು ಮುಂದಿನ ಜೀವನಾ ನೋಡಿ ಕಾಲಾ ಹಾಕೋದ.

ಮೋಹನ : (ತನ್ನಷ್ಟಕ್ಕೆ) ಲಂಚಾ ತಿನ್ನೋ ತಲಿಗೆ, ಕಾಲದ ವಿಚಾರ ? ಸತ್ತವರ ವಿಚಾರ.

ತಾಯಿ : (ಅಳುತ್ತ) ಹ್ಯಾಂಗ ಹಾಕಲೋ ಕಾಲಾನ......... ಸತ್ತವರು ಸತ್ತು ಹೋದ್ರು......ಅಂತ ಇರೋದ್ರಾಗs ಬರಿ ಕೊಟ್ಟಂಗ ಮಾತಾಡ ತಾನ ಈ ಮೋನ್ಯಾ....

ಅಂತಪ್ಪ : (ಸಿಟ್ಟಿನಿಂದ) ಏನೋ ಇಷ್ಟುದ್ದ ಬೆಳದಿದಿ. ತಿಳಿಯುವುದಿಲ್ಲ ನಿನಗ ? ಆಕಿಗೆ ಏನ ದುಃಖ ಆಗೇದಂತ.

ಮೋಹನ : ನೀನು ಯಾರು ಈ ಮನಿ ವಿಷಯದಾಗ ಕೈ ಹಾಕಲಿಕ್ಕೆ ?

ಅಂತಪ್ಪ . ಯಾರೆಂದರೇನೋ ? ಈ ಮನಿಗೆ ಯಜಮಾನರಿಲ್ಲಾ ಅಂತ ಕೈ

ಹಾಕೀನಿ.

ಮೋಹನ : ಒಬ್ಬ ಮನುಷ್ಯಾ ಇನ್ನೊಬ್ಬರ ಮನಿ ವಿಷಯದಾಗ ಕೈ ಹಾಕಬೇಕಾದರ ಮೊದಲ ತನ್ನ ಮನಿ ವಿಷಯದಾಗ ಕೈ ಹಾಕಿರಬೇಕೇನಪಾ.

ತಾಯಿ : ಬಹಳ ದಿನಕ್ಕೆ ಏನೋ ಅಪ್ಪ ಬಂದಾನಂದರ ಅವನ್ನ ಮನಿ ಬಿಟ್ಟು ಹೊರಗ ಹಾಕತೀನಿ ಅಂತಿದೆಲ್ಲೊ.

ಅಂತಪ್ಪ : ಏನೋ ಪಾಪಾ ಸಣ್ಣ ಹುಡುಗಾ ಮಾತಾಡತಾನ. ನಾ ಏನ ಅವನ ಮಾತು ಹಚಿಗೊಳೊದಿಲ್ಲಾ.

ಮೋಹನ : ಛೆ! ನಿನಗ್ಹ್ಯಾಂಗ ಹತ್ಯಾವೋ ? ಎಲ್ಲರ ನಿನ್ನದು, ಮೊದಲಿಂದ ಹಚಗೊಳ್ಳೋ ಸ್ವಭಾವs ?

ಅಂತಪ್ಪ : (ಬುದ್ಧಿ ಹೇಳುವವನಂತೆ) ಅಲ್ಲೋ, ಓದದ ಸುಳ್ಳ ಯಾಕ ನಿನ್ನ ಕರಿಯರ್ ಹಾಳಮಾಡಕೊತೀದಿ ? ಈ ಸರ್ತಿ ಮಾತ್ರ ನೀ ಫಸ್ಟ್ ಕ್ಲಾಸ್ ಬರದಿದ್ದರ...

ಮೋಹನ : ಮತ್ತ. ನೀ ನಿನ್ನ ಹಳೆ ರಾಗಾನ ತಗಿಯುವ ಹೌದಿಲ್ಲೋ ? ನಿನ್ನ ಮಗಳ್ನ ನನಗ ಕೊಡುದಿಲ್ಲಂತ. ನೀ ಹಾಡತಿರು, ನಾ ಕೇಳತಿರತಿನಿ.

ತಾಯಿ : ಅಂವಾ ಇತ್ತಿತ್ಲಾಗ ಭಾಳ ಕಲತಾನ, ಅವನ ಬಾಯಿಗೆ ಯಾಕ ಹತ್ತಿದೊ ?

ಅಂತಪ್ಪ : ಇದರಾಗ ಬಾಯಿಗೆ ಬಾಯಿ ಹತ್ತೋ, ಹಂತಾದ್ದೇನದನ ? ಅವಗೂ ನನ್ಹ್ಯಾಂಗ ಆಗು ಅಂತ ನಾ ಬೋಧಿಸೋದರಾಗ ಏನ ತಪ್ಪ ಕಾಣುದಿಲ್ಲ ನನಗೆ.

ಮೋಹನ : ಈ ಜಗತ್ತಿನ್ಯಾಗ ಒಂದರಂಗ ಇನ್ನೊಂದು ಇರೋದಿಲ್ಲಾ ಅಂತ ಮೊದಲ ತಿಳಕೊ, ಆಮೇಲೆ ನಿನಂಗರ ಆಗ್ತೀನಿ. ತಾಯಿ ಹಂಗರ ಆಗತೀನಿ.

ತಾಯಿ : ಹೋಗಲಿ ಬಿಡೋ, ಎಲ್ಲಾ ಅವರ ಅಣ್ಣನ ಗುಣಾನs ಕಲಿಲಿಕ್ಕೆ ಹತ್ಯಾನ. ಇವನರ ನನ್ನ ಕೈಗೆ ಬಂದಾನಂತ ತಿಳಿದಿದ್ದೆ.

ಅಂತಪ್ಪ : ಅಂವಾ ಅಂತೀ ಒಬ್ಬ ಗಾಗಾ,......

ಮೋಹನ : (ನಡುವೆ) ಅಂತಪ್ಪಾ ಇಲ್ಲಿ ತನಕ ನನ್ನ ಬಗ್ಗೆ, ಅವ್ವನ ಬಗ್ಗೆ, ಅಣ್ಣನ ಬಗ್ಗೆ ಯಾರು ಭ್ರಮಾ ಕಟ್ಟಿಕೋ ಅಂದಿದ್ದರೋ ನಿನಗ ? ನಿನ್ನ ಭ್ರಮಾನೂ ನನ್ನ ತಪ್ಪ ಕಾಣಸ್ತದ ?

ಅಂತಪ್ಪ : ನಾಟಕಂತ, ಚಾಟಕಂತ, ಒಂದs ಎರಡ.......ಮತ್ತ ಆ ಪ್ರಿನ್ಸಿಪಾಲ್‌ಗ ಅಪ್ಪಾ ಅಣ್ಣಾ ಅಂದು ನಾ ಕೆಲಸ ಕೊಡಿಸಿದರ ಅವನ್ನ ಸಿಕ್ಕಂಗ ಬೈದಾಡತಾನಂತ ?

ಮೋಹನ : ಯಾಕ ಬೈಬಾರದು ?

ಅಂತಪ್ಪ : ಆ ಪ್ರಿನ್ಸಿಪಾಲನೊಳಗ, ಮತ್ತ ನಾಲ್ಕು ಮಂದ್ಯಾಗ ನನ್ನ ಮರ್ಯಾದಿ ಹೋತು ಹೊರ್ತು ನಿಮ್ಮಣ್ಣಂದಲ್ಲ.

ಮೋಹನ : ಒಳ್ಳೆ ಛಲೋ ಹಾದಿನs ಹುಡಿಕಿಯೊ! ನಾಲ್ಕು ಮಂದಿ ಸಲುವಾಗಿ ಜೀವನಾ ನಡಸ್ತಿಯೋ ಅಥವಾ ನಿನ್ನ ಸಲುವಾಗಿ ಜೀವಂತ ಇದ್ದಿಯೋ ?

ಅಂತಪ್ಪ : ನಾಲ್ಕು ಮಂದಿ ಸಲುವಾಗಿ ಜೀವಿಸಿದರ ಏನರ ಹೆಸರ ಗಳಿಸೇವು.

ತಾಯಿ : ನಮ್ಮ ಅಂತುಂದು ನಾಲ್ಕ ಮಂದ್ಯಾಗ ಹೋದ ಮರ್ಯಾದಿ ಎಂದರ ಹೊಳ್ಳಿ ಬರ್ತದ ?

ಅಂತಪ್ಪ : ನಾಲ್ಕ ಮಂದಿ ಹೆಂಗ ಇರತಾರ ಹಂಗ ಇದ್ದರ ನಮಗೂ ಛಲೋ ನಿಮಗೂ ಛಲೋ.

ಮೋಹನ : (ತನ್ನಷ್ಟಕ್ಕೆ) ಏನ ಬಿಡದ ಗಂಟಾಗಿ ಬಿದ್ದರೊ ಇವರು ನನಗ! ಓಡಿ ಹೋದೆನಂದರ ಎಲ್ಲಾ ಕಡೆ ತಾಯಿ ಅಂಥಾವರ, ಅಂತಪ್ಪನಂಥಾವರ.

ಅಂತಪ್ಪ : ಅಲ್ಲೋ, ಆ ನಿಮ್ಮ ಫ್ರೆಂಡ್ ಸುರೇಶಾ ಫಸ್ಟ್‌ಕ್ಲಾಸ್ ಬಂದ ನಂತಲ್ಲೊ ?

ಮೋಹನ : (ಸಿಟ್ಟನಿಂದ) ಅವರಪ್ಪಾ, ದಿನಾ ಎರಡೆರಡು ಬೆತ್ತ ಹಿಡಕೊಂಡು, ಕಮ್ಮಾರ ಕುಲಮ್ಯಾಗ ಕಬ್ಬಿಣಾ ಕಾಸೋ ಹಂಗ ಕಾಸತಾನ, ಬಾಯಿ ಪಾಠಾ ಮಾಡಸತಾನ, ಸಿಕ್ಕಂಗ ಕಟಿತಾನ. ಹಿಂಗಾದರ ಫ್ಯಾಕ್ಟರಿ ಒಳಗಿಂದ ಮಾಲು ಹೊಸಾದ್s ಬರ್ತದ.

ಅಂತಪ್ಪ : ನೀನೂ ಹಂಗs ಮಾಡಬೇಕು.

ಮೋಹನ : ನಾ ಮೊದಲಿಂದ ಏನ ಒಂದು ಕರಿಯುರಿಷ್ಟ ಫ್ಯಾಕ್ಟರಿ ಹಾಕ್ಕೊಂಡಿಲ್ಲಾ—

ಅಂತಪ್ಪ : (ಅಂತರ್ಮುಖಿಯಾಗಿ) ನಿಮ್ಮ ಅಪ್ಪ ಏನ ಓದಸ್ತಿದ್ದರು ನಮ್ಮ ಕಡೆಂದ!

ಮೋಹನ : ನಮ್ಮಪ್ಪ ಕರಿಯದಿಷ್ಟ ಅಂತ ನಾವೂ ಯಾಕ ಕರಿಯುರಿಷ್ಟ ಆಗ ಬೇಕೋ ? ನಾ ಏನ ನಿಮ್ಹಂಗ ನಾಲ್ಕು ಮಂದಿ ಸಲುವಾಗಿ ಜೀವನಾ ನಡಸೊವಲ್ಲಾ. ನಾ ಪಾಸಾದರೂ ಅಷ್ಟ, ನಪಾಸಾದರೂ ಅಷ್ಟ.

ತಾಯಿ : ಏ ಅಂತು, ಅಂವಾ ನೀ ಒಂದ ಮಾತಾಡಿದರ, ಹತ್ತ ಮಾತಾಡತಾನ. ಸುಮ್ಮನ ನಡಿ ಒಳಗ. (ಇಬ್ಬರೂ ಒಳಗೆ ಹೋಗುತ್ತಾರೆ.)
(ಇದೇ ಹೊತ್ತಿಗೆ ಮೋಹನನ ಗೆಳೆಯ ಸುರೇಶ ಬರುತ್ತಾನೆ.)

ಮೋಹನ : ಹಲ್ಲೋ ಸುರೇಶ ಕಾಂಗ್ರ್ಯಾಚುಲೇಶನ್ಸ್.

ಸುರೇಶ : ಅದರ ಬಗ್ಗೆ ಮಾತ್ರ ನನ್ನ ಮುಂದ ಮಾತ ಎತ್ತಬ್ಯಾಡ ನೋಡು.

ಪಾಪಾ ಮಾಡಿದವರಷ್ಟು ಹೇಸಗಿ ಬಂದದ ನನಗ.

ಮೋಹನ : ಯಾಕೋ ಅದರಾಗೇನದ ?

ಸುರೇಶ : ಎಂದರ, ಶೇಕ್ಸಪಿಯರ್ ಬರೇ ಬಾಯಿಪಾಠಾ ಮಾಡಲಿಕ್ಕೆ ಅಷ್ಟ ಇದ್ದಾನೇನೊ ? ಜೀವನಾ ತಿಳಕೊಳ್ಳಿಕ್ಕೆ ಅವಾ ನಾಟಕ ಬರದರ ಹೊಟ್ಟಿ ತುಂಬ ತಿಂದ ಕುತೆವಿ ಇವತ್ತ ಅವನ್ನ.

ಮೋಹನ : ಇದಕ್ಕೇನರ ಮಾರ್ಗ ಅದ ಏನು ?

ಸುರೇಶ : (ಗಂಭೀರನಾಗಿ) ಒಂದ ಅಂದರ ಒಂದs ಅದ. ಈ ಅಪ್ಪಾ, ಅವ್ವಾ, ಮನಿ, ಮತ್ತ ಈ ಓದು ಎಲ್ಲಾ ಬಿಟ್ಟು ಓಡಿಹೋಗಿ ಬಿಟ್ಟರ ಎದರದೂ ಕಾಟs ಇಲ್ಲಾ.

ಮೋಹನ : ಏನ ಹುಚ್ಚಿದ್ದಿ ನೀನು ? ನೀ ಓಡಿ ಹೋದಿ ಅಂತ ತಿಳಕೋ. ಆದರ ಅವರೇನರ ನಿನ್ನ ತಲ್ಯಾಗಿಂದ ಓಡಿ ಹೋಗಲಿಕ್ಕೆ ಸಾಧ್ಯದ ಏನು ? ಒಂದ ಅಂದರ—ಸಾಯಬೇಕು, ಇಲ್ಲಾ ಇರಬೇಕು.

ಸುರೇಶ : ಜೀವನದಾಗ ನನಗ ನಿರ್ಲಿಪ್ತತನ, ಬರೋಕ್ಕ ಮುಂಚಿನ ಬಂದದ. ಅದ ತ್ರಾಸ ಆಗೇದೊ.

ಮೋಹನ : ಯಾವ ಮನುಷ್ಯಾಗ ತನ್ನಿಂದ, ತನಗ ದೂರ ಓಡಿಹೋಗಲಿಕ್ಕೆ ಸಾಧ್ಯದ ? ಎಲ್ಲಾರೂ ಸಿಕ್ಕು ಹಾಕ್ಕೊಂಡವರ ಹಂಗs ಇದ್ದೇವಿ.

ಸುರೇಶ : ಭಾಳ ನಾಜೂಕನ ಅದ ಈ ಜೀವನಾ.

ಮೋಹನ : ಎಷ್ಟ ನಾಜೂಕದ ಅಂದರೆ ಈ ಸಮುದ್ರದ ಮ್ಯಾಲೆ ಬೀಸೂ ಗಾಳಿ ಅಷ್ಟ ನಾಜೂಕದ. ನಾನೂ ಭಾಳ ಪ್ರಯತ್ನಾ ಮಾಡಿದೆ. ಆದರ ಏನದ ?

ಸುರೇಶ : ಎಲ್ಲಿನೂ ಜೀವನದಾಗ communication ಸಾಧ್ಯ ಇಲ್ಲಾಂತ ತಿಳಿದ ಬಿಟ್ಟರ, ಅಂಥಲ್ಲೆ ಜೀವಿಸಿದರ ಏನಾಗತಿವಿ ?

ಮೋಹನ : ಕೂಪಮಂಡೂಕರಾಗತೇವಿ.

ಸುರೇಶ : ಅದs ಬ್ಯಾಡಗೇದೊ ನನಗ.

ಮೋಹನ : ಕೂಪಮಂಡೂಕತನಾನು ಜೀವನದಾಗ ಒಂದು stage ಅದನೋ.

ಸುರೇಶ : ಒಟ್ಟಿನ ಮ್ಯಾಲೆ ಹಿಂಗ ಆಗಲಿಕ್ಕೆ ಏನ ಕಾರಣದ ಹುಡುಕತಿನಿ. ಜೀವನದಾಗಿನ ಎಳಿ ಎಲ್ಲೆಲ್ಲಿ ಅವ ಹುಡಕತಿನಿ. ಒಂದ ಹೊಡ್ತಕ್ಕ ಕೂಡಿದವೂ, ಇರತಿನಿ, ಇಲ್ಲಾಂದರ ಎಲ್ಲೇರ ಓಡಿಹೋಗಿ ಸನ್ಯಾಸಿ ಆಗತೇನಿ.

(ಮೀನಾಕ್ಷಿ ಹೊರಗಿನಿಂದ ಬರುತ್ತಾಳೆ)

ಮೀನಾಕ್ಷಿ : ಏ ಮೋನ್ಯಾ, ಅಪ್ಪ ಕಾಣುದಿಲ್ಲಲ್ಲೋ.

ಮೋಹನ : ಅಂತಪ್ಪ ಬಂದಾನ.

ಮೀನಾಕ್ಷಿ : ಯಾವಾಗ ಬಂದಿದ್ದ.
(ಅಂತಪ್ಪ ಮತ್ತು ತಾಯಿ ಒಳಗಿನಿಂದ ಬರುತ್ತಾರೆ)

ಅಂತಪ್ಪ : (ನಗುತ್ತ) ಯಾಕವಾ ಹೆಂಗ ನಡದದ ನೌಕರಿ ?

ಮೀನಾಕ್ಷಿ : ನಡದದ ಸಾಧಾರಣಾ (ಒಳಗೆ ಹೋಗುವಳು)

ತಾಯಿ : ಆಕಿದೇನೋ ಛಲೋ ನಡದದ. ಒಬ್ಬರ ಸಂಗತಿನೂ ಮಾತಾಡಾಕಿನs ಅಲ್ಲ—ಆಕಿ.
(ಇದೇ ಹೊತ್ತಿಗೆ ಒಳಗಿನಿಂದ ಮತ್ತೆ ಬಾಯಿಪಾಠದ ಧ್ವನಿ ಕೇಳಿಸುತ್ತದೆ : Frialty thy name is woman. This line is taken from Shakespear's Hamlet. Hamlet said this line to his mother— ಎಂದು ಪಾಠ ಮಾಡುತ್ತಿರುವ ಮೀನಾಕ್ಷಿ)

ಮೀನಾಕ್ಷಿ : (ಒಳಗಿನಿಂದ ತನ್ನಷ್ಟಕ್ಕೆ) Shakespeareನ ಪೇಪರಂತೂ ಬಾಯಿಪಾಠಾ ಆತು. Criticism ಪೇಪರಿನಾಗಷ್ಟು ಪಾಠಾ ಮಾಡಿದರಾತು. 'Communication and values are the two pillars of criticism'..........
(ಎಂದು ಮತ್ತೆ ಬಾಯಿಪಾಠ ಮಾಡುತ್ತಾಳೆ).

ಅಂತಪ್ಪ : ನಾ ಇನ್ನ ಹೋಗ್ತೀನಿ, ಮುಂದಿನ ಸಲಾ ಬಂದಾಗ ಮೀನಾಕ್ಷಿಗೆ ವರಾ ಹುಡಕಿರ್ತಿನಿ.
(ಹೋಗುವನು)

ಸುರೇಶ : ಯಾಕೋ ಮೋಹನ ಹಿಂಗ್ಯಾಕ ಕೂತಿದಿ ಖಿನ್ನಾಗಿ ?

ಮೋಹನ : ನಮ್ಮ ಮಾಮಾ ಬಂದಿದ್ದಾ.

ಸುರೇಶ : ಏನರ ಕೆಲಸಾ ಮಾಡತಾನ ?

ಮೋಹನ : ಅವ ರೆವಿನ್ಯೂದಾಗ ಕ್ಲಾರ್ಕ ಇದ್ದಾನ.

ಸುರೇಶ : ಸಿಕ್ಕಂಗ ತಿನತಿರಬೇಕು.

ಮೋಹನ : ಕೇಳತಿದೆನೋ ?

ಸುರೇಶ : ಇದನ್ನೆಲ್ಲಾ ನೋಡಿ, ಕೇಳಿ ಮಾಡೊತಲೆ ಮತ್ತ ಓಡಿ ಹೋಗ ಬೇಕನ್ನಸ್ತದ.

ಮೋಹನ : ಛೆ ನಿನ್! ಇಲ್ಲೇ ತಪ್ಪೋದು ನೋಡು ನೀನು. Moral cowards ಇವರು. ಮರ್ಯಾದಿ ಅಂತ ಬಡಕೊಳ್ಳೊ ವ್ಯಕ್ತಿಗಳಿವು. ಅವರ ಮರ್ಯಾದಿ ತಗಿ. ಸಾಯುತಾರ. ನಮಗ ಇವರ ವಿರುದ್ಧಾ. ಎಲ್ಲಾ

ಒಂದಕ್ಕೊಂದು ವಿರುದ್ಧ 'ವರ್ತಸ್ತಾವಿಲ್ಲಿ.

ಸುರೇಶ : ಈಗ ಒಟ್ಟಿ ನಾನು ನೀನು ಕೂಡೆ ಎಲ್ಲೆರ ದೂರ ಓಡಿಹೋಗೋಣ.

ಮೋಹನ : ಆದರ ಹೆಂಗೋ ? ಹುಟ್ಟ್ಯಾನ್ಸ ಕಲ್ಲ ಕಟಿಗೊಂಡ ಬಿದ್ದೇವಿ. ಎಲ್ಲಿಂದ ಏಳ್ಳಿಕ್ಕಿ ಆದೀತು.

ಸುರೇಶ : ಆದರೂ—

ಮೋಹನ : ನನ್ನೊಳಗಿಂದ ನಾ ಹೆಂಗ ಬೇರ್ಪಡ್ಲೋ ? ಸತ್ತಾಗ ಮಾತ್ರ ನಾ ನನ್ನಿಂದ ಬೇರ್ಪಟ್ಟೇನ ಹೊರತು ಜೀವಂತ ಇದ್ದಾಗ ಹೆಂಗ ಸಾಧ್ಯದ ?

ಸುರೇಶ : ನೀ ಬಿಟ್ಟರ ಬಿಡು ನಾ ಹೋಗತೀನಿ. ದೂರ ಒಂದು ಪರ್ವತದ ವ್ಯಾಲೆ ಕೂತು, ಇದನ್ನೆಲ್ಲಾ ನೋಡಿ ನಗತೀನಿ.
(ಹೋಗುವನು)

ಮೋಹನ : (ತನ್ನಷ್ಟಕ್ಕೆ) ನಗತಾನಂತ ನಗತಾನ, ಛೆ ! ಸುರೇಶಾ ನೀ ಜೀವನದಾಗ ಸೋತಿದೊ ಸೋತಿದಿ.
(ಹೋಗುವನು)

ದೃಶ್ಯ ೩

(ಸುರೇಶನ ಮನೆಯ ಮುಂಭಾಗವೇ ರಂಗಸ್ಥಳ. ಒಂದು ಟೇಬಲ್ಲು ಹಾಗೂ ಕುರ್ಚಿಗಳನ್ನು ಇಟ್ಟುಕೊಂಡು ಸುರೇಶ ಬಾಯಿಪಾಠ ನಡೆಸಿರುತ್ತಾನೆ. ಇದೇ ಹೊತ್ತಿಗೆ, ಹೊರಗಿನಿಂದ ಮೋಹನ ಮತ್ತು ಮಲ್ಲಾರಿ ಬರುತ್ತಾರೆ)

ಸುರೇಶ : ಯಾರವರು ಹೊರಗ ನಿಂತವರು ?

ಮೋಹನ : ನಾನು, ಮತ್ತ ಮಲ್ಲಾರಿ.

ಸುರೇಶ : (ಎದ್ದು ಗಡಿಬಿಡಿಸಿ ತನ್ನ ಪುಸ್ತಕಗಳನ್ನೆಲ್ಲಾ ಕಾಣಿಸದಂತೆ ಮುಚ್ಚಿಡುತ್ತ) ಬಾರಪಾ, ಬಾ. ಅಗದಿ ನಿನ್ನ ನೆನಪು ಮಾಡಿಕೊಳ್ಳೊ ಮುಂದs ಬಂದಿ.

ಮಲ್ಲಾರಿ : (ಸುಳ್ಳು ಗಂಭೀರತೆ ನಟಿಸುತ್ತ) ಅವರು ಸ್ಟಡಿ ಮಾಡತಿರತಾರ ಯಾಕಪಾ ಅಂದರೂ ಕೇಳ್ಳಿಲ್ಲ, ನೋಡರಿ.

ಸುರೇಶ : (ದೇಶಾವರಿ ನಗಿ) ಛೆ ! ಏನ ಸ್ಟಡಿರಿ ಇದು.

ಮೋಹನ : (ಸಣ್ಣ ಧ್ವನಿಯಲ್ಲಿ) ನಿನ್ನಾ ಫಾದರು ಮನ್ಯಾಗ ಇದ್ದಾರೇನು ?

ಸುರೇಶ : ಒಳಗ ಕೂತಾರ. ಈಗ, ಪಾಠಾ ಒಪ್ಪಿಸಿಕೊಳ್ಳೊ ಟ್ಯಾಮೆನಪಾ.

ನೀವು ಬಂದದ್ದು ಒಳ್ಳೆದ ಆತು.

ಮೋಹನ : ಭಾಳ ಅಂಜತಿದಪಾ ನಿಮ್ಮಪ್ಪಗ, ನೀ ಒಮ್ಮೆ ಸಿಡದ ನಿಲ್ಲಬಾರದ ?

ಸುರೇಶ : ಹಂಗ್ಹೆಂಗ ಆದೀತೋ ಮನಿ ಮರ್ಯಾದಿ ಪ್ರಶ್ನಾ ಅದ.

ಮಲ್ಲಾರಿ : ನಮ್ಮನ್ಯಾಗಂತೂ ಯಾಕ ಓದತಿದಿ ಕೇಳವರಿಲ್ಲಾ. ಯಾಕ ಓದಲಿಲ್ಲಾ ಅಂತ ಕೇಳವರಿಲ್ಲಾ.

ಸುರೇಶ : ನಮ್ಮನ್ಯಾಗ ಹಂಗಲ್ಲ ನೋಡರಿ. ನಮ್ಮಪ್ಪಗ ನಾ ಡಾಕ್ಟರಾಗಿ, ನಾಲ್ಕ ಮಂದ್ಯಾಗ ಶಾಣ್ಯಾ ಆದರ, ನಾ ಅವಗ ಹುಟ್ಟಿದ್ದಕ್ಕ ಸಾರ್ಥಕ ಅಂತಾನ.

ಮೋಹನ : ಒಟ್ಟು ನಿನ್ನ ಇಚಕನ್ನ ಮಾಡಬೇಕಂತಾನ ನಿಮ್ಮಪ್ಪಾ.

ಮಲ್ಲಾರಿ : (ಮೋಹನನಿಗೆ) ಇಚಕ ಅಂದರ ಏನ ಅರ್ಥರಿ ?

ಮೋಹನ : (ಸುರೇಶನ ಕಡೆಗೊಮ್ಮೆ ನೋಡಿ) ಅದರರ್ಥ ಅವ್ವಾಳ್ಯಾ ಅಂತ.

ಸುರೇಶ : ನಾ ಅವ್ವಾಳ್ಯಾ ಇದ್ದೆನಂತನಸ್ತದ ನಿನಗ ?

ಮೋಹನ : ಮತ್ತ ನಿಮ್ಮಪ್ಪನ ಎದರಸೋ ಅಷ್ಟ ಗಂಡಸ್ತನಾ ನಿನ್ನ ಹತ್ತರ ಇರಲಿಕ್ಕರ....

ಸುರೇಶ : ಮೊದಲಿನಿಂದ ಹೊಡದು ಬಡದು ನನ್ನ ಪಳಗಿಸ್ಯಾನ.

(ಇದೇ ಹೊತ್ತಿಗೆ ಸುರೇಶನ ತಂದೆ ಒಳಗಿನಿಂದ ಬರುತ್ತಾನೆ. ೬೫ ರ ವ್ಯಕ್ತಿ, ಗಡದ್ದಾಗಿ ನೆಹರು ಶರ್ಟ, ಕನ್ನಡಕ ಹಾಕಿಕೊಂಡಿದ್ದಾನೆ.)

ತಂದೆ : (ಸುರೇಶನ ಕಡೆಗೆ ನೋಡುತ್ತ) ಯಾರ್‍ನ ಹೊಡದಿದ್ದೆ, ಯಾರ್‍ನ ಪಳಗಿಸಿದ್ನಪಾ.

ಸುರೇಶ : ನೋಡದ್ಯಾ ಹೆಂಗ ಆಗಲೆ ವಾಸನಿ ಹಿಡದಾನ ?

ಮೋಹನ : ನಿಮ್ಮ ಮಗನ್ನ.

ತಂದೆ : ಹೊಡದಿದ್ದೆ, ಬಡದಿದ್ದೆ ಅಂತ ನಾಲ್ಕು ಮಂದ್ಯಾಗ ತಲಿ ಎತ್ತೊ ಹಂಗ ಆಗೇದ ನನಗ.

ಮೋಹನ : ನಿಮ್ಮ ತಲಿ ನಾಲ್ಕು ಮಂದ್ಯಾಗ ಯಾಕ ಏಳಬೇಕು ?

ತಂದೆ : ಅರೇ ಇವನ, ನಾಲ್ಕು ಮಂದ್ಯಾಗಿಲ್ಲದ ನಿನ್ನ ಮುಂದ ಎತ್ತಲೀ ? ಮೂಸ ಹಾರದ ಹುಡುಗರು. ಹುಚ್ಚುಚ್ಚ ಏನರ ಮಾತಾಡಬ್ಯಾಡಾ.

ಮಲ್ಲಾರಿ : ನಮಪ್ಪನೂ ಹಿಂಗ ಅಂಜಿಸಿಕೊಂಡಿದ್ದಾ.

ತಂದೆ : ಬಿಡತಾರ ಮತ್ತು ನಿಮ್ಮಂಥಾ ಉರ್ಧಟ ಮಕ್ಕಳು ಹುಟ್ಟಿದರs. ಇವ್ಯಾರೋ ಸುರೇಶಾ ಭಾಳ ಮಾತಾಡತಾನ.

ಸುರೇಶ : ಮಾಸ್ತರಿದ್ದರಲ್ಲಪಾ. ಇಂಗ್ಲಿಷ ಕಲಿಸ್ತಿದ್ದರು....

(ನಡುವೆ)

ಮೋಹನ : ನಿಮ್ಮ ವಯಸ್ಸಿನವರಿಗೆಲ್ಲಾ ಹಿಂದಕ ಎ. ಜಿ. ಗಾರ್ಡಿನರ್‌ನ್ನ ಕಲಿಸಿ ಕಲಿಸಿ ಇಚ್ಚಕರನ್ನ ಮಾಡತಿದ್ದರು.

ತಂದೆ : (ಆಶ್ಚರ್ಯದಿಂದ) ಓಹೊ ! (ಅಣಗಿಸುವಂತೆ) ಎಂಥಾವರ ಹೊಟ್ಟೀಲೆ ಎಂಥಾ ಮಗ ಹುಟ್ಟಿದೆಪಾ ! ಒಬ್ಬ ದೇವತಾ ಮನುಷ್ಯ ಇದ್ದಾಂಗ ಇದ್ದರು ಅವರು.

ಮೋಹನ : ಏನ ಮಾಡಿದರಿ ಅವನ್ನೆಲ್ಲಾ ನೀವು ಕಲತು ? ಈ ಸುರೇಶನಂಥವರ್ನ ತಯಾರ ಮಾಡಿದಿರಿ ಆತು.

ತಂದೆ : ಇದು ನನ್ನ ಮನಿ ಅದ. ಹೆಂಗ ಬೇಕ ಹಂಗ ಮಾತಾಡಬ್ಯಾಡಾ. ಮಾಸ್ತರ ಮಾರಿ ನೋಡಿ ಏನೋ ಸುಮ್ಮನ ಇದ್ದೀನಿ. ಏ ಸುರೇಶಾ ಇವತ್ತ ಸಂಜಿ ಒಳಗ ನಾ ಹೇಳಿದ್ದೆಲ್ಲಾ ಬಾಯಿಪಾಠ ಒಪ್ಪಿಸಬೇಕು ನೋಡು. ತಿಳಿತಿಲ್ಲೊ ?

ಸುರೇಶ : ಹುಂನ್ರಿ.

ತಂದೆ : ನಮ್ಮ ಹುಡುಗನ್ನ ಮುಂದ ಡಾಕ್ಟರನ್ನ ಮಾಡಬೇಕಂತ ಮಾಡೀನಿ. ಆತು, ನಾ ಹೊರಗ ಹೋಗ ಬೇಕಾಗೇದ ಹೋಗ್ತಿನಿ (ಹೋಗುವನು).

ಮೋಹನ : (ಏನೂ ಮಾಡಲು ತೋಚದೆ) ಏ ಸುರೇಶಾ ಈಗ ಒಂದು ನಾಟಕ ಆಡೋಣ. ನಾ ನಿಮಪ್ಪ ಆಗ್ತೇನಿ. ಈ ಮಲ್ಲಾರಿ ನಿಮ್ಮವ್ವ ಆಗ್ಲಿ.

ಸುರೇಶ : ತಡಿ, ತಡಿ, ಗೇಟ ದಾಟಿ ಹೋಗ್ಯಾನಿಲ್ಲೊ ನೋಡ್ತೀನಿ. (ಹೊರಗೆ ನೋಡಿ) ಹುಂ, ದಾಟ್ಯಾನ.

ಮಲ್ಲಾರಿ : (ಹೆಣ್ಣುಮಕ್ಕಳಂತೆ, ಸೊಂಟದ ಮೇಲೊಂದು ಕೈ ಹಾಗೂ ಗಲ್ಲದ ಮೇಲೆ ಇನ್ನೊಂದು ಕೈ ಇಟ್ಟು, ಸೊಂಟವನ್ನ ತಿರುವುತ್ತ) ಏನ್ರಿ ಮುಂದ ಸುರೇಶನ್ನ ಏನ ಮಾಡಬೇಕಂತ ಮಾಡಿರಿ.

ಮೋಹನ : (ಠೀವಿಯಿಂದ) ಅವನ್ನ ಡಾಕ್ಟರ್ ಡಾಕ್ಟರ್ನ ಮಾಡತೇನಿ. ದೊಡ್ಡದೊಡ್ಡ ವರು ಹೆಣ್ಣ ಕೊಡ್ಲಿಕ್ಕೆ ಬರತಾರ, ಹೆಚ್ಚಗಿ ವರದಕ್ಷಿಣೆ ಇಸಗೋತಿನಿ. ನಾಲ್ಕು ಮಂದ್ಯಾಗ ಏನ ಅವಾಗ ನನ್ನ ಠೀವಿ (ಗಹಗಹಸಿ ನಗುವನು).

ಸುರೇಶ : ಆದರ ಲಗ್ನಾಗವಾ ನಾ ಅಲ್ಲೇನಪಾ ?.......

ಮೋಹನ : (ಅದೇ ಧಾಟಿಯಲ್ಲಿ) ಲಗ್ನಾ ನೀ ಆದರು ರೊಕ್ಕಾ ನಾ ಇಸಗೊಳ್ಳಾವ. ಯಾಕಂದರ ನಾ ನಿನಗ ಕಲಸಿದ ಹಣಾ ತಿರಗಿ ಬರಬೇಕಲ್ಲಾ.

ಸುರೇಶ : ಹಾಂಗಿದ್ದರ ನಾಯೇನ ಡಾಕ್ಟರ್ ಆಗಲಿಕ್ಕೆ ಒಲ್ಲೆ. ನಿನಗ ನಿನ್ನ ಹಣಾ ಬೇಕು, ಮ್ಯಾಲೆ, ನಾಲ್ಕು ಮಂದ್ಯಾಗಿನ......

ಮೋಹನ : ಮರ‍್ಯಾದಿಸೂ ಬೇಕು. ಎರಡೂ ದಡದ ಮ್ಯಾಲೆ ಕಾಲಿಟ್ಟು ನಡೆದ ವರು ನಾವು.

ಮಲ್ಲಾರಿ : ನನಗ ಭಂಗಾರದ ದಾಗಿನಾ ಬೇಕು. ಪೀತಾಂಬರ ಉಟಕೊಂಡ ಅಡ್ಡಾಡತಿದ್ದರ ನಾಲ್ಕು ಹೆಣಮಕ್ಕಳೊಳಗ................

ಮೋಹನ : ನಿನ್ನದು ಡೌಲರ ಕಂಡಿತು.

ಸುರೇಶ : ಹ, ಹ, ರಂಗತಾಲಿಮು, ಸಾಕಿಗ.

ಮೋಹನ : ನಿಮ್ಮಪ್ಪನ ಆಕ್ಟಿಂಗ್ ಹೆಂಗ ಮಾಡಿದೆ ನೋಡು.

ಸುರೇಶ : (ಖಿನ್ನನಾಗಿ) ಅದಕ್ಕ ಓಡಿಹೋಗ ಬೇಕಾಗಿದೋ ನನಗ.

ಮಲ್ಲಾರಿ : ಓಡಿಹೋಗತೀರs ?

ಮೋಹನ : ಹೌದಂತ.

ಸುರೇಶ : ಮತ್ತ ಕಾಲೇಜಿನಾಗ ಭೆಟ್ಟಿ ಆಗೋಣಲ್ಲಾ ಹೆಂಗಾದರೂ ಇಲೆಕ್ಷನ್ ಅದ....

ಮೋಹನ : ಹೋಗೋಣಂತ ತಡಿಯೋ. ನನ್ನ ಆಕ್ಟಿಂಗ್ ಯಾರಿಗರ ಬರತದೇನು? ನಾ ನನ್ನ ತಾಯಿ ಆ್ಯಕ್ಟಿಂಗ್ ಮಾಡತೀನಿ. ನನ್ನ ಅಕ್ಕನ ಆ್ಯಕ್ಟಿಂಗ್ ಸುರೇಶ ಮಾಡತಾನ.

ಮಲ್ಲಾರಿ : ನನ್ನ ಕಡೆಂದಂತೂ ಸಾಧ್ಯನs ಇಲ್ಲಪಾ.

ಸುರೇಶ : ನನಗ ನನ್ನದೊಂದ ಆ್ಯಕ್ಟಿಂಗ್ ಬಿಟ್ಟರ ಬ್ಯಾರೆ ಅವರವು ಪುಂಗಿ.

ಮೋಹನ : ಛೆ, ಏನ ಜನರಪಾ ನೀವು, ನಿಮಗ ನಿಮ್ಮನ್ನ ಬಿಟ್ಟರ ಬ್ಯಾರೆ, ಜಗತ್ತ ಇದ್ದಂಗ ಕಾಣುದಿಲ್ಲಾ. ಯಾಕ ಸುಮ್ಮನ? (ಮೌನ) ನಡಿಪಾ ಮಲ್ಲಾರಿ, ಕಾಲೇಜಿನಾಗ ಕೂಡೋಣಾಂತ.

ಸುರೇಶ : (ಅಳುವ ಧ್ವನಿಯಲ್ಲಿ) ನಮ್ಮಪ್ಪಗ ಒಪ್ಪಿಸಿಬರ್ತೀನಿ.

ಮೋಹನ : ಕಾರ್ಖಾನಿ ಲೆಕ್ಕಾ ಹೌದಲ್ಲೋ ? (ಹೋಗುವರು)

ದೃಶ್ಯ ೪

(ರಂಗದ ಹಿಂಭಾಗದಲ್ಲಿ ಕಾಲೇಜಿನ ಪ್ರವೇಶದ್ವಾರ ಕಾಣಿಸುತ್ತದೆ. ರಂಗದ ಮೇಲೆ ರಸ್ತೆಯಲ್ಲಿ ನಡೆಯುವ ಕ್ರಿಯೆ ಹಾಗೂ ವಸ್ತುಗಳೆಲ್ಲ ಕಾಣಿಸಿಕೊಳ್ಳುತ್ತವೆ. ಕಾಲೇಜಿನ ಮುಂದುಗಡೆ ಗುಂಪು ಗುಂಪಾಗಿ ಹುಡುಗರು ನಿಂತಿದ್ದಾರೆ.

ಈ ಗದ್ದಲದಲ್ಲಿ ಮೋಹನ ರಂಗದ ಒಂದು ಕಡೆಯಿಂದ ಪ್ರತ್ಯಕ್ಷನಾಗುತ್ತಾನೆ. ಇನ್ನೊಂದು ಕಡೆಯಿಂದ ಮಲ್ಲಾರಿ ಬರುತ್ತಾನೆ)

ಮೋಹನ : ಏನಪಾ ಮಲ್ಲಾರಿ, ಜಾತ್ರ್ಯಾಗಿನ ಗದ್ದಲಿದ್ಧಂಗದಲ್ಲಾ.

ಮಲ್ಲಾರಿ : ಇಲೆಕ್ಷನ್ ಅಂದ ಮ್ಯಾಲೆ ಕೇಳತಿದೇನೋ !

ಮೋಹನ : ಸುರೇಶನ ಮುಖಾ ಎಲ್ಲೂ ಕಾಣವಲ್ಲತಲ್ಲೊ.

ಮಲ್ಲಾರಿ : ಕಾರ್ಖಾನಿ ಕೆಲಸಾ ಒಪ್ಪಿಸಬೇಕಲ್ಲೋ.

ಮೋಹನ : (ಏನೂ ಗೊತ್ತಿಲ್ಲದವನಂತೆ ನಟಿಸುತ್ತ) ಏ. ಮಲ್ಲಾರಿ, ಇಲೆಕ್ಷನ್ ಯಾರಾರ ನಡುವದರಿ ?

ಮಲ್ಲಾರಿ : ಏನ ಹೊಸಬರಂಗ ಕಾಣಸ್ತೀರಿ ?

ಮೋಹನ : (ಮುಗುಳ್ನಗೆಯಿಂದ) ಎಲ್ಲಿ ಹೊಸಬನೋ ನಿನಗ ಗೊತ್ತದಲ್ಲ.......

ಮಲ್ಲಾರಿ : ......ಕಾಲೇಜಕ್ಕ ಬರೋದ ಕಡಿಮೆಂತ.

ಮೋಹನ : ಮುಂದಿನ ಬಾಗ್ಲಲ್ಲೆ ಹೊಕ್ಕು........

ಮಲ್ಲಾರಿ : ....ಹಿಂದಿನ ಬಾಗಲದಾಗಿಂದ ಹೊರಗೋಡಿದ್ದು. (ನಗುವರು)

ಮೋಹನ : ಏ ಮಲ್ಲಾರಿ, ನೀನು ಭಾರೀ ಪೊಯಿಟಿಕ್ ಬಿಡು.

ಮಲ್ಲಾರಿ : ಕವಿ ಮಹಾಶಯರು ನನ್ನ ಮುಂದ ಒಂದ ಝಲಕ್ ಅನ್ನರಲ್ಲಾ.

ಮೋಹನ : (ಸೆಟಕೊಂಡಂತೆ ನಟಿಸುತ್ತ) ಅವನ್ನೇನ ಇಲಕ್ಷನ್ನಿನಾಗಿನ ಹ್ಯಾಂಡ್‌ಬಿಲ್ ಅಂತ ತಿಳಿದಿದೆಯೇನೋ ?

ಮಲ್ಲಾರಿ : ನಿನ್ನವು ಹ್ಯಾಂಡ್‌ಬಿಲ್ ಅಲ್ಲ. ಒಂದ ಹಾಡಲ್ಲಾ.

ಮೋಹನ : ಹೊಡದಾಡು
ಬಡದಾಡು,
ಕಡದಾಡು,
ಪಂಜರದೊಳಗಿನ ಗಿಳಿ ಒದರಾಡು (ಎಂದು ರಾಗವಾಗಿ ಎಳೆಯುಂತ್ತಾನೆ)

ಮಲ್ಲಾರಿ : ಬ್ಯೂಟಿಫುಲ್ !

ಮೋಹನ : ಮುಂದಿನದಕ್ಕ ಸುರೇಶ ಬರಲಿ.

ಮಲ್ಲಾರಿ : ಅವೇನ ಬರೊಹಂಗ ಕಾಣುದಿಲ್ಲೇಳು.

ಮೋಹನ : (ಮಲ್ಲಾರಿಗೆ ಏನನ್ನೋ ತೋರಿಸುವಂತೆ) ಅಲ್ನೋಡೊ, ಆ ಗುಂಪು. ಆ ಗುಂಪಿನ ಮಧ್ಯದಾಗ ಇದ್ದಾನಲ್ಲ, ಯಾರವಾ.

ಮಲ್ಲಾರಿ : ನಾರಾಯಣಾ.

ಮೋಹನ : ಇವನ ಏನ, ಆ ಪ್ರಿನ್ಸಿಪಾಲ್ ನಿಂದರಿಸಿದ ಹುಡುಗನ ವಿರುದ್ಧ ಇಲೆಕ್ಷನ್ನಿಗೆ ನಿಂತಾವ ?

ಮಲ್ಲಾರಿ : ಹೆಂಗಿದ್ದಾನ, ನೋಡ್ರಿ ! ಅಂಜಿಕಿನ ಬರುದಿಲ್ಲರಾ ?

ಮೋಹನ : ನನಗೇನ ಅಂಜಿಕಿ ಬರುದಿಲ್ಲ ಬಿಡ್ರಿ. ಮತ್ತ ಪ್ರಿನ್ಸಿಪಾಲ್‌ನ ಕ್ಯಾಂಡಿಡೇಟ್

ಯಾರಪಾ ?

ಮಲ್ಹಾರಿ : ಭಾಳ ಮಜಾ ಅದನೋ. ಶಿವಾನಂದ ಮಂಠನ್ನ ನೋಡಿರಬೇಕಲ್ಲಾ. ಬೆಕ್ಕಿನಂಗ ಇದ್ದಾನ. ಪ್ರೊ. ಗೌಡರ ಮನಿಗೆ ಕಾಯಿಪಲ್ಯಾ ತರತಿದ್ದಾ. (ಮುಸಿ ಮುಸಿ ನಗುವನು)

ಮೋಹನ : ಏನಿವಾ ಸುರೇಶಾ ! ಇಷ್ಟು ಲವಲಿ ಅಟ್‌ಮೊಸ್‌ಫಿಯರ್ ಅದ. ಕಳಕೊಂಡ ಬಿಟ್ಟ ಬಿಡ.

ಮಲ್ಲಾರಿ : ಮತ್ತ, ಅಂವಾ ಹಳದಿ ಅಂಗಿ ಹಕ್ಕೊಂಡವಾ ; ಮಲ್ಲೆಶಿ ಅಂತ. ಊರಾಗ ಅರಬಿ ಅಂಗಡಿ ಇಟ್ಟಾನ ನೋಡು.

ಮೋಹನ : ಇದರಾಗ ಪ್ರಿನ್ಸಿಪಾಲನ ಹುಡಗಂದ ತ್ರಾಸದರಿ. ಮತ್ತ ಹುಡುಗರ ಇಲೆಕ್ಷನ್‌ನ್ಯಾಗ ಈ ಪ್ರಿನ್ಸಿಪಾಲನವ್ಯಾಕರಿ ಮೂರು ಅಕ್ಕಿಕಾಳು ?

ಮಲ್ಲಾರಿ : ಇಂಗ್ಲಿಷ್‌ನ್ಯಾಗ ಏನೋ ಅಂತಾರೋ. ಒಂದು ಫ್ರೇಸ್ ಇಲ್ಲ—

ಮೋಹನ : (ನಗುತ್ತ) Don't poke your ugly nose in everything.

ಮಲ್ಲಾರಿ : ಪ್ರಶ್ನಾ ಅದನೋ ಬಂದದ್ದು. ಹುಡುಗರೆಲ್ಲಾ ನಾರಾಯಣನ ಕಡೇನ ಒಲದಾವ.

ಮೋಹನ : ಒಲದಿಲ್ಲೊ, ಬ್ಯಾರೆ ದಾರಿ ಇಲ್ಲದ ಅವನ್ನ ಕೂಡಿಕೊಂಡಾವ. ಇಲೆಕ್ಷನ್ನಿಗೆ ನಿಂತಾರ ಯಾಕ ಗೊತ್ತಿಲ್ಲ ; ಗದ್ದಲಾ ಮಾಡತಾರ ಯಾಕ ಗೊತ್ತಿಲ್ಲಾ.

ಮಲ್ಲಾರಿ : ಅದು ಏನರ ಇರಲಿ ಬಿಡ್ರಿ ಕವಿಗಳ. ಪಾರ್ಟಿ ಮಾತ್ರ ಒಡಕೊಂಡಾವ. ನಾ ಮಾತ್ರ ಯಾ ಪಾರ್ಟಿನೂ ಸೇರಿಲ್ಲ. ಬರೇ ವೋಟು ಹಾಕಲಿಕ್ಕೆ ಬಂದೆನಿ.

ಮೋಹನ : ಟೈಂ ಆತೆನಪಾ ? ಈ ಸುರೇಶಾ ಬರಲೇ ಇಲ್ಲಾ.

ಮಲ್ಲಾರಿ : ಸಾಲಿ ಬಿಟ್ಟು ಸರವತ್ತಾತು. ಟೈಮ್ ಆಗಿ ಭಾಳ ಹೊತ್ತಾತು. ಮಂಗ್ಯಾ ಬರೋ ಹೊತ್ತೂ ಆತು.

ಮೋಹನ : ಕಾಲೇಜಿನ ಬಾಗಲಾ ಮುಚ್ಚಿಕೊಂಡಾವ. ತಗದರ ಗವಿ ಕಂಡ್ಹಾಂಗ ಆಗತದ.

ಮಲ್ಲಾರಿ : ಮುಚ್ಚಿಕೊಂಡಾಗ ಪಂಜರಧಾಂಗ ಕಾಣಸ್ತದ.
(ದಾರಿಗುಂಟ ಇಲೆಕ್ಷನ್ನಿನ ಧ್ವನಿಗಳು ಕೇಳಿಸುತ್ತವೆ)

ಮಲ್ಲಾರಿ : ಹ್ಯಾಂಗ ಅದ ನೋಡೊ ಗದ್ದಲಾ.
(ಬರುತ್ತಿದ್ದ ವ್ಯಕ್ತಿ ಸನಿಹಕ್ಕೆ ಬಂದು "ಹಲೋ" ಎಂದು ಕೈ ಮಾಡುತ್ತದೆ.)

ಮಲ್ಲಾರಿ : ಬಂದನಪಾ ಅಂತೂ ಕಡೇಕ ಸುರೇಶ.

ಮೋಹನ : ಫ್ಯಾಕ್ಟರಿ ವರ್ಕರ್ ದಣಧಂಗ ಕಾಣಸ್ತದ.

ಸುರೇಶ : ನಡುವ ನಡುವ ಮೆಶಿನ್ ಕೆಟ್ಟಂಗ ಆಗಿ........ನಮ್ಮಪ್ಪಾ ಬಯ್ದ್ಯಾ. ಓಡಿ ಬಂದೇನಿ.

ಮೋಹನ : ಶಾಭಾಶ್ : ಹುಲಿಯ
ಒದರಾಡು
ಬಡದಾಡು
ಕಡದಾಡು
ಪಂಜರದೊಳಗಿನ ಗಿಳಿ ಹಾಡು
ಎರಡೊಂದಲೆರೆಡು, ಎರಡೆರಡಲೆ ನಾಲ್ಕು
$2H_2+O_2 \rightarrow 2H_2O$
H_2O ಅಂದರ ನೀರು
ನೀರು—ನೀರು ಅಂದರ ಜೀವನಾ
ಜೀವನಾ ಅಂದರ
ಫಸ್ಟ್ ಕ್ಲಾಸ್,
ಸೆಕೆಂಡ್ ಕ್ಲಾಸ್,
ಥರ್ಡ್ ಕ್ಲಾಸ್....

ಸುರೇಶ : ಸ್ವಲ್ಪ ಬಂದ ಮಾಡತಿಲ್ಲೋ ಮೋಹನ. ನನ್ನ ಹೊಟ್ಟ್ಯಾಗಿನ ಸಂಕಟ ನಿನಗೇನ ಗೊತ್ತಾದೀತು.

ಮೋಹನ : ನಿನ್ನ ನೋಡಿ ಅನ್ನಲಿಲ್ಲೊ. ನಾವಿರೋದ ಈ ಹಾಡಿನ್ಯಾಗ.

ಮಲ್ಲಾರಿ : ಇದು ಕವಿಗಳ ಹೊಸಾ ಕವನಾ...

ಸುರೇಶ : ನಾರಾಯಣಗ ಪ್ರಿನ್ಸಿಪಾಲಗ ಮತ್ತ ಕಾಲೇಜಿನ ಚೇರ್‌ಮನ್‌ಗ, ನಡುವ ದೊಡ್ಡ ಜಗಳಾತಂತ.

ಮೋಹನ : ಯ್ಯಾಕೊ ತಡಾ ಮಾಡಿ ಬಂದೀದಲ್ಲಾ ?

ಸುರೇಶ : ಎಲ್ಲಿ ತಡಾನೋ, ಮೊದ್ಲs ಬಂದಿದ್ದೆ. ನಡುಕ ಆ ನಾರಾಯಣ, ಚಹಾಕ್ಕೆ ಹಿಡಕೊಂಡ ಹೋದಾ.

ಮಲ್ಲಾರಿ : (ಸುರೇಶನಿಗೆ) ಚಹಾದ್ದು ಭಾಳ ನಡಿಸ್ಯಾನ್ರಿ.

ಸುರೇಶ : ಆದ್ರ ಹುಡುಗರು ಮಾಡೊವಲ್ಲ
ಬಿಡ್ರಿ ಇದು. ಏನ ಕುಡದಾರ
ಏನ ಜೋಲಿ ಹೋಡಿಶಾರ, ಒಟ್ಟಿಗೆ ಆ ನಾರಾಯಣಾ ಚಂದಾಗಿ ಆಡಲಿಕ್ಕೆ ಹತ್ಯಾನ

ಮೋಹನ : ಅಲ್ಲೋ, ನಾರಾಯಣನಂಥವರು

ಕಾಲೇಜಿನ್ಯಾಗ ಬಟ್ಟಿನ ವ್ಯಾಲೆ ಎಣಸೊ
ಅಷ್ಟ ಮಂದ್ಯದ
ಅಂಥಾದ್ದರಾಗ ಇವೇನ ನಿಂತರ
ಪ್ರಯೋಜನವಲ್ಲ ಬಿಡರಿ.

ಮಲ್ಲಾರಿ : ಅಲ್ಲರಿ, ಮಜಾ ಅಂದರ,
ಅವನ ಹಿಂದ ಎಲ್ಲಾರೂ ಶಿವಾನಂದನಂಥವರು,
ಮಲ್ಲೇಶಿ ಅಂಥವರು ಕೈ ಕಟ್ಟಿಕೊಂಡ ನಿಂತಾರ್ರಿ.

ಸುರೇಶ : ಮಜಾ ಹೆಂಗದ ನೋಡು
ಅವರವರ ನಡುವ ಜಗಳ ಜಿದ್ದದ (ಎಂದು ನಗುವನು)

ಮೋಹನ : ಅಲ್ಲಪಾ, ಮೊದ್ಲ. ಪ್ರಿನ್ಸಿಪಾಲಂದು ಒಳಗಿನ ಹಕಿಕತ್ತು ಗೊತ್ತಿದ್ದರ
ಇಂವಾ ನಾರಾಯಣಾ ನಿಂದರಬಾರದಿತ್ತು.

ಸುರೇಶ : ಒಳಗಿನ ಹಕಿಕತ್ತು ಬ್ಯಾರೆ ಅದನೋ,

ಮಲ್ಲಾರಿ : (ಗೋಣು ಹಾಕುತ್ತಾ) ಹೌದ, ಹೌದ.

ಮೋಹನ : ಅದೇನ, ಅಂಥಾದ್ದು.

ಸುರೇಶ : ನಾಲ್ಕ ಮಂದಿ ಅಡ್ಡಾಡೋ ಜಗದಾಗ ಹೇಳೋ ಸುದ್ದಿ ಅಲ್ಲದು.
ಹೌದಿಲ್ಲಪಾ ಮಲ್ಲಾರಿ.

ಮಲ್ಲಾರಿ : ಅದ್ಕ. ಆ ಗಿಡದ ಬುಡಕಾ ನಿಂದರೋಣು. ಅಲ್ಲಿ ಯಾರಿಲ್ಲಾ.
(ತಾವು ನಿಂತ ಜಾಗದಿಂದ ಗಿಡದ ಬುಡಕ್ಕೆ ಹೋಗುವಾಗ್ಗೆ
ಒಬ್ಬರಿಗೊಬ್ಬರು, ಗದ್ದಲದಲ್ಲಿ, ಹಲೋ, ಹಲೋ, ಎನ್ನುತ್ತ ಗಿಡದ
ಬುಡಕ್ಕೆ ಬರುತ್ತಾರೆ.)
(ಕೈಯಲ್ಲಿ ಹಾಳಿ ಹಿಡಿದಿದ್ದಾನೆ)
ಯಾವನವಪಾ, ಇದು, ಹಾಳಿ—
ಥೂ ಇವನ ಮತ್ತ ನಾರಾಯಣನವ,
ಸಾಕಾಗೆದ್ರಪಾ ನೋಡಿ, ನೋಡಿ (ಎಂದು ತೂರುವನು.
ಒಂದೊಂದಾಗಿ ನೆಲಕ್ಕೆ ಬೀಳುತ್ತವೆ)

ಮೋಹನ : ಅವನ್ಯಾಕ ತೂರಿದ್ರಿ ಗಾಳ್ಯಾಗ.

ಸುರೇಶ : ಗಾಳ್ಯಾಗ ಹಾರಾಡವನ ಇದ್ದಾನ ಅಂಪಾ.

ಮಲ್ಲಾರಿ : ಇಲೇಕ್ಷನ್ನದಾಗ ಆರಿಸಿ ಬಂದರ ನಯಾಪೈಸಾದ್ದ ಚೇಲಾ ತೂರಾಡ
ತಾನಂತರಿ.

ಮೋಹನ : (ಸುರೇಶನಿಗೆ) ಅಲ್ಲೊ, ಇಷ್ಟ ಈರ್ಷಾಕ್ಕ ಬೀಳ್ಳಿಕ್ಕೆ ಅಂಥಾದ್ದೇನ
ಆಗೇದ ಇವಗ ಮತ್ತ ಪ್ರಿನ್ಸಿಪಾಲಗ.

ಮಲ್ಲಾರಿ : ಒಂದ ನಾಲ ಸಿಕ್ಕರ ಕುದರಿ ಕೊಳ್ಳಿಕ್ಕೆ ಹೋಗವರ್ರಿ ಅವರು.
ಸುರೇಶ : ಬರಾಬರಿ ಹೇಳಿದಿ ನೋಡು.
ಮೋಹನ : ಅಂದರ...........
ಸುರೇಶ : ನೊಡಿಲ್ಲೆ, ಆದದ್ದು ಇಷ್ಟೆನಪಾ—

(ರಂಗದ ಮೇಲೆ ಇದ್ದ ಪಾತ್ರಗಳೇ ಈಗ ಕೆಳಗೆ ನಡೆಯುವ ಕ್ರಿಯೆಯಲ್ಲಿ ಬೇರೆ ಬೇರೆ ಪಾತ್ರಗಳನ್ನು ವಹಿಸಬಹುದು. ಹೆಚ್ಚಿನ ಪಾತ್ರಗಳು, ಸಂಕೋಚವಿಲ್ಲದೇ ರಂಗವನ್ನು ಪ್ರವೇಶಿಸಿ ತಮ್ಮ ಕಾರ್ಯ ಮುಗಿದೊಡನೆ ರಂಗದಿಂದ ನಿರ್ಗಮಿಸಬಹುದು.
ಒಟ್ಟಾರೆ ಇಲ್ಲಿ ನಡೆಯುವ ಕ್ರಿಯೆ ನೆನಪಿನ ರೂಪದ್ದು)
(ಕಾಲೇಜಿನ ಆಫೀಸಿನ ರೂಮಿನ ದೃಶ್ಯ)

ಪ್ರಿನ್ಸಿಪಾಲ್ : (ಎದ್ದು ನಿಲ್ಲುತ್ತಾ, ಚೇರ್‌ಮೆನ್ನರ ಕಡೆಗೊಮ್ಮೆ ನೋಡಿ)
ಇವತ್ತಿನ ದಿವಸ ತಮ್ಮೆಲ್ಲರನ್ನು ಕರೆದಿರುವುದಕ್ಕೆ, ಈ ಮೊದಲೇ ಕಳಿಸಿದ ನೋಟೀಸಿನ ಮುಖಾಂತರ ತಿಳಿದಿರಬಹುದು.
To-day is the beginning of our all departments.
ಅದಕ್ಕೂ ಮೊದಲು ನಾನು, ನಮ್ಮ ಕಾಲೇಜಿನ ಚೇರ್‌ಮೆನ್‌ರಾದ ಶ್ರೀ ಶಾಂತಪ್ಪನವರಿಗೆ ನಿಮ್ಮೆಲ್ಲರ ಪರಿಚಯ ಮಾಡಿಸುವೆ.
(ಮತ್ತೊಮ್ಮೆ ಎಲ್ಲರ ಕಡೆಗೆ ನೋಡುವಾಗ ಪ್ರೊ. ಗೌಡ, ಪ್ರೊ. ಲಿಂಗಯ್ಯಾ ಇಬ್ಬರೂ ದ್ವಾರಪಾಲಕರಂತೆ, ಏನನ್ನೋ ಹೇಳುತ್ತಾರೆ.)
ಕ್ಷಮಿಸಬೇಕು. ಈ ಗಡಿಬಿಡಿಯಲ್ಲಿ ನಾನು, ಶ್ರೀ ಶಾಂತಪ್ಪನವರನ್ನು ತಮಗೆ ಪರಿಚಯ ಮಾಡಿಸಬೇಕಾಗಿದೆ. ಇವರ ಬಗ್ಗೆ ಒಂದೀಟು ಪ್ರೊ. ಗೌಡರು ತಮಗೆ ಹೇಳುತ್ತಾರೆ. (ಎಂದು ಕೂಡುತ್ತಾನೆ)
(ಇದೇ ಸಮಯಕ್ಕೆ ಶಾಂತಪ್ಪನು ತನ್ನ ಖಾದಿ ಗಾಂಧಿ ಟೊಪ್ಪಿಗೆ ಹಾಗೂ ಖಾದಿ ಜಾಕಿಟ್ಟನ್ನು ಸರಿಪಡಿಸಿಕೊಳ್ಳುವನು)

ಪ್ರೊ. ಗೌಡ : ಪೂಜ್ಯ ಚೇರ್‌ಮನ್ನರೇ, ಹಿರಿಯರಾದ ಪ್ರಿನ್ಸಿಪಾಲರೇ, ನನ್ನ ಸಹೋದ್ಯೋಗಿಗಳಾದ ಲಿಂಗಯ್ಯ ಮತ್ತು ಹಳ್ಳಿಯವರೇ ಹಾಗೂ ನನ್ನ ವಿದ್ಯಾರ್ಥಿಗಳೇ,
ಇವತ್ತಿನ ದಿವಸ ಶ್ರೀ ಶಾಂತಪ್ಪನವರನ್ನು ತಮಗೆ ಪರಿಚಯ ಮಾಡಿಸಿ ಕೊಡುವ ಸುಸಂಧಿ ದೊರಕಿಸಿಕೊಟ್ಟ, ಪ್ರಿನ್ಸಿಪಾಲರಿಗೆ ತುಂಬಾ ಆಭಾರಿಯಾಗಿದ್ದೇನೆ.
ಶ್ರೀ ಶಾಂತಪ್ಪನವರು, ಇದೇ ಪ್ರದೇಶದಲ್ಲಿ, ಸುಮಾರು ಅರವತ್ತು ವರುಷಗಳ ಕೆಳಗೆ ಜನಿಸಿದರು. ಮೊದಲಿನಿಂದಲೂ ಇವರು ಕಟ್ಟಾ

ಕನ್ನಡಾಭಿಮಾನಿಗಳು. ಅದಕ್ಕೇ ಮೂಲ್ಕಿ ಪರೀಕ್ಷೆಪರೆಗೆ ಶಾಲೆ ಕಟ್ಟೆ ಹತ್ತಿ ನಂತರದಲ್ಲಿ ಕನ್ನಡಮ್ಮನ ಸೇವೆ ಸಲ್ಲಿಸಲು ಶಿಕ್ಷಣವನ್ನು ತ್ಯಜಿಸಿದರು. ಈಗ ನಾವು ಕೂತಿರುವಂಥಾ ಇಂಥಾ ಎಷ್ಟೋ ಶಿಕ್ಷಣಕ್ಷೇತ್ರಗಳನ್ನು ಕಟ್ಟಿಸಿ ಚೇರ್‌ಮನ್ನರಾಗಿದ್ದಾರೆ. ಇವರದು ಮೊದಲಿನಿಂದಲೂ ಸಮಾಜಕ್ಕಾಗಿ ದುಡಿದ ಜೀವ.

ಇವರು ಸ್ವಾತಂತ್ರ್ಯ ಸಮರದಲ್ಲಿ ಗಾಂಧೀಜಿಯ ಕೂಗಿಗೆ ಓಗೊಟ್ಟು ಎಷ್ಟೋ ಬಾರಿ ಜೈಲಿಗೂ ಹೋಗಿ ಬಂದಿದ್ದಾರೆ. ಇಂಥವರ ಜೀವನ ನಿಜವಾಗಿಯೂ ನಮಗೆ ಮಹತ್ವದ್ದಾಗಿದೆ. (ಶಾಂತಪ್ಪ ಮತ್ತೆ ಟೊಪ್ಪಗಿ ಜಾಕಿಟು ಸರಿಪಡಿಸಿಕೊಳ್ಳುತ್ತಾನೆ) ಏಕೆಂದರೆ, ನನ್ನ ಮುಂದೆ ಕುಳಿತ ನೀವೆಲ್ಲರೂ ಇಂಥವರ ಹಾದಿಯಲ್ಲಿ ನಡೆದು ಶ್ರೀ ಶಾಂತಪ್ಪನವರಂತೆ, ಆದರ್ಶ ಜೀವನ ನಡೆಸಿರೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಪ್ರಿನ್ಸಿಪಾಲ : ಶ್ರೀ ಶಾಂತಪ್ಪನವರು ಇವತ್ತಿನ ದಿನ, ನಿಜವಾಗಿಯೂ ತಮ್ಮ ಕೆಲಸಗಳನ್ನು ಬದಿಗೊತ್ತಿ ಆಗಮಿಸಿದ್ದಕ್ಕೆ ನಮ್ಮ ಭಾಗ್ಯವೇ ಎನ್ನಬಹುದು. ಚೇರ್‌ಮೆನ್ನರಿಗೆ ಈಗ ನಿಮ್ಮೆಲ್ಲರ ಪರಿಚಯ ಮಾಡಿಕೊಡುತ್ತೇನೆ. ಇವರು (ಅಂತ ಲಿಂಗಯ್ಯನ ಕಡೆ ಕೈಮಾಡಿ) ಲಿಂಗಯ್ಯಂತ. ಈ ಕಾಲೇಜದಾಗ ಆರು ವರ್ಷದಿಂದ ಅದಾರ. ಬೋಟನಿ ಕಲಿಸ್ತಾರ.

ಚೇರ್‌ಮನ್ : ಬಾಟನಿ ಅಂದರ ಏನರ ಇರತೈತಿ ?

ಪ್ರಿನ್ಸಿಪಾಲ : ಕನ್ನಡದಾಗ ಸಸ್ಯಶಾಸ್ತ್ರ ಆಕ್ಕೈತಿ ಅರ್ಥಾ.

ಚೇರ್‌ಮನ್ : ಅರೇ ಇವನ. ಎಟ ದಿನಾ ಆತರಿ ಇದನ ಕಾಲೇಜದಾಗ ಇಟ್ಟು.

(ಪ್ರಿ. ಮತ್ತು ಲಿಂ. ಒಬ್ಬರೊಬ್ಬರ ಮುಖ ನೋಡುವರು.

ಪ್ರಿನ್ಸಿಪಾಲ : ನಾವು, ಗೌಡರು, ಮತ್ತ ಲಿಂಗಯ್ಯಾರು ಕಲಿಯೋ ಮುಂದ ಇಟ್ಟಾರ—

ನಾರಾಯಣ : (ನಡುವೆ ಬಾಯಿ ಹಾಕಿ) ಅವ,

ಹೂ, ಕಾಯಿ

ಪಲ್ಯಾ, ತೊಗಟಿ,

ಹಣ್ಣು, ಹುಳಾ,

ಪ್ರಿನ್ಸಿಪಾಲ : (ಸಿಟ್ಟಿನಿಂದ) ಮಿ. ನಾರಾಯಣ, ಇದು ಮೀಟಿಂಗ ಅದ ತಿಳಿತದಿಲ್ಲೋ ? ನೀವು ನನ್ನ ಆಫೀಸಿನ್ಯಾಗ ಕುಂತಿರಿ. ಇದು ಎಕ್ಸ್‌ಪರಿಮೆಂಟ ಹಾಲ್ ಅಲ್ಲ.

ನಾರಾಯಣ : ನಾ, ಏನ ಹೇಳಿದಿನ್ರಿ, ಸರ್ ಅವ

ಹೂ, ಕಾಯಿ,
ಪಲ್ಯಾ, ತೊಗಟಿ,
ಹಣ್ಣು, ಹುಳಾ.
ಮಣ್ಣು (ಎಂದು ರಾಗ ಎಳೆಯುವನು)
(ಪ್ರಿ, ಗೌ, ಲಿಂ. ಬಿಟ್ಟು ಎಲ್ಲರೂ ನಗುವರು)

ಚೇರಮನ್ : ಹೋಗಲಿ ಬಿಡ್ರಿ. ಏನ ಸಣ್ಣ ಹುಡುಗದಾನು. ಅವರ್‍ಯಾರು ಅತ್ತಾ ಕಡೆ ಕುಂತಾರ. ನನ್ನ ಪರಿಚಯ ಮಾಡಿಕೊಟ್ಟವರು.

ಪ್ರೊ. ಗೌಡ : (ನಡುವೆ ಎದ್ದು) ನಾ.......ನಾನ್ರ್ಯ,....(ಎಂದು ತಡವರಿಸುವನು.)

ಪ್ರಿನ್ಸಿಪಾಲ : ಇವರು, ಪ್ರೊ. ಗೌಡಂತ, ಈಗ ನಾಲ್ಕು ವರ್ಷದಿಂದ ಅದಾರ ಈ ಕಾಲೇಜಿನ್ಯಾಗ. ಪ್ರಿನ್ಸಿಪಾಲ್ಸ್ ಆಫ್ ಮ್ಯಾತಮೆಟಿಕ್ಸ್ ಹೇಳುತಾರ.

ಚೇರಮನ್ : ಪ್ರಿನ್ಸಿಪಾಲ್ಸ್ ಯ್ಯಾಪ, ಮ್ಯಾ....ಮ್ಯಾ....

ನಾರಾಯಣ : (ನಗುತ್ತಾ) ಮ್ಯಾ....ಮ್ಯಾ....ಅಲ್ಲರಿ ಮ್ಯಾಥೆಮಾಟಿಕ್ಸ್ ಅಂತಾರ.

ಚೇರಮನ್ : ನನಗಂತು ಅನ್ನಾಕ ಬರವಲ್ತು, ಏನರ ಆಕ್ಕೃತಿ ಅದರ ಅರ್ತಾ ?

ಪ್ರಿನ್ಸಿಪಾಲ : ಕನ್ನಡದಾಗ ಗಣಿತ ಅಂತೆವಲ್ರಿ, ಅದಕ್ಕ ಮ್ಯಾತಮೆಟಿಕ್ಸ್ ಅಂತಾರ.

ಚೇರಮನ್ : ಎಂತಾದ್ರಿದು ! ಎಂಡೆರಡಲೆ ನಾಲ್ಕು, ಕಲಿಯೋದಕ್ಕ ಎಂತಿಂತಾ ನಾಲ್ಗಿ ಒಳ್ಳದಂತಾ ಚಬ್ದಾ ಕುಂದರಸ್ಯಾರು ಯಾರರ ಕಂದರಸ್ಯಾರ್ರಿ, ಇವನ್ನ.

ಪ್ರೊ. ಗೌಡ : ಹಿಂದಕ್ಕ ನಮ್ಮ ದೇಶಾ ಆಳಿದರಲ್ಲರಿ, ಬ್ರಿಟಿಷರು. ಎಜುಕೇಷನ್, ಸೇರಸೋ ಮುಂದ ಇವನ್ನೆಲ್ಲಾ ಸೇರಿಸ್ಯಾರಿ.

ಚೇರಮನ್ : ಛೆ, ಛೆ, ಎಂತಾ ಮಾತ್ರಿದು. ಬಿಟಿಷರು ಎಲ್ಲಿ ಆಳ್ಯಾರ ನಮ್ಮ ದೇಸಾ—ಆಳ್ಯಾರೇನ್ರಿ ?
(ಪ್ರಿ, ಎಲ್ಲರೂ ಮುಸಿ ಮುಸಿ ನಗುವರು)
ಆಳಿದ್ರು, ಆಳಿರಬೇಕು ಬಿಡ್ರಿ. ಅಲ್ರಿ, ನಾ ಎಳಿದ್ದರಾಗ ಏನರ ತಪ್ಪಿದ್ದರ ಖುಲ್ಲಾ ಮಾಡ್ರಿ, ಇನ್ನೊಂದ ಏನೊ, ಎಜು—ಎಜು —ಅಂದ್ರೆಲ್ಲಾ.

ಪ್ರಿನ್ಸಿಪಾಲ : ಎಜು—ಅಲ್ಲರೀ ಎಜುಕೇಶನ್. ಕನ್ನಡದಾಗ ಅದಕ ಶಿಕ್ಷಣ ಅಂತಾರ.

ಚೇರಮನ್ : ಚಿಕ್ಕಣರ್‍ಯಾ....(ಎಂದು ರಾಗ ಎಳೆದು) ನನಗಂತೂ ಮೊದ್ಲಿನಿಂದಲೂ ಹತ್ತಲಿಲ್ಲ ನೋಡ್ರೀ. ನನ್ನದು ಎಲ್ಲ್ಯಾಡಿಕೆ ನಾಲಿಗೆ ಒಳ್ಳಾಕ ಆಗವ ಓದಾಕ ಬರಲಿಲ್ಲ.

ನಾರಾಯಣ : (ನಗುತ್ತ) ಹ್ಯಾಂಡಲ್ ಹಾಕಿದು ಹೊಳ್ಳತಿತ್ತಲ್ಲರೀ.
(ಅತ್ತ ಯಾರು ಲಕ್ಷ್ಯ ಕೊಡುವುದಿಲ್ಲ)

ಪ್ರಿನ್ಸಿಪಾಲ್ : ಮತ್ತ ಇವರ ನೋಡ್ರಿ, ಪ್ರೊ. ಹಳ್ಳಿ ಅಂತ. ಇದ ವರ್ಷ ಹೊಸ್ತಾಗಿ ಬಂದಾಗಿ, ಹಿಂದಿ ಕಲಸ್ತಾರ.

ಚೇರಮನ್ : ಇಂದಿರ್ರ್ಯಾ—ಹಾಗಂದ್ರೇನು ?

ಪ್ರೊ. ಹಳ್ಳಿ : ನೋಡ್ರಿ, ದೇವನಾಗರಿ ಲಿಪಿ ಮ್ಯಾಗಿಂದ ಈ ಭಾಷಾ ಕಂಡ ಹಿಡದಾರ, ಈ ಹಿಂದಿನು ಭಾರತದ ಭಾಷಾರಿ, ಈಗ ಕನ್ನಡಿಲ್ಲರ್‍ಯಾ ಹಂಗ.

ಚೇರಮನ್ : ಹೇಗ ಮಾತಡೋದಿದನ್ನ.

ಪ್ರೊ. ಹಳ್ಳಿ : ಇವರು ಚೇರ್‌ಮನ್‌ರಿರುತ್ತಾರೆ...ಅನ್ನಲಿಕ್ಕೆ : ವೇ ಚೇರ್‌ಮನ್ ಹೈ। ಅಂತಾರ ಮತ್ತು ಇವರ ಹೆಸರು ಶಾಂತಪ್ಪ, ಅನ್ನಲಿಕ್ಕೆ : ಉಸಕಾ ನಾವ್ ಶಾಂತಪ್ಪ ಹೈ । ಅಂತಾರ.
ಚೂರ ಕಠಿಣನ ಅಕೈತ್ರಿ, ಲಿಪಿಜ್ಞಾನ ಇಲ್ಲದವರಿಗೆ.

ಚೇರಮನ್ : ಭಾಳ ಮಂದಿ ಮಾತಾಡತಿರಬೇಕು. ಯಾಕಪಾ ಹಳ್ಳಿ ? ಆದರೂ ನಮ್ಮಂಥಾವ್ರಿಗೆ ಹೆಂಗ ಪಾಡಾದೀತು ?

ಪ್ರೊ. ಹಳ್ಳಿ : ಕರೇ, ಏಳಬೇಕಂದ್ರ ಚೇರ್‌ಮನ್ನರ, ನನಗೇನ ಇದರಾಗ ಮನಸ್ಸಿಲ್ಲರೀ. ಇನ್ನ ಹೊಟ್ಟೆ ವ್ಯವಾರಾ ಐತಿ ಅಂತ ಕಲಸೋದು ನೋಡ್ರಿ.

ಚೇರಮನ್ : ಇರಬಹುದು ಬಿಡ್ರಿ. ಯ್ಯಾತಕ್ಕ ಬಂದಿದ್ನಿಲ್ಲೆ ಅನ್ನೊದು ನೆಪ್ಪ ಆರತಲ್ಲಾ....

ನಾರಾಯಣ : ಪಂಟ ಬಡಿಲಿಕ್ಕೆ.

ಚೇರಮನ್ : (ಸಿಟ್ಟಿಗೆದ್ದು) ಯಾರ್‍ರೀವಾ, ಘುನಾ ನಡುವ ಬಾಯಿ ಆಕ್ಕಾನ, ಉಳದವರು ಸುಮ್ಮಾಕ ಕುಂತಾಗ.

ಪ್ರಿನ್ಸಿಪಾಲ : ಮಿ. ನಾರಾಯಣ. ನಿಮಗ, ಕೂಡೊ ಮನಸ್ಸಿದ್ರ ಕೂಂದರಿ, ಇಲ್ಲಾಂದ್ರ ಎದ್ದ ಹೋಗರಿ.

ನಾರಾಯಣ : ಎದ್ದ ಹೋಗಲಿಕ್ಕೆ ಕೂತಿಲ್ರಿ—ಕೂಡಲಿಕ್ಕೆ ಅಂತ ಬಂದಿನ್ರಿ.

ಪ್ರಿನ್ಸಿಪಾಲ : ಮತ್ತ ಸ್ವಲ್ಪ ಸುಮ್ಮನ ಕುಂದರ್‍ರಿ....

ನಾರಾಯಣ : ಏನ ಸುಮ್ಮನ ಕೂಡೋಣ್ರಿ, ಯ್ಯಾವತ್ತಾತು ಏನ ನವಂದರ ಕೂಸಂತ ತಿಳಿದಿರೇನು ? ಎಲ್ಲವನ್ನ ತಂದು ಏನರ ಹರಟಿ ಹೊಡದ್ರ ಮೀಟಿಂಗು ಆಗತದೇನ್ರಿ ?

ಪ್ರಿನ್ಸಿಪಾಲ : ಈಗ ಮೀಟಿಂಗ್ ಶುರು.

ಮಲ್ಲೇಶಿ : ಏನ್ರೀ ಸರ ಕಾಲೇಜ ಸೇರಿ ಎರಡ ವರ್ಷಾತು, ಮ್ಯಾಲೆ ಜಮಖಾನಾ ಸೆಕ್ರೆಟೆರಿ, ಹುಡುಗರು ನಗತಾರಿ ನನ್ನ ನೋಡಿ.

ಪ್ರಿನ್ಸಿಪಾಲ : ಅವರ ನಗೋದಕ್ಕ ನೀವ್ಯಾಕ ಲಕ್ಷ್ಯಾ ಕೊಡತೀರಿ. ಎನೀ ಡಿಫಿಕಲ್ಟೀಸ್ ?

ನಾರಾಯಣ : ಈ ಕಾಲೇಜಿನ ಹಣಿಬರಕ್ಕ ಒಂದ ತಬಲಾ ಪೇಟಿ ತರಸೋದ ಆಗ ಪೊಲ್ಲು, ಮತ್ತ ಎನಿ ಡಿಫಿಕಲ್ಟೀಸ್ ಅಂತ, ಎನಿ ಡಿಫಿಕಲ್ಟೀಸ್.

ಮಲ್ಲೇಶಿ : ಮೊದಲಿಲ್ಲೆ, ನಂದಕ್ಕ ಉತ್ತರಾ ಕೊಡ್ರಿ, ಜಮುಖಾನದ್ದು.

ನಾರಾಯಣ : ಅವರಿಗೇನ ಕೊಡಲಿಕ್ಕೆ ಬರತದೋ ?
ಒಳಗಿನ ಹಕಿಕತ್ತs ಬ್ಯಾರೆ ಅದ. ಎಲ್ಲಾದಕ್ಕೂ ಮುಸಕ ಹಾಕ್ಯಾರ ಮಾರೆ ವ್ಯಾಲೆ, ಅಗದಿ ಸಂಭಾಹಿತರು.

ಚೇರಮನ್ : ಏನ್ರಿದು ? ಜಗಳಾಟಾನ ಸುರುವಾತಲ್ರಿ ! ಟ್ಯಾಮು ಎಟಾತು ?

ಪ್ರೊ. ಗೌಡ : ನಾಲ್ಕಕ್ಕ ಇನ್ನ ಟ್ವೆಂಟಿ ಮಿನಿಟ್ಸ್ ಅವರಿ.

ಚೇರ್‌ಮನ್ : ಅಂದರ—

ಪ್ರೊ. ಗೌಡ : ನಾಲ್ಕಕ್ಕ ಇನ್ನು ಇಪ್ಪತ್ತ ಮಿನಿಟು ಐತರಿ.

ಚೇರಮನ್ : ಅಂಗಾದ್ರ ನಾ ಹೊಕ್ಕಿನಿ, ನೀವು, ನೀವು ಏನರ ಮಿಾಟಿಂಗ ಮಾಡ ಕೊಳ್ಳರಿ, ಆಮೇಲೆ ನನಗಾಟ ಹೇಳ್ರಿ. ಯ್ಯಾಕಂದ್ರ ಊರಿಂದ ಅಳಿಯಾ ಬರೊವಿದ್ದಾನ (ಹೋಗುವವನು),

ಪ್ರಿನ್ಸಿಪಾಲ : ಮುಂದಿನ ವಾರನs ಮಿಾಟಿಂಗು ಕೂಡಸೊನು.

ನಾರಾಯಣ : ಸರ್, ತಬಲಾ, ಪೇಟಿ, ತರಸದಿದ್ರ ನಾನು ಈ ವರ್ಷ ಯ್ಯಾ ಫಂಕ್ಷನ ಮಾಡುಸುದೆ ಇಲ್ಲರಿ.

ಮಲ್ಲೇಶಿ : ಜಮುಖಾನಾ ಬಗ್ಗೆ ಏನರ ವಿಚಾರ ಮಾಡ್ರಿ ಸರ್.

ಶಿವಾನಂದಮಠ : ಸರ್,

ನಾರಾಯಣ : ಮಿ. ಶಿವ್, ನೀವು ಏದರಾಗೂ ಇಲ್ಲಾ, ಸುಮ್ಮನ ಇದರಾಗ ತೆಲಿ ಹಾಕಬ್ಯಾಡ್ರಿ.

ಬಿಳಗಿ : ಸರ್, ಮ್ಯಾಟ್ ಹರದದ, ಕ್ರಿಕೆಟ್ ಹೆಂಗ ಆಡೋದ್ರಿ ?

ಚೌಡ ಗೌಡ : ಸರ್, ಲೈಬ್ರೇರಿಯನ್ ಪುಸ್ತಕನ ಕೊಡವಲ್ಲಂತ ಹುಡುಗರು ನನ್ನ ಕಾಡತಾವರಿ.

ಪ್ರೊ. ಗೌಡ : ಮುಂದಿನ ವಾರದ ತನಕಾ, ಏನ ಮಾತೆತ್ತ ಬ್ಯಾಡ್ರಿ, ಸಾಹೇಬರಿಗೂ ತಲಿ ಕಾದದ.

ನಾರಾಯಣ : (ಕುರ್ಚಿಯಿಂದ ಏಳುತ್ತ) ತಲಿ ಕಾದದಂತ, ತಲಿ. ಸರ್ ಇವತ್ತ ಹೇಳತೀನಿ, ನಾ ಇನ್ನೊಮ್ಮೆ ಮಿಾಟಿಂಗಗೆ ಬಂದ್ರ ಮಿಾಸಿ ಬೋಳಿಸಿ ಕೊಳ್ಳತೇನಿ ತಿಳಿತಿಲ್ಲೋ. ಈ ವರ್ಷ ಕಾಲೇಜದಾಗ ಒಂದ ಪ್ರೊಗ್ರಾಂ ಮಾಡ್ರಿ, ನಾನು ನೋಡೇ ಬಿಡ್ತೀನಿ. ನಂದರ ಆಗಲಿ, ನಿಮ್ಮದರ ಆಗಲಿ, ಕಾಲೇಜ ನಡಸವರ ನಿವೆಲ್ಲ್ಯರ.
ಏ ಮಲ್ಲೇಶಿ, ನಡಿ, ನಡಿಯೋ

(ಎಂದು ಇಬ್ಬರೂ ಎದ್ದು ಹೋಗುತ್ತಿದ್ದಾಗ ಉಳಿದವರು, ಎದ್ದು ಹೋಗುವರು)

ಪ್ರಿನ್ಸಿಪಾಲ : ಏನ ನಾರಾಯಣರಿವಾ !

ಪ್ರೊ. ಗೌಡ : ಸರ, ಹುಡುಗಬುದ್ಧಿ ಜಿಗದಾಡತಾನ. ನೀವೆನ ಕಾಳಜಿ ಮಾಡಬ್ಯಾಡ್ರಿ. ನಾ ನೋಡಕೋತಿನಿ.

ಪ್ರಿನ್ಸಿಪಾಲ : ಹಂಗಾದ್ರ ಇನ್ನ ಹೋಗೋಣ.

ದೃಶ್ಯ ೫

(ಮತ್ತೆ ಸುರೇಶ, ಮೋಹನ. ಮಲ್ಲಾರಿ, ಇವರೆಡೆಗೆ)

ಸುರೇಶ : ಇಷ್ಟೆಷ್ಟೆಲ್ಲಾ, ಆತೆನಪಾ, ಅದಕ್ಕ ಈ ವರ್ಷ, ಅವಾ ನಾರಾಯಣಾ ಪಣಾ ತೊಟ್ಟಾನ, ಯಾರದು ಕೈ ಮ್ಯಾಲೆ ಆಗತದಂತ.

ಮೋಹನ : ಯಾರದು ಕೈ ಮ್ಯಾಲೆ, ಯಾರದು ಕೆಳಗ ಅನ್ನೂ ಸ್ಥಿತಿಗೆ ಬಂತ ಸ್ಟುಡೆಂಟ್ಸ್ ಮತ್ತು ಟೀಚರ್ಸ್ ಜೀವನ.

ಮಲ್ಲಾರಿ : ಮತ್ತೇನ್ರಿ, ಹೀಂಗ ಮಿಟಿಂಗ್ ಕರದು, ಇನ್‌ಸಲ್ಟ್ ಮಾಡಿ ಕಳಿಸಿದ್ರ ?

ಮೋಹನ : ಅಲ್ರಿ, ಅದು ಮಿಟಿಂಗ್ ಅಂತ ಕರಸಿಕೊಳ್ಳಿಕ್ಕರ ಯೋಗ್ಯ ಅದ ಏನು ? ತಲಾ ಬುಡಾ ಇಲ್ಲದ ಏನೋ ಮಾತಾಡ್ಯಾರ.
ಒಟ್ಟಿನ ಮ್ಯಾಲ ಅಂದರ ಇವರಿಗೆಲ್ಲಾ ತಗದತ್ತ ಬಾಗಲಾಗ್ಯಾವ.

ಸುರೇಶ : ಆದ್ರ ಹಾದಿ ಸಿಗೋದು ಭಾಳ ಕಠಿಣದ್ದದ.

ಮಲ್ಲಾರಿ : ಕಾಲೇಜಿನ ಬಾಗಲಾ ಇನ್ನೂ ತಗಿಯವಲ್ಲರಲ್ಲರಿ.

ಸುರೇಶ : ತಗದಾಗ ತಗಿಲಿ ಬಿಡೊ, ಒಳಗ ಹೊಕ್ಕರಾತು ಎಲ್ಲಾರ ಸಂಗತಿ.

ಮೋಹನ : ಎಲ್ಲಾರ ಸಂಗತಿ ಯ್ಯಾಕೋ ಸಾಕಾಶ ಹೋದ್ರಾತು.

ಮಲ್ಲಾರಿ : ಛೇ, ನಿಮು, ಎಲ್ಲಾರ ಸಂಗತಿ ನೂಗಿಸಿಕೋತ ಒಳಗ ಹೊಗೊದ್ರೊಳಗ ಭಾಳ ಆನಂದಿರತದರಿ.

ಸುರೇಶ : ಬಾಗಲಾ ಅಂತೂ ತಗೀಲಿ ತಡಿ.

ಮೋಹನ : ಪೋರ್ಷನ್ ಮುಗಿಸ್ಯಾರೇನ ನಿಮ್ಮದು ?

ಸುರೇಶ : ಇವರೇನ ಮುಗಸ್ತಾರೋ ?

ಮಲ್ಲಾರಿ : ಎಲ್ಲೀದರೀs.... ಇವರ ಹಾದಿ ನೊಡಕೋತ ಕೂತರ ಹಂಗs ಹೋಗ

ಬೇಕಾದಿತು.

ಸುರೇಶ : ಗ್ರೈಡ್ಸ್ ಅಗನ ಅವಲ್ಲಾ ಪ್ಯಾಟ್ಯಾಗ ಮೂರು ತಾಸಿಗೆ.

ಮಲ್ಲಾರಿ : ಆರ ಆರಲೇ ಮುವತ್ತಾರಕ್ಕ ಸಮಾನ ಅವರಿ ಅವು.

ಮೋಹನ : ಗಿಳಿಪಾಠಾ ಮಾಡಿಕೊಂಡ ಹೋಗಿ ಉಗಳೊದೊಂದ ಅದಲ್ಲರಿ, ಇನ್ನು ಕೆಲಸಾ.

ಸುರೇಶ : ಪ್ರತೀ ವರ್ಷ ಬರೋ ಹಬ್ಬಧಂಗ ಆಚರಿಸಿದರಾತಪಾ. ನನಗಂತಿ ದಡ್ಡ ಬಿದ್ದದ.

ಮಲ್ಲಾರಿ : ಒಂದ ರೀತಿಯಿಂದ ಛಲೋ ಏಳ.

ಸುರೇಶ : ಏನ ಛಲೋನೋ, ಗ್ಯಾಂಬ್ಲಿಂಗ್ ಇದ್ಧಂಗ ಯಾರ ಹೆಚ್ಚಗಿ ಪ್ರಶ್ನಾಕ್ಕ–ಉತ್ತರ ಪಾಠಾ ಮಾಡಿರತಾರ ಅವರಿಗೆ ಹೆಚ್ಚಗಿ ಮಾರ್ಕ್ಸ್ ; ಇಲ್ಲದವರಿಗೆ ಆರ ಆರಲೇ ಮೂವತ್ತಾರರ ಥೇರಿ ಅದನ್ಯ ಅದಲ್ಲಾ.

ಮೋಹನ : ಎಷ್ಟ ಈಸಿ ಆಗಿ ಬಿಟ್ಟದರಿ, ಖರೇವಂದರ ಇದೇನ ಕನಸೋ ನನಸೋ ತಿಳಿಧಂಗಾಗೇದ. ಒಂದ ಜನರೇಶನ್ ಹೋಗಿ ಇನ್ನೊಂದು ಜನರೇಶನ್ ಬಂದದ ಅನ್ನೋದರ ಜನಕ್ಕ ತಿಳದದೋ ಇಲ್ಲೊ ?

ಸುರೇಶ : ಯ್ಯಾರ ತಿಳಕೋತಾರೋ ಒಬ್ಬರಿಗೊಬ್ಬರು ಅಂಜಿ ಕುರುಡರಾಗ್ಯಾರ.

ಮಲ್ಲಾರಿ : ಭಾರೀ ರಮರಾಡಿನ ಆಗೇದ.

ಮೋಹನ : ಹುಟ್ಟಿದ ತಪ್ಪಿಗೆ ಇಸಬೇಕಾಗೆದರಿ.

(ಹಿಂದೆ ಗದ್ದಲ ನಡೆದುಬಿಟ್ಟಿದೆ. ಅಲ್ಲಲ್ಲಿ ಕೂಗೂ ಕೇಳಿಸುತ್ತಿವೆ.)

ಮಲ್ಲಾರಿ : ತಗಿತಾರೋ, ಏನ ಇಲ್ಲರಪಾ, ನಿಂತು ನಿಂತು ಕಾಲು ಮಾತಾಡಲಿಕ್ಕೆ ಹತ್ಯಾವ.

ಸುರೇಶ : ಯ್ಯಾಕ ಬಡಕೋತಿ ತಡಿಯೋ, ಇದ ಏನ ನಾವು ಕಲಿಯೋ ಎಜ್ಯುಕೇಷನ್ ? ಬರೇ ದ್ವೇಷಾ ಕಲಸ್ತಾರಿಲ್ಲೆ.

ಮೋಹನ : ಪಂಗಡಾ, ಗುಂಪು, ಹೊಡದಾಟಾ, ಬಡದಾಟಾ, ಮಚ್ಚಿ ಮೂರು ಪಾಲ ಆದ್ರೂ ಹೋದ ಬುದ್ಧಿ ಬರವೊಲ್ಲರಿ.

ಮಲ್ಲಾರಿ : ಇಷ್ಟ ಎಲ್ಲ ನೋಡಿದಲ್ಲೆ ನಡದ ಬಿಟ್ಟದರಿ, ಕಲ್ಕತ್ತಾದ್ದs ನೋಡ್ರಿ. ಬಾಗಲ ತಗೀತರೀ.

(ಕಾಲೇಜಿನ ಬಾಗಲ ತೆಗೆದು—ಗದ್ದಲ ಮಾಡುತ್ತ ಒಳಕ್ಕೆ ಹೋಗುತ್ತಾರೆ. ನಂತರ ಮತ್ತೆ ಕಾಲೇಜಿನ ಬಾಗಿಲು ಮುಚ್ಚಿಬಿಡುತ್ತದೆ.
ಇಲ್ಲಿಗೆ ರಂಗದ ಮೇಲಿನ ದೀಪಗಳೆಲ್ಲಾ ಆರಿ ಕತ್ತಲೆ ಆಗುತ್ತದೆ. ಈ ಕತ್ತಲೆಯಲ್ಲಿ ಬರೆ ಸಪ್ಪಳ, ಕೂಗುಗಳೂ, ಪ್ರತಿಧ್ವನಿಸಿ ಮಾಯವಾಗುತ್ತವೆ.)

ದೃಶ್ಯ ೬

(ಬಾಗಿಲು ಮುಚ್ಚಿದಂತಿದೆ. ಒಳಗೆಲ್ಲಾ ಕತ್ತಲೆ, ಗದ್ದಲ. ನಡೆದುಬಿಟ್ಟಿವೆ. ಹೊರಗಿನಿಂದ ಕಲ್ಲುಗಳ ತೂರಾಟ ನಡೆದಿದೆ. ಕಾಲೇಜಿನ ಬಾಗಿಲುಗಳಿಗೆಲ್ಲಾ ಪೋಲಿಸರು ನಿಂತಿದ್ದಾರೆ. ಆದರೂ ಕಲ್ಲುಗಳ ತೂರಾಟ ನಡಿದಿದೆ.)

೧ ನೇ ಧ್ವನಿ : ಒಳಗ ಬಂದರ ಹೊರಗ ಹೋಗಲಿಕ್ಕೆ ಆಗವಲ್ಲತು.
೨ ನೇ ಧ್ವನಿ : ಕಲ್ಲ ಬಿಳಲಿಕ್ಕ ಹತ್ಯಾವರಿ.
೧ ನೇ ಧ್ವನಿ : ಪೋಲಿಸರು ಕಂಡ ಕಂಡವರನ್ನ ಹೊಡಿಲಿಕತ್ತ್ಯಾರ.
೩ ನೇ ಧ್ವನಿ : ರಾತ್ರಿ ಯಾಂವ ಇಡು ಅಂದಿದ್ದನಪಾ ಈ ವೋಟಿಂಗ್ ?
೧ ನೇ ಧ್ವನಿ : ನಿಮ್ಮ ಧ್ವನಿ ಎಲ್ಲೋ ಗುರ್ತ್ತಗದ್ದದ. ಕತ್ತಲ್ಯಾಗ ಮಾರಿ ಕಾಣವಲ್ಲತು.
ಸುರೇಶ : ಏನ ?
೧ ನೇ ಧ್ವನಿ : ಹೌದು.
೨ ನೇ ಧ್ವನಿ : ನಾನು ಮಲ್ಲಾರಿ.
೧ ನೇ ಧ್ವನಿ : ನಾನು ಮೋಹನ.
ಸುರೇಶ : ಏನಪಾ ಇದು, ಬರೇ, ಚೌಕ, ಚೌಕ ಕಲ್ಲಾಗಿನ ನೆಲಮುನ್ಯಾಗ ಹಿಡದ ಹಾಕಿಧಂಗ ಆಗೇದಲ್ಲಾ !
ಮಲ್ಲಾರಿ : ನನಗಂತೂ ಕತ್ತಲ್ಯಾಗ ಕಾಲ ಮುಂದ ಇಡಲಿಕ್ಕೆ ಆಗವಲ್ಲತರಿ.
ಮೋಹನ : ಸುಮ್ಮನ ನಿಂತಿರ್ರಿ, ಎಲ್ಲ್ಯರ ಎಡವಿ ಬಿದ್ದೀರಿ.
ಸುರೇಶ : ಒಬ್ಬರ ಕೈ ಒಬ್ಬರು ಹಿಡಕೊಂಡಿರ್ರಿ, ಅಂದರ ತಪ್ಪಿಸಿಕೊಳ್ಳೋದಿಲ್ಲ.
ಮೋಹನ : ನಿನಗೇನ ನೆನಪಾದಿತು, ಒಬ್ಬರ ಕೈ ಒಬ್ಬರು ಹಿಡಕೊಂಡರ.
ಸುರೇಶ ಮಲ್ಲಾರಿ : ಏನ ನೆನಪಾಗಬೇಕೋ ಕತ್ತಲ್ಯಾಗ ?
ಮೋಹನ : ಕುರುಡನ ಹೆಗಲ ಮ್ಯಾಲ ಹೆಳವ ಕುಂತಾನ......
ಸುರೇಶ : ನೀನು ಮಜಾಪಾ, ಕೈ ತಾ ಇಲ್ಲೆ—ಅಂದರ ಇಲ್ಲೇ ಕಟ್ಟೀ ಮ್ಯಾಲೆ ಕೂತು ಮುಗಲ ನೋಡೋಣು.
ಮೋಹನ : ಹೆ, ಹೆ, ನಾ, ಅಲ್ಲಿ ವಲ್ರುಪಾ—
ಮ್ಯಾಲೇನು ಸಿಮೆಂಟಿನ ರೂಫ್ ಇಲ್ಲ.

ಬರೇ ಮುಗಲಿದ್ರ ಮ್ಯಾಲೆ ಬೈಲದ.

ಮಲ್ಲಾರಿ : ನಾಲ್ಕು ಗ್ವಾಡಿ ನಡುವ ನಿಂದರೋದಕ್ಕಿಂತ ಬೈಲಾಗ ನಿಂದರೋದು ಛಲೋನೊ.

ಸುರೇಶ : ಎಲ್ಲೆರ ಹಾದಿ ಹುಡುಕಬೇಕೆಂದರ ಎಲ್ಲಾ ಬಂದ ಮಾಡ್ಯಾರ, ಮ್ಯಾಲೆ ಪೋಲೀಸರು ನಿಂತಾರ.

(ಒಳಗೂ ಹೊರಗೂ ಕೂಗು ಕೇಕೆ ನಡೆದುಬಿಟ್ಟಿವೆ.)

ಮೋಹನ : ಏನ ನಾರಾಯಣಪಾ ಅಂವಾ ಭಾರಿ ಛಂದ ಆಟಾ, ಆಡಿದನಪಾ.

ಮಲ್ಲಾರಿ : (ಅಂಜುತ್ತಾ) ಸುಮ್ಮನಿರ್ರೊ, ಕತ್ತ್ಯಾಲ್ಯಾಗ ಯ್ಯಾರೋ ಇತ್ಲಾಗ ಬರಲಿಕತ್ತ್ಯಾರ.

ಮೋಹನ : ಕತ್ತ್ಯಾಲ್ಯಾಗ ಸಹಿತ ನಮ್ಮಷ್ಟಕ್ಕ ನಮ್ಮನರ ಬಿಡಬಾರದ.

(ಕತ್ತಲೆಯಲ್ಲಿ ಧ್ವನಿ : ಏ, ಏ, ಯಾರವರು, ನಿಂತವರು ? ಸುಮ್ಮನ ಬರ್ರಿಲ್ಲೆ.)

ಮಲ್ಲಾರಿ : ಇಲ್ಲೆ, ಎಲ್ಲರ ಅಡಿಕೊಳ್ಳೋಣರಿ.

ಸುರೇಶ : ಅವರಗ್ಯಾಕ ಅಂಜತಿದೋ ?

ಮೋಹನ : ಸುಮ್ಮನ ಬಾಗಲ ಮರಿಗೆ ನಿಂದರ್ರೊ.

೧ ನೇ ಧ್ವನಿ : ಇದೇ ಈಗ ಇದ್ದರ್ರಿ.

೨ ನೇ ಧ್ವನಿ : ಎಲ್ಲರೀ....?

೧ ನೇ ಧ್ವನಿ : ಇಲ್ಲೆರೀ,...

೨ ನೇ ಧ್ವನಿ : ಕತ್ತ್ಯಾಲ್ಯಾಗ ಹಂಗs ಕಂಡಿರಬೇಕರಿ.

೧ ನೇ ಧ್ವನಿ : ಅತ್ಲಾ ಕಡೆನs ನೋಡೊನು, ಭಾಳ ಕಲ್ಲ ಬಿಳ್ಳಿಕತ್ಯಾವ.

ಮಲ್ಲಾರಿ : ಹಾದಿನs ಸಿಗವಲ್ಲತಲ್ಲರಿ.

ಸುರೇಶ : ಬರ್ರ್ರ ಸಿಕ್ಕತು. ಹೋಗಲಿಕ್ಕೆ ಗೊತ್ತಾಗವಲ್ಲತು.

ಮೋಹನ . ಪ್ರತಿ ದಿನಾ, ಇಲ್ಲೆ ಅಡ್ಡಾಡವರು—ನೆನಪs ಹಾರೇದರಿ. ಕತ್ಲ್ಯಾಗ ಗದ್ದಲದಾಗ ಗದ್ದಲಾಗಿ,....

ಮಲ್ಲಾರಿ : ನೋಡ್ರೀ ಅಲ್ಲೆ, ಏನೋ ಬೆಳಕ ಕಾಣತದ.

ಸುರೇಶ : ಪೋಲೀಸರಿ ಅಂವಾ.

ಮೋಹನ : ಹಾದಿ ಕೇಳೋಣೇನ್ರೊ ?

ಸುರೇಶ : ಹಾದಿನs ಇಲ್ಲಾ, ಎಲ್ಲಿಂದ ತೋರಿಸಬೇಕ್ರಿ.

ಮಲ್ಲಾರಿ : ನಾ ಇಲ್ಲೆ ಕೂಡತೀನಿ.

ಸುರೇಶ : ಕಾಲೇಜದಾಗ ಹೊಕ್ಕೊಬಾರದಿತ್ತು.

ಮೋಹನ : ಅದಕ, ನಾ ಹೇಳಿದೆ, ಸವಕಾಶ ಹೋದ್ರಾತು ಅಂತ.

ಮಲ್ಲಾರಿ : ಎಲ್ಲಾರ ಸಂಗತಿ, ಒಳಗ ಹೊಕ್ಕಿದ್ದ ತಪ್ಪಾತರೊ್ರಿ.
ಮೋಹನ : ಸುಮ್ಮಗ ಮುಂಗಲಾಗಿನ ಚಿಕ್ಕಿ ಎಣಿಸಿಗೋತ ಕುತರಾತೇಳು.
ಸುರೇಶ : (ವಿಕಾರವಾಗಿ ನಗುತ್ತ) ಮುಗಲಾಗ ಹಾದಿ ಹುಡುಕೊಣೆನು ?
ಮೋಹನ : (ಅಂಜುತ್ತ) ಬ್ಯಾಡ್ರಪಾ, ಬ್ಯಾಡಾ, ನಾ ಒಲ್ಲೆ.
ಮಲ್ಲಾರಿ : ಹಾದಿ ಹುಡುಕೊಣ್ರಿ.
ಸುರೇಶ : ಹಾದಿಗಳೆಲ್ಲಿವೆ ?
ಮೋಹನ : ಮುಗಲಾಗ ಅವ—
ಸುರೇಶ : ಮುಂಗಲಾಗೆನ ನನಗ ಕಾಣವಲ್ಲತು, ಬರೇ ಹಿಂಜಿದ ಮೋಡ ಮುಸಿಕಿಲ್ಲ ?
ಮಲ್ಲಾರಿ : ಆಕಾಶದ ಮಾತ ಯ್ಯಾಕರಿ ಮೊದ್ಲ ನೆಲದ ಮ್ಯಾಲೆ ಹಾದಿ ಹುಡುಕೋಣ.
ಮೋಹನ : ನಿಮಗೆಲ್ಲಾ ನಿಮ್ಮನ್ಯಾಗ ಹಾದಿ ಸಿಕ್ಕಾವೆನ ?
ಸುರೇಶ : ಮನಿಯೊಳಗ ಎಂಥಾ ಹಾದಿ ಸಿಗೋದೊ ? ನಮಗೆಲ್ಲಾ ನಮ್ಮ ನಮ್ಮ ಮನಿಗಳ ಹಾದಿ ಗುರ್ತದ.
ಮಲ್ಲಾರಿ : ನೆಲದ ಮ್ಯಾಲೆ ಬಿದ್ದಾವ, ಒಂದೊಂದ ಹಿಡಕೊಂಡ ಹೋದರಾತು.
ಮೋಹನ : (ಖಿನ್ನನಾಗಿ) ನೆಲದ ಮ್ಯಾಲಿನ ಹಾದಿ ಹೊರಗಿನವಾದವು. ಮನಿ ಒಳಗಿನ ಹಾದಿ ಸಿಕ್ಕಾವೆನ ?
ಸುರೇಶ : ನನಗೇನ ನಿನ್ನ ಮಾತ ತಿಳಿವಲ್ಲವು.
ಮಲ್ಲಾರಿ : ಸ್ವಲ್ಪ ಬಿಡಿಸಿ ಹೇಳಲ್ಲಾ.
ಮೋಹನ : ಬಿಡಿಸಿ ಹೇಳೋ ಅಂಥಾ ಮಾತ ಅಲ್ಲಪಾ ಇದು.
ಸುರೇಶ : ಒಳಗಿನ ಮಾತು ಹೊರಗಿನ ಮಾತು ಅಂದರೇನು ?
ಮಲ್ಲಾರಿ : ಭಾರಿ ಕಠಿಣ ಅದರ್ಯಪಾ.
ಮೋಹನ : ಭಾಳ ಕಠಿಣ ಅದರಿ ಜೀವನಾ ಈ ಕತ್ತಲಿ ಹಂಗ ಅದ. ಇದರಾಗ ಹಾದಿ ಹುಡಕೊದು ಏನ ಸಾಮಾನ್ಯ ಕೆಲಸ ಅಲ್ಲರಿ.
ಮಲ್ಲಾರಿ : ಒಮ್ಮೆ ಎಲ್ಲಿಂದರ ಲೈಟ್ ಹತ್ತಿದರ ಸಾಕು, ನಾನು ಮನಿಗೆ ಓಡಿ ಹೊಗ್ತಿನಿ.
ಸುರೇಶ : ಏನ ಹೋಗ್ತಿದೋ ಹೊರಗ ಪೋಲಿಸರಿದ್ದಾರ.
ಮೋಹನ : ನೀವಿಬ್ಬರು ನನ್ನ ಪ್ರಶ್ನಾಕ್ಕ ಉತ್ತರಾನs ಹೇಳಿಲ್ಲ. (ಕಹಿಯಾಗಿ ನಗುತ್ತ) ಸಿಕ್ಕಿದ್ದರ ಹೆಳತಿದ್ದಿರಿ, ನಿವಾರ ಏನ ಮಾಡಿರಿ ?
ಮಲ್ಲಾರಿ : ನಾಲ್ಕ ಗೋಡಿ ಮೇಲೆ ಒಂದು ಹಂಚಿನ ಸೂರು ಇಳಿಸಿ ನೆಲಕ್ಕೆಲ್ಲಾ ಪಾಟಿಕಲ್ಲ ಹಾಕಿದ್ದರಾಗ ಹಾದಿ ಎಲ್ಲಿಂದ ಸಿಗಬೇಕರಿ.........?

ಸುರೇಶ : ನಮಗಂತೀ ಸಿಕ್ಕಿಲ್ಲ, ನಿನಗೇನರ...............?

ಮೋಹನ : (ಮೌನ)

(ಇದೇ ಹೊತ್ತಿಗೆ ಈ ಮೌನವನ್ನು ಮುರಿಯುವಂತೆ ಹೊರಗೆ ಮತ್ತೆ ಗದ್ದಲ ಕೂಗುಗಳೂ ಕೇಳಿಸಿ ಒಮ್ಮೆಲೆ ಎಲ್ಲ ಸ್ತಬ್ಧವಾಗಿ, ಫಕ್ಕೆಂದು ದೀಪಗಳು ಹತ್ತಿಕೊಳ್ಳುತ್ತವೆ. ದೀಪಗಳು ಹತ್ತಿದವೆಂದು ಎಲ್ಲರೂ ಕೂಗಿಕೊಳ್ಳುತ್ತಾರೆ. ಅಂದರೆ ಈವರೆಗೆ ರಂಗದ ಮೇಲಿದ್ದ ಈ ಮೂವರ ಮೇಲಿನ ಬೆಳಕು ರಂಗದ ತುಂಬೆಲ್ಲಾ ಪಸರಿಸುತ್ತದೆ.)

(ಈಗ ರಂಗದ ಇನ್ನೊಂದು ಭಾಗಕ್ಕೆ)

ಪೋ. ಇನ್. : ಹುಡುಗ ಖೋಡಿಗಳು ಎಷ್ಟು ಧಾಂದಲೆ ಹಾಕ್ಯಾವರೀ.......? ನಾಯಿ ಹಿಡಿಧಂಗ ಹಿಡದ ಕುಂದರಿಸೇನರಿ ಹೊರಗ.......

ಪ್ರಿ. : ಭಾಳ ಥ್ಯಾಂಕ್ಸ್‌ರೀ ಸಹಾಯಕ್ಕ.

ಲಿಂ. : (ಅಂಜುತ್ತ) ಅಲ್ಲರಿ ಮತ್ತ ಆ ನಾರಾಯಣ ಸಿಕ್ಕಾನಿಲ್ಲರಿ,

ಪೋ. ಇನ್. : ಸಿಗದ ಅವೆಲ್ಲಿ ಹೊಕ್ಕಾನರೀ ಒಂದೆರಡು ಒದಶಿ ಕೊಟ್ಟೆ, ಬೆಕ್ಕ ಬೆಕ್ಕ ಆಗ್ಯಾನ.

(ಹೊರಗೆ ಸಾಲಾಗಿ ಒಂದು ೧೦-೧೫ ವಿದ್ಯಾರ್ಥಿಗಳಿಗೆ ಬೇಡಿ ಹಾಕಿ ಕೂಡಿಸಿದ್ದಾರೆ. ಇವರ ಎದುರಿಗೆ ನಿಂತ ಪೋಲೀಸರು ಆಗೀಗ ತಮ್ಮ ಕೈಯಲ್ಲಿಯ ಕೋಲಿನಿಂದ ಹೊಡೆಯುತ್ತಿದಾರೆ. ದೂರದಿಂದ ಕಾಲೇಜಿನ ವಿದ್ಯಾರ್ಥಿಗಳು ಇದನ್ನು ನೋಡುತ್ತಿದ್ದಾರೆ. ಇವರಲ್ಲಿ ಮಲ್ಲಾರಿ, ಮೋಹನ ಮತ್ತು ಸುರೇಶ ಸಹ ನಿಂತಿದ್ದಾರೆ.)

ಸುರೇಶ : ಬೇಡಿ ಹಾಕ್ಯಾರಲ್ಲೊ.

ಮಲ್ಲಾರಿ (ಸಾವಕಾಶವಾಗಿ) ನಾರಾಯಣನನ್ನೂ ಹಿಡದಾರಲ್ಲರೀ.

ಮೋಹನ : ಇದನ್ನು ನೋಡಿದರ ನನಗೂ ಒಟ್ಟು ಜೈಲಿಗೆ ಹೋಗಬೇಕು ಅನಸ್ತದ. ಇದೇ ಹೊತ್ತಿಗೆ ಪ್ರಿ, ಲಿಂ. ಇನ್‌ಸ್ಪೆಕ್ಟರ್‌ರು ಅಲ್ಲಿಗೆ ಬರುತ್ತಾರೆ)

ಲಿಂ. : (ನಾರಾಯಣನಿಗೆ) ಈಗ ಗದ್ದಲಾ ಹಾಕೋ ನೋಡತೀನಿ.

ಪ್ರಿ. : (ಇನ್ಸ್‌ಪೆಕ್ಟರನಿಗೆ) ಇವನ್ನ ಜೇಲಿನಾಗ ಅಟ, ಛಲೋತ್ನ್ಯಾಗ ಥಳಿಸರಿ.

ಪೋ. ಇನ್. : ಅದರ ಕಾಳಜಿ ಬಿಡರಿ, ಇವನ ಥಳಿಸs ಬಿಡಿಸ್ತಿವಿ.

ಮೋಹನ : ಥಳಿ ಬಿಡಿಸಬೇಕಾದರ, ಥಳಿ ಎಲ್ಲಿ ಹತ್ತೇದ ಅವಗ ?

ಮಲ್ಲಾರಿ : ಸುಮ್ಮನಿರೋ. ಎಲ್ಲೆರ ಅವರಿಗೆ ನಿನ್ನ ಮಾತು ಕೇಳಿಸಿ ನಿನ್ನೂ ಅರೆಸ್ಟ ಮಾಡ್ಯಾರು.

ಮೋಹನ : (ಆವೇಶದಿಂದ) ಹುಚ್ಚ ಸೂಳೆ ಮಕ್ಕಳು, ಕಳ್ಳರ್ನ ಹಿಡಿಸಿಧಂಗ ಹಿಡಿಸ್ಯಾರ, ವಿದ್ಯಾರ್ಥಿಗಳನ್ನ.......

ಪ್ರಿನ್ಸಿಪಾಲ : (ಇನ್ಸ್‌ಪೆಕ್ಟರ್‌ರಿಗೆ) ಪೋಲಿಸ ವ್ಯಾನು ಬರೋದು ತಡಾ ಆದೀತು, ಹಾಂಗs ನಡಿಸಿಗೋತನ ಹೋಗರಿ.

ಪೋ. ಇನ್. : ಅದ ಪಾಡ ಅನಸ್ತ್ಯತಿ ನನಗ.
(ಎಂದು ಎಲ್ಲರನ್ನು ಎಬ್ಬಿಸಿ ನಿಲ್ಲಿಸುವನು. ಒಬ್ಬರ ಹಿಂದೇ ಒಬ್ಬರನ್ನು ನಡೆಸುತ್ತ, ಕತ್ತೆಗಳನ್ನು ಹೊಡೆದುಕೊಂಡು ಹೋಗುವಂತೆ ಹೋಗುತ್ತಾರೆ.)

ಮೋಹನ : ನಮ್ಮೊಳಗ ಒಬ್ಬರಿಗೂ ಶಕ್ತಿನs ಇಲ್ಲಲ್ಲರೋ, ಒಂದು ಅನ್ಯಾಯದ ವಿರುದ್ಧ ಬಂಡೆಳೊದು.........

ಮಲ್ಲಾರಿ : ನೀವ್ಹೇಳಿಧಂಗ ಹಾದಿ ಸಿಗೋದು ತ್ರಾಸದ್ದರೀ

ಮೋಹನ : ಸಣ್ಣಾಗಿ ಕಮ್ಯುನಿಸ್ಟರಾಗಲಿಕ್ಕೆ ಹತ್ತೇವರಿ. ಮಾತನಾಡಿದರೆ ಬಾಯಿಗೆ ಗುಂಡು ಹೊಡಿತಾರ ಇವರು.

ಸುರೇಶ : ನನಗಂತೂ ಇದನ್ನ ನೋಡೋದು ಆಗುದಿಲ್ಲಪಾ. ಮನೀಗೆ ಹೋಗತೀನಿ.

ಮಲ್ಲಾರಿ : ನಮ್ಮ, ನಮ್ಮ, ಹಾದಿ ನಮಗ ಮುಂದ ಅವನ ಅವ ಏಳರೀ.
(ಕೊನೆಗೆ ರಂಗದ ಮೇಲೆ ಮೋಹನನೊಬ್ಬನೇ ಖಿನ್ನಮನಸ್ಕನಾಗಿ ಕುಳಿತಿರುತ್ತಾನೆ ; ರಂಗದ ಮೇಲಿನ ಬೆಳಕು ಕ್ಷೀಣವಾಗಿ ಮೋಹನನ ಮುಖದ ಮೇಲಷ್ಟೇ ಕೇಂದ್ರೀಕೃತವಾದ್ದಾಗ್ಗೆ ಪರದೆ ಬೀಳುತ್ತದೆ.)

ದೃಶ್ಯ ೭

(ಮತ್ತೆ ಮೊದಲಿನ ದೃಶ್ಯದ ಮನೆ. ರಂಗದ ಮೇಲೆ ಯಾರೂ ಇಲ್ಲ. ಹೊರಗಿನಿಂದ ಬಾಗಿಲು ಬಡಿದ ಸದ್ದು. ತಾಯಿ ಒಳಗಿನ ಬಾಗಿಲಿನಿಂದ ಹೊರಕ್ಕೆ ಬರುತ್ತಾಳೆ. ಬಾಗಿಲು ತೆಗಿಯಲು ಒಮ್ಮೆಲೇ ಅಂಜಿದವರಂತೆ ಕಂಡು "ಯ್ಯಾರವರು" ಎಂದು ಕೂಗುತ್ತಾಳೆ. "ನಾನು ಮೀನಾಕ್ಷಿ" ಎಂದು ಹೊರಗಿನ ಧ್ವನಿ ಉತ್ತರಿಸುತ್ತದೆ. ಬಾಗಿಲು ತೆರೆಯುತ್ತದೆ. ಮೋಹನನು, ಇದು ಕೇಳಿಸದಂತೆ ಅಲ್ಲೇ ಕುಳಿತಿರುತ್ತಾನೆ.)

ಮೀನಾಕ್ಷಿ : ಅವ್ವಾ, ಕೇಳಿದೇನು ಸುದ್ದಿ ? ಮೋನ್ಯಾನ ಗೆಳೆಯಾ ಸುರೇಶ ಇದ್ದನೋಡು, ಅಂವಾ ಓಡಿ ಹೋದ್ನಂತ.

ತಾಯಿ : ಏನ, ಯಾ ಸುರೇಶಾ ? ಯಾವಾಗ ? ಎಲ್ಲಿ ಓಡಿ ಹೋದಾ ?

ಮೀನಾಕ್ಷಿ : ಅವನಽ ಜೋಲುಮುಖಾ ಹಾಕ್ಕೊಂಡು ಬರ್‍ತಿದ್ದಾ. ಮೋನ್ಯಾ ಥರ್ಡಕ್ಲಾಸ್ ಬಂದು, ಅಂವಾ ಫಸ್ಟ್ ಕ್ಲಾಸ್ ಬಂದಿದ್ದಾ ?

ತಾಯಿ : ಅವನಽ ? ತಿಳಿತ ಬಿಡು. ಏ ಮೋನ್ಯಾ, ಓಡಿಹೋದ್ನಂತಲ್ಲೊ ನಿನ್ನ ಗೆಳೆಯಾ ?

ಮೋಹನ : ನನಗ ಮೊದಲಽ ಗೊತ್ತಿತ್ತು ಅಂವಾ ಓಡಿಹೋಗ್ತಾನಂತ. ಏನ ಸತ್ತಾನ ಇನ್ನಽ ? ಅವರಪ್ಪ ಇಂವಾ ಫಸ್ಟ್‌ಕ್ಲಾಸ್ ಬಂದಿದ್ದಕ್ಕ ಸಮಾಧಾನ ಆಗದನಽ ರ್‍ಯಾಂಕ್ ಯಾಕ ಹಚ್ಚಲಿಲ್ಲಂತ ಯದ್ವಾ ತದ್ವಾ ಬೈದ್ನಂತ.

ತಾಯಿ : ಹೌದು, ಮತ್ತ ರ್‍ಯಾಂಕ್ ಹೋಗಲಿಲ್ಲೇನು. ಎಲ್ಲಾರೂ ನಿನ್ನ್ಹಂಗ ಥರ್ಡ ಕ್ಲಾಸ್ ಆದರ ಹೋದಾರು.

ಮೋಹನ : ಏನ ರ್‍ಯಾಂಕೋ ಏನ ಫಸ್ಟ್‌ಕ್ಲಾಸೋ, ತಿಳಿಯುಽ ಪಲ್ಲದು.

ಮೀನಾಕ್ಷಿ : ನೀ ಬಂದಿಲ್ಲಾ, ಅದಕ....ತಿಳಿದಿಲ್ಲ.

ಮೋಹನ : ಮತ್ತ ಗೊಂಬಿ ಹಂಗ ಉಂ. ಉಂ. ಅಂದ್ಯಾ ?

ಒದರಾಡು
ಬಡದಾಡು
ಕಡದಾಡು

ಪಂಜರದೊಳಗಿನ ಗಿಳಿ ಹಾಡು

$2H_2+O_2=2H_2O$

H_2 ಅಂದರ ನೀರು
ನೀರು ಅಂದರ ಜೀವನಾ,
ಜೀವನ ಅಂದರ

ಥರ್ಡ ಕ್ಲಾಸ್ ಫಸ್ಟ್‌ಕ್ಲಾಸ್,

ಗಾಂಧಿ ಕ್ಲಾಸ್, (ಎಂದು ಹಾಡುವನು.)

ಮೀನಾಕ್ಷಿ : ಅವ್ವಾ ನಾ ದರ್ದಿನಾ ಬಾಯಿಪಾಠ ಮಾಡುದಿಲ್ಲಽ ? ಅದಕ್ಕ ಅಣಗಸ್ತಾನ.

ಮೋಹನ : ಹುಂ. ಒಂದು ಕಡೇ ಅಪ್ಪ ಸತ್ತದ್ದು ಸಂಕಟ ನನಗ. ಇನ್ನೊಂದು ಕಡೆ ಸುರೇಶ ಓಡಿಹೋದದ್ದು. ಇವೆರಡರ ನಡುವ ನಿನಗ ಅಣಕಿಸ್ತಿನಿ. ಹೆ, ಗೊಂಬೀ ಸುಮ್ಮನಿರು.

ಮೀನಾಕ್ಷಿ : ಅವ್ವಾ ನೋಡು (ಅತ್ತವರಂತೆ ಧ್ವನಿ ತೆಗೆಯುವಳು).

ತಾಯಿ : ಅಣಗಸಲೇಳ. ಅವನ ಬಾಯಿನ ಸೊಟ್ಟ ಆಗತದ.

ಮೀನಾಕ್ಷಿ : ನಾ ಅಂತೀ ಮತ್ತ....

ಮೋಹನ : ಚಾಲೂ ಮಾಡ ನೀ ಕಾರ್ಖಾನಿ.

ಮೀನಾಕ್ಷಿ : ಮಾಡದಿದ್ದರ ಪಾಸ ಹೇಂಗ ಆಗಲೋ ?

ಮೋಹನ : ಯ್ಯಾಕ ಜೋತ ಬಿದ್ದೀಯ ಆ ಶೇಕ್ಸ್‌ಪಿಯರಗ, ಫಾಕನರಗ, ಕನ್ನಡದ್ದು ಅವ ಅಲ್ಲ, ಅವನ್ನೋದು.
(ಮತ್ತೆ ಮೀನಾಕ್ಷಿ ಪ್ರತಿಸಲದಂತೆ ಶೇಕ್ಸ್‌ಪಿಯರ್ ಫಾಕನರ್ ಮುಂತಾದವರನ್ನು ಬಾಯಿಪಾಠ ಮಾಡುತ್ತಿರುತ್ತಾಳೆ. ಹೊರಗೆ ಬಾಗಿಲು ಬಡಿಯುವ ಸದ್ದು. ಮೋಹನ ತೆಗೆಯುತ್ತಾನೆ.)

ಆಗಂತುಕ : ಗುರ್ತ ಸಿಕ್ಕಿತೇನು ?

ಮೋಹನ : ಯ್ಯಾರು, ನನಗೇನ ನಿಮ್ಮ ಗುರ್ತು ಹತ್ತಲಿಲ್ಲಾ,

ಆಗಂತುಕ : ನಿಮ್ಮ ಮದರ್‌ನ ಕರೀರಿ ಗುರ್ತ ಹಿಡಿತಾರ.

ಮೋಹನ : ಏ, ಮೀನಾಕ್ಷಿ, ಯಾರೋ ಬಂದಾರ ನೋಡು.

ಮೀನಾಕ್ಷಿ : ನಾ ಬಾಯಿಪಾಠ ಮಾಡಬೇಕಾಗೆದ. ಅವ್ವಾ ಯಾರೋ ಬಂದಾರ ನೋಡು (ತಾಯಿ ಬರುವಳು).

ಆಗಂತುಕ : ಏನ್ರೀ, ಲಕ್ಷ್ಮೀ ಮಾಮಿ, ಗುರ್ತ ಸಿಕ್ಕಿತೇನು ನನ್ನದು ?

ತಾಯಿ : ಬಾರಪಾ ಗುರುನಾಥಾ, ಎಷ್ಟ ದೊಡ್ಡವಾಗಿದೊ ? ಸಣ್ಣವಿದ್ದಾಗ ನೋಡಿದ್ದೆ. ಅಪ್ಪಾ ಅವ್ವಾ, ಆರಾಮವಿದ್ದಾರ ?

ಗುರುನಾಥ : (ದೇಶಾವರಿ ನಗೆ) ಎಲ್ಲಿ ಅಪ್ಪ ಅವ್ವಾರೀ. ತೀರಿಕೊಂಡ ಬಿಟ್ಟರು. ಮನ್ನೆ ಮಳಿ ಹೊಡ್ತಕ್ಕ ಹಳ್ಳ್ಯಾಗಿನ ಮನಿ ಬಿತ್ತರಿ, ನಾ ಮತ್ತ ಪಾರಾಗಿ ಬಂದೀನಿ. ನಿಮ್ಮ ಹೆಸರು ಹೇಳಿದ್ದರು—ಬಂದೆ.

ತಾಯಿ : ಅನಾಥನ್ನ ಮಾಡಿ ಹೋದ್ರು ನಿಮ್ಮಪ್ಪಾ ಅವ್ವಾ ನಿನ್ನ ? ದೇವರು ಹೀಂಗ ಮಾಡಬಾರದಿತ್ತಪಾ.

ಮೋಹನ : ರಾಮದೇವರ ಫೋಟೋಕ್ಕ ಕೈ ಮುಗಿದು ಕೇಳು. ಹೀಂಗ್ಯಾಕ ಮಾಡ್ದಿ ಅಂತ.

ಗುರುನಾಥ : ಛೆ, ನೀವು ನಿವ್ಯಾಕ ಜಗಳಾಡತೀರಿ ಅದಕ್ಕ ?

ತಾಯಿ : ಬಾ ಒಳಗ. ಹಸದ ಬಂದಿದಿ ಕಾಣ್ತದ. ತಬ್ಬಲಿ ಆಧಂಗ ಆಗಿದೀ. (ಹೋಗುವರು)

ಮೋಹನ : (ತನ್ನಷ್ಟಕ್ಕೆ) ಸುರೇಶಾ ಓಡಿ ಹೋದಾ, ಉಡಾಳ ಹುಡುಗರ ಸಂಗತಿ ಬಿದ್ದ ಅಂತಾ ಹೊಡಕೊಂಡರು. ಒಮ್ಮೆರ ಮಗನಂಗ ನೋಡಕೊಳ್ತಿದ್ದ ಈ ಹೆಣ್ಣಮಗಳು ಎಲ್ಲಿಂದಲೋ ಬಂದವಗ ಅನಾಥಾ ಅನ್ನಬೇಕಾದರ, ಎಲ್ಲೋ ಏನಾರ ತಪ್ಪಿರಬೇಕು ಅಂತ ಅನಸ್ತದ. ಈ ಹುಡುಗಿ ಬಾಯಿಪಾಠ ಮಾಡಿ, ಮಾಡಿ, ದಣೀತದ ದಿನಕ್ಕ. ನಾ

ವಿಚಾರ ಮಾಡಿ ದಣಿತೀನಿ. ಯಾಕಿದೆಲ್ಲಾ ವಿಚಾರ ? ನಾ ನನ್ನ ಹಾದಿ ಕಾಣಿಸಿಕೊಳ್ಳೋದ, ಸರಿ ಕಾಣಸ್ತದ. ಮಾವಾ ಬಂದಾ, ಸಿಕ್ಕಂಗ ಮಾತಾಡಿದಾ, ಛೆ, ಸಿಗಬೇಕಾದವರಿಗೆ ಸಿಗಬೇಕಾಗಿದ್ದ, ಸಿಗಲಿಕ್ಕಾರ ಹೆಂಗ....

(ನಡುನಡುವೆ ತಾಯಿ ಗುರುನಾಥರ ನಡುವಿನ ಮಾತು ಅಸ್ಪಷ್ಟ)

ಗುರುನಾಥ : ಕಡೆ ಕಡೆಗಂತೂ, ಅಪ್ಪಾ ಅವ್ವಾ ಉಪಾಸ ಬಿದ್ದಿದ್ದರು.

ತಾಯಿ : ಹುಳಪಲ್ಯಾ ಉಣ್ಣು, ಭಕ್ಕರಿ ತಿನ್ನು, ಆರಾಮಿರು.

ಮೋಹನ : (ಅವ್ವನಿಗೆ ಒದರಿ ಹೇಳಿ) ಅವ್ವಾ ನಾ ಹೊರಗ ಹೊಗಿರ್ತೀನಿ. ಸ್ವಲ್ಪ ಬರೋದು ತಡಾ ಆದೀತು.

ತಾಯಿ : ಈ ಗುರುನಾಥನ ಸಂಗತಿ ಅಷ್ಟು ಮಾತಾಡಿ ಅಂತ ಇರು.

ಮೋಹನ : ಇಲ್ಲ ನನಗ ಅರ್ಜೆಂಟ್ ಕೆಲಸದ ಹೋಗ್ತೀನಿ. (ಹೋಗುವನು)

ದೃಶ್ಯ ೮

(ಮೊದಲಿನ ಮನೆ. ಗುರುನಾಥ, ತಾಯಿ, ಮೀನಾಕ್ಷಿ ಕುಳಿತಿದ್ದಾರೆ.)

ತಾಯಿ : ಎಷ್ಟು ಹೊತ್ತಾತು, ಮೋನ್ಯಾ ಹೊರಗ ಹೋಗಿ ಇನ್ನೂ ಬಂದಿಲ್ಲಂದರ.

ಗುರುನಾಥ : ಎಲ್ಲೆರ ಹೊಗ್ಯಾನೋ ಇಷ್ಟೊತ್ತನಕಾ.

ತಾಯಿ : ಹೇಳೋದು ಕೇಳೋದು ಎಲ್ಲಾ ಮುಗದದ. ಮನ್ಯಾಗ ಹಿರೇರು ಇಲ್ಲಾಂದರ ಹಿಂಗ ಆಗತಾರ ನೋಡು.

ಮೀನಾಕ್ಷಿ : ಮ್ಯಾಲೆ ನೀ ಹಗಲೆಲ್ಲ ಜಗಳಾಡತೀದಿ ಅವನ ಸಂಗತಿ. ಏನ್ ಮಾಡ ಬೇಕ ಅವನಾರ ?

ಗುರುನಾಥ : ನಮ್ಮವ್ವಾ, ಒಮ್ಮೆಯೂ ಜಗಳಾಡಲಿಲ್ಲ ನೋಡರಿ ನನ್ನ ಸಂಗತಿ.

ತಾಯಿ : ನಿಮ್ಮವ್ವಾ ಮೊದ್ಲಿನಿಂದಲೂ ಅಪರೂಪದ ಜೀವ.

ಗುರುನಾಥ : ತಮಗ ಎಷ್ಟು ತ್ರಾಸವಿದ್ದರೂ ನನಗ ಒಮ್ಮೆಯೂ ತೋರಗೊಡಲಿಲ್ಲ. ಪಾಪ ಎರಡೂ ಸತ್ತು ಹೋದವು.

ಮೀನಾಕ್ಷಿ : ನೀ ಹೆಂಗ ಉಳಿದಿ ?

ಗುರುನಾಥ : ಇಡೀ ಮನೀನ ನನ್ನ ಮೈಮ್ಯಾಲೆ ಬಿತ್ತು. ಆದ್ರ ನಾನು ಒಂದು ತೋಲಿಗೆ ಜೋತ ಬಿದ್ದುಕೊಂಡು ಉಳದೆ. ಅವರು ಅದರಾಗ ಚಿಪ್ಪಾಡಿನ ಆದರು.

ತಾಯಿ : ನಿಮ್ಮಪ್ಪಾ ದೇವರಂಥಾ ಮನುಷ್ಯಾ.

ಗುರುನಾಥ : ನೀವ್ಹೇಳಿಧಂಗೆ ಬರಲೇ ಇಲ್ಲಲ್ಲ ಮೋನಣ್ಣ. ಮಾತಾಡಸೋಣ ಅನ್ನೋದರಾಗ ಹೋಗೇ ಬಿಟ್ಟನಲ್ಲ.

ತಾಯಿ : ಎಲ್ಲೆರ ಅವನೂ ಓಡಿ ಹೋದನೋ ? ಛೇ ಅಂಥಾ ಧೈರ್ಯಾದ್ದು ಅಲ್ಲ ಇದು.

(ಮೀನಾಕ್ಷಿಯ ಬಾಯಿಪಾಠ ಮತ್ತೆ ಶುರುವಾಗುತ್ತದೆ)

(ತನ್ನಷ್ಟಕ್ಕೆ) ಖರೇವಂದರ ನನ್ನದೂ ಅವಂದು ಒಂಭತ್ತು ತಿಂಗಳ ಸಂಬಂಧನs ಹೊರತು ಅವಾ ಅನ್ನೋದಾಗರ ಅವನದ್ದೇನ ತಪ್ಪದ ? ನನ್ನ ತಪ್ಪು ನನಗ ಗೊತ್ತಿದ್ದರೂ......

(ನಡುವೆ ಮೀನಾಕ್ಷಿಯ ಬಾಯಿಪಾಠ :

Frailty thy name is woman
Frailty thy name is woman.

ಎಂದು ರಿಂಗಣಗೊಳ್ಳುವ ದನಿ)

ಸುಳ್ಳs ಜಗಳಾಡಿದೆ. ನನ್ನಿಂದ ಭಾಳ ದೂರ ಹೋದರು. ಕನಸಾನ್ಯಾಗ ಕೈ ಚಾಚಿದರು, ಅವರೊಂದು ದಡದ ಮ್ಯಾಲೆ, ನಾವೊಂದ ದಡದ ಮ್ಯಾಲೆ.

(ಮತ್ತೆ Hear it not Duncan
Hear it not.
Tomorrow and tomorrow
ಮತ್ತೆ That creeps into the petty pace.)

ಮತ್ತ ಅಂತ್ಯಾ ಬಂದಾಗೂ, ಅಂವಾ ಏನ ಮಾತಾಡಿದರೂ ಸಹಿಸಿಕೊಂಡ. ಗುರುನಾಥ ಬಂದಾಗ, ಗುರುನಾಥನ ನನ್ನ ಮಗಾ, ಮೋನ್ಯಾ ಹೊರಗಿನವಾ ಅಂತ ನಟಿಸಿದೆ. ಯಾವುದು ಖರೆ ಯಾವುದು ಸುಳ್ಳು ಎಲ್ಲಾ ಹಳವಂಡಾನ.

(ಒಮ್ಮೆಲೆ ತಾಯಿ, ಏನೂ ತಿಳಿಯದಂತಾಗಿ ಶೂನ್ಯದಿಂದ ಒದರುತ್ತಾಳೆ)

ಏ ಮೀನಾಕ್ಷಿ, ಅದನ್ ಬಂದ್‌ಮಾಡು. ಏನದು ಒದರೋದು ? (ಕುಸಿಯುವಳು)

(ಮೀನಾಕ್ಷಿ, ಗುರುನಾಥ ಗಾಬರಿಯಾಗಿದ್ದಾರೆ)

ಮೀನಾಕ್ಷಿ : ಅವ್ವಾ ಏನಾತ ?

ಗುರುನಾಥ : ಏನಾತು ಲಕ್ಷ್ಮೀ ಮಾಮಿ ?

ತಾಯಿ : ಮೋನ್ಯಾನ್ನ ಕಳಕೊಂಡೆ, ಕಳಕೊಂಡೆ (ಎಂದು ಅಳುತ್ತಿದ್ದಂತೆ)

— ತೆರೆ —

"ಹೇ ನನ ರಮಣ"

ಪಿ. ಲಂಕೇಶ್

ಸಾವಂತ್ರಿಗೆ ಕಾಯಿಲೆ ಗುಣವಾಗಿ ನಾಲ್ಕೈದು ದಿನ ಆಗಿರಬಹುದು ; ಹರಯದ ಎಲ್ಲ ಸೌಭಾಗ್ಯದೊಂದಿಗೆ ಓಡಾಡುತ್ತಿದ್ದಳು. ಮಗಳ ಓಡಾಟ, ನಗೆ, ಕಳೆಕಳೆ ನೋಡಿ ಆಣೆ ಬಡ್ಡಿಯ ರಂಗವ್ವನಿಗೆ ಸಂತೋಷವಾದರೂ ಆಕೆಯ ಕೆದರಿದ ತಲೆಯ ಯಾವುದೋ ಮೂಲೆಯಲ್ಲಿ ಅಳುಕು ಶುರುವಾಯಿತು. ಅವ್ವನ ಜೊತೆಗೆ ಸರಿಯಾಗಿ ಮಾತಾಡ ಲೊಲ್ಲಳು ಸಾವಂತ್ರಿ ; ಒಂದು ಕೇಳಿದರೆ ಒಂದು ಉತ್ತರ ಹೇಳುವಳು ; ಏನೇನೋ ಸಿನಿಮಾ ಹಾಡು ಗೊಣಗಿಕೊಳ್ಳುವಳು. ಇಂಥ ಸಿನಿಮಾ ಹಾಡಿನಿಂದ ಒಳ್ಳೆಯದಾಗುವು ದಿಲ್ಲವೆಂದು ರಂಗವ್ವ ಅನುಭವದಿಂದ ಕಂಡುಕೊಂಡಿದ್ದಳು. ಹೋದ ವರ್ಷ ಗಬ್ಬೂರಿನ ಓದಿದ ಹುಡುಗ ದತ್ತಣ್ಣ ಬಂದು ಹಾಡಿಗಾಗಿ ಕೇಳಿದ ; ಒಂದು ಹಾಡಿಗೆ ನಾಲ್ಕಾಣೆ ಕೊಡುವುದಾಗಿ ಹೇಳಿದೊಡನೆ ರಂಗವ್ವ ಮಗಳಿಗೆ ಅಲಂಕಾರ ಮಾಡಿ ತಾನೂ ತಲೆಗೆ ಅಂಗೈ ಹಿಡಿಸುವಷ್ಟು ಎಣ್ಣೆ ಹಾಕಿಕೊಂಡು ತಲೆ ಬಾಚಿಕೊಂಡು ಹಾಡು ಹೇಳಲು ಕೂತಳು. ಮಗಳಿಗೆ ಒಳ್ಳೆಯ ಹಾಡು ಹೇಳೆಂದೊಡನೆ ಆಕೆ "ಹೇ ನನ ರಮಣ ಕನಸೋ ನನಸೋ" ಎಂದು ಹಾಡಹತ್ತಿದಳು. ಪರಿಣಾಮ ಜೋರಾಗಿದೆಯೆಂದು ದತ್ತಣ್ಣನ ಮುಖ ನೋಡಿದರೆ ಅದು ಹಾಗಲಕಾಯಿಯ ಹಾಗಾಗಿತ್ತು. ಏನು ತೊಂದರೆ, ಎಂದು ಕೇಳಿದಳು. ಅವನಿಗೆ ಹಳ್ಳಿಯ ಹಾಡು ಬೇಕಾಗಿತ್ತು ; ಹಾಗೆ ಹೇಳಿ ತನ್ನ ಟೇಪನ್ನು ಸರಿಯಾಗಿ ಹಚ್ಚಿ ಕೂತ. ರಂಗವ್ವನಿಗೆ ಅಚ್ಚರಿಯಾಯಿತು. ಒಂದರಮೇಲೊಂದರಂತೆ ಹತ್ತು ಮನೆದುಂಬಿಸುವ ಹಾಡು ಹೇಳಿ ಎರಡೂವರೆ ರೂಪಾಯಿ ವಸೂಲು ಮಾಡಿ ವರ್ಷದಲ್ಲಿ ಎರಡು ರೂಪಾಯಿಗಿಂತ ಹೆಚ್ಚು ಬಡ್ಡಿ ಗಿಟ್ಟಿಸಿದ್ದಳು. ಈ ಅನುಭವದ ಬೆಳಕಿನಲ್ಲಿ ಆಕೆ ಮಗಳಿಗೆ ಹಸೆಯ ಹಾಡು, ಬೆಳದಿಂಗಳ ಹಾಡು, ನಾಗೋಲೆ ಹಾಡು

ಕಲಿಸಲು ಹೋರಾಡಿದಳು, ಆಗಲಿಲ್ಲ. ಸಾವಂತ್ರಿ ಯಾವುದಾದರೊಂದು ನೆಪ ಮಾಡಿಕೊಂಡು ಕೂತುಕೋಡು ಕಲಿಯುವುದನ್ನು ತಪ್ಪಿಸಿಕೊಳ್ಳುತ್ತಿದ್ದಳು ; ಕೂತರೂ ಏನೋ ಯೋಚನೆಯಲ್ಲಿ ಮುಳುಗಿ ಹಾಡನ್ನು ಕಿವಿಗೇ ಹಾಕಿಕೊಳ್ಳುತ್ತಿರಲಿಲ್ಲ. ಹೀಗಾಗಿ ರಂಗವ್ವ ಪ್ರಯತ್ನ ಕೈಬಿಟ್ಟಳು. ಸಾವಂತ್ರಿ ತನ್ನ ಸಿನಿಮಾ ಹಾಡು ಹಾಡಿಕೊಂಡು ಆನಂದಿಸುವುದನ್ನು ಮಾತ್ರ ಬಿಡಲಿಲ್ಲ. ಈ ಮಧ್ಯೆ ಒಂದು ಅನುಭವವಾಯಿತು. ದಸರಾ ರಜೆಗೆ ಊರಿಗೆ ಬಂದಿದ್ದ ಬ್ಯಾಡರ ಮಂಜ ತನಗೆ ಸಿನಿಮಾ ಹಾಡು ಬೇಕೆಂದು ಹೇಳಿದ ; ತಾನು ದತ್ತಣ್ಣ ಕೊಟ್ಟಿದ್ದಕ್ಕೆ ಎರಡರಷ್ಟು ಮಜೂರಿ ಕೊಡುವುದಾಗಿ ಹೇಳಿ ತನ್ನ ಗರಿಗರಿ ಪ್ಯಾಂಟಿನಿಂದ ನೋಟು ತೆಗೆದು ತೋರಿಸಿದ. ರಂಗವ್ವ ಮಂಜನನ್ನು ಎಂದೂ ಮೆಚ್ಚದಿದ್ದರೂ ಅವನ ನೋಟುಗಳ ದರ್ಶನ ತೀರಾ ಆಕರ್ಷಕವಾಗಿತ್ತು. ಮಗಳಿಗೆ ಅಲಂಕಾರ ಮಾಡಿದಳು ; ತಾನು ಸಿನಿಮಾ ಹಾಡು ಹಾಡುವುದಿಲ್ಲವಾದ್ದರಿಂದ ತಲೆಗೆ ಎಣ್ಣೆ ಹಾಕಿಕೊಂಡರೆ ಕಾಸು ದಂಡ ಎಂದು ಸುಮ್ಮನೆ ಕೂತು ಕೇಳಿದಳು. ಮಂಜ ಟೇಪುರೆಕಾರ್ಡರ್ ತಂದಿರಲಿಲ್ಲ, ಹಾಡುಗಳನ್ನು ಬರೆದುಕೊಳ್ಳುತ್ತಿದ್ದ ; ಬಾಲ ನಾಗಮ್ಮ, ಜಗನ್ಮೋಹಿನಿ, ಕನ್ಯಾದಾನದ ಹಾಡುಗಳೆಲ್ಲ ಮುಗಿದವು. ತನ್ನ ಮಗಳ ಕಂಠ ಅಷ್ಟೇನೂ ಹೇಳಿಕೊಳ್ಳುವಂತಿರಲಿಲ್ಲದಿದ್ದರೂ ಮಂಜ ತಲೆದೂಗುತ್ತ ವಿಧೇಯ ವಿದ್ಯಾರ್ಥಿಯ ಹಾಗೆ ಬರೆದುಕೊಳ್ಳುತ್ತಿದ್ದ ; ಹಾಡಿನ ಸ್ವಾರಸ್ಯ ಜೋರಾಗಿರಬೇಕೆಂದುಕೊಂಡಳು. ತಾನೆಂಥ ಗೊಡ್ಡು, ತನಗೆ ಕೂಡ ಹಾಡು ಬಂದಿದ್ದರೆ ಈಗ ಬರುವ ಐದಕ್ಕೆ ಬದಲು ಹತ್ತು ರೂಪಾಯಿ ವಸೂಲಿಯಾಗುತ್ತಿತ್ತಲ್ಲ ಎಂದು ತನ್ನನ್ನು ತಾನೇ ಬೈದುಕೊಂಡಳು. ಹಾಡು ಸಾಗಿತು ; ಮಗಳ ಬಗ್ಗೆ ರಂಗವ್ವನಿಗೆ ತುಂಬ ತೃಪ್ತಿಯಾಯಿತು. ನೀರು ನಿಡಿ, ಹಕ್ಕಿ ಹಂಕಲು ಕೆಲಸ ತಾನೇ ಮಾಡಿದಳು ; ಹಾಡು ಮುಗಿದ ಬಳಿಕ ಐದೂಮುಕ್ಕಾಲು ರೂಪಾಯಿ ವಸೂಲಿ ಮಾಡಿಕೊಂಡಳು. ಮಂಜ ಶಿವಮೊಗ್ಗೆಗೆ ವಿದ್ಯಾಭ್ಯಾಸ ಮುಂದುವರಿಸಲು ಹೋದ.

ಸಾವಂತ್ರಿ ಇವತ್ತು ಹಾಡು ಹೇಳಿಕೊಳ್ಳುತ್ತ ಓಡಾಡುವುದು ರಂಗವ್ವನಿಗೆ ಸರಿಬೀಳಲಿಲ್ಲ. ಯಾಕೆಂದರೆ ಮಂಜನಿಂದ ಹಣ ಬಂದಿದ್ದರೂ ಆ ತರುವಾಯ ಆದ ಅನುಭವ ಕಹಿಯಾಗಿತ್ತು. ಸಾವಂತ್ರಿಯೇನೋ ಹೆಚ್ಚು ಕಮ್ಮಿ ನಿತ್ಯದಂತೆಯೇ ಇದ್ದಳು ; ಹಾಡುವುದು ಮತ್ತು ಚೆಲ್ಲುಚೆಲ್ಲಾಗಿ ಓಡಾಡುವುದು ಮಾತ್ರ ಹೆಚ್ಚಾಗಿತ್ತು. ಹಾಳಾಗಿ ಹೋಗಲಿ ಎಂದುಕೊಂಡು ರಂಗವ್ವ ತನ್ನ ಕೆಲಸ ತಾನು ಮಾಡಿಕೊಂಡು ಇದ್ದಳು. ಒಂದು ದಿನ ಮಗಳ ಹಾಸಿಗೆ ಕೊಡಹುತ್ತಿದ್ದಾಗ ಜಮಖಾನದ ಸಂದಿನಲ್ಲಿ ಒಂದು ಕಾಗದದ ಹಾಳೆ ಸಿಕ್ಕಿತು. ಅದು ಮಂಜ ಬರೆದುಕೊಂಡ ಹಾಡುಗಳಿರಬೇಕು ಅಂದುಕೊಂಡಳು. ಆದರೆ ಹಾಡನ್ನು ಬಚ್ಚಿಡಬೇಕಾದ್ದಿರಲಿಲ್ಲ. ಅನುಮಾನ ಹೆಚ್ಚಾಯಿತು ; ಸೀರೆಯ ಸೆರಗಿನಲ್ಲಿ ಕಟ್ಟಿಕೊಂಡಳು ; ನೀರಿಗೆ ಹೋಗುವಾಗ ಹನುಮಕ್ಕನ ಮಗ ಕರಿಯನಿಗೆ ತೋರಿಸಿದಳು ;

ಆತ ತಡವರಿಸುತ್ತ ಸಂಪೂರ್ಣವಾಗಿ ಓದಿದ. ಸಾರಾಂಶದಲ್ಲಿ, "ನನ್ನ ಹೃದಯಪಕ್ಷಿ ಸಾವಂತ್ರಿ, ನಿನ್ನ ಹಾಡು ಕೇಳಿ ನನ್ನ ಮನಸು ಆನಂದದಲ್ಲಿ ಓಲಾಡುತ್ತಿದೆ. ನಿನ್ನ ಮುಖ ಕಮಲ ನನ್ನ ಹೃದಯದಲ್ಲಿ" ಇತ್ಯಾದಿ ಇತ್ಯಾದಿ ಇತ್ತು. ರಂಗವ್ವ ಕರಿಯನಿಗೆ ಬೂಸಿ ಮಾಡಿ ಚಪಲಕ್ಕಿ ಕೊಡುವುದಾಗಿ ಆಶೆ ತೋರಿಸಿ ಯಾರಿಗೂ ಹೇಳಬಾರದೆಂದು ಬೇಡಿ ಕೊಂಡಳು ; ರಂಗವ್ವ ಚಪಲಕ್ಕಿ, ಚಿಗಳಿ ಏನನ್ನೂ ಕೊಡದಿದ್ದುದರಿಂದ ನಾಲ್ಕೈದು ದಿನಗಳ ತರುವಾಯ ಕರಿಯ ಎಲ್ಲರಿಗೂ ಹೇಳುತ್ತ ಹೋದ. ಅದು ಹೋಗಲಿ, ರಂಗವ್ವ ಮಗಳಿಗೆ ತಾನು ಚೀಟಿ ನೋಡಿದ ವಿಚಾರ ಹೇಳಲಿಲ್ಲ ; ಸಾವಂತ್ರಿಗೆ ಗೊತ್ತಾದರೂ ಬಾಯಿ ಬಿಡಲಿಲ್ಲ. ಹೀಗಾಗಿ ಮಂಜ ಮುಂದೆ ಊರಿಗೆ ಬಂದಾಗ ಎಚ್ಚರ ವಹಿಸಬೇಕೆಂದು ನಿರ್ಧರಿಸಿ ರಂಗವ್ವ ಸುಮ್ಮನಾದಳು.

ಈಗ, ಮೊನ್ನೆ ತಾನೆ ಕಾಯಿಲೆ ಬಿದ್ದು ಶಾಸ್ತ್ರಿಗಳ ಔಷಧಿ ಪಡೆದ ಹುಡುಗಿ ಹಾಡಿ ಕೊಳ್ಳುತ್ತ ಓಡಾಡುವುದು ಕಂಡು ರಂಗವ್ವನಿಗೆ ಗೊಂದಲವಾಯಿತು. ನೀರು ತರಲು ಬಾವಿಗೆ ಕೂಡ ಹೋಗದೆ ಮನೆಯಲ್ಲಿ ಕೂತಳು. ಸಾವಂತ್ರಿ ಅವ್ವನಿಗೆ ಹೆಚ್ಚು ಪ್ರಾಮುಖ್ಯ ಕೊಟ್ಟಂತಿರಲಿಲ್ಲ ; ತನ್ನ ಹಾಡು ಸಾಗಿಸಿಯೇ ಇದ್ದಳು. ಹೀಗೆ ಮಗಳು ಕೊಬ್ಬಬಹುದೆಂದು ರಂಗವ್ವ ಎಣಿಸಿರಲಿಲ್ಲ. ಶಾಸ್ತ್ರಿಗಳಿಂದ ಔಷಧಿ ಕೊಡಿಸದಿದ್ದರೇ ಒಳ್ಳೆಯದಾಗುತ್ತಿತ್ತೆಂದು ಒಮ್ಮೆ ಅನ್ನಿಸಿತು, ಆದರೆ ಪುಕ್ಕಟೆ ಏನು ಸಿಕ್ಕರೂ ಬಿಡಲು ಮನಸು ಬಾರದ ರಂಗವ್ವ ಹಣದ ಬಾಬ್ತು ಯೋಚಿಸಿ ಸಮಾಧಾನಪಟ್ಟುಕೊಂಡಳು. ದಿನವೆಲ್ಲ ಮನೆಯಲ್ಲಿದ್ದು ಬೇಸರವಾಯಿತು. ಧರ್ಮಣ್ಣನ ಹಲ್ಲರ್ ಹತ್ತಿರವಾದರೂ ಹೋಗಿ ಹಿಟ್ಟು ಮಾಡಿಸಲು ಬರುವವರೊಂದಿಗೆ ಹರಟಬಹುದೆನ್ನಿಸಿತು. ಹೀಗೆ ಯೋಚಿಸುತ್ತ ತನ್ನ ಮನೆಯ ಪುಟ್ಟ ಜಗುಲಿಯ ಮೇಲೆ ಕೂತು ಬಾಯಿಗೆ ಅಡಿಕೆ ಎಸೆದುಕೊಂಡು ಯೋಚಿಸಹತ್ತಿದಳು. ಆಗ ತನ್ನ ಕಣ್ಣನ್ನು ತಾನೇ ನಂಬದಾದಳು ; ಮಂಜ ಸೈಕಲ್ ಮೇಲೆ ಬಂದ. ಸಾಕ್ಷಾತ್ ಮಂಜ ! ನಗುತ್ತಿದ್ದಾನೆ ! ರಂಗವ್ವನಿಗೆ ಆತನನ್ನು ಹೇಗೆ ಬಯ್ಯುವುದು ಅಥವಾ ಹೊಗಳುವುದು ಗೊತ್ತಾಗಲಿಲ್ಲ ; ಸೈಕಲ್ಲಿನಷ್ಟೇ ಕಪ್ಪಗಿದ್ದ, ಎತ್ತರಕ್ಕೆ ನಿಂತಿದ್ದ. "ನಮಸ್ತೆ ರಂಗವ್ವ, ಚೆನ್ನಾಗಿದ್ದೀರಾ ?" ಅಂದ. ಆತ ಮಾತಾಡಿದನೋ ಇಲ್ಲವೋ ರಂಗವ್ವ ಉರಿದೆದ್ದಳು. "ಹೋಗೋ ಹೋಗೋ ದಗಲ್ಬಾಜಿ !" ಅಂದಳು. ಜನಕ್ಕೆ ಕೇಳಿಸಿ ಎಲ್ಲರೂ ಮನೆಯಿಂದ ಕತ್ತು ಹಾಕಿ ನೋಡ ಬಹುದೆಂದು ಸಿಟ್ಟನ್ನೆಲ್ಲ ಸಣ್ಣ ಧ್ವನಿಗೆ ಗಿಡಿದು ಬೈದಿದ್ದಳು. ಆದರೂ ಸಾವಂತ್ರಿ ಒಳಗಿ ನಿಂದ ಸರಸರ ಬಂದು ಮಂಜನನ್ನು ನೋಡುತ್ತ ನಿಂತಳು. "ಒಳಗೆ ಹೋಗೇ ಹಾದರ ಗಿತ್ತಿ" ಅಂದಳು ರಂಗವ್ವ ; ಅದನ್ನೂ ಮೆತ್ತಗೇ ಹೇಳಿದ್ದಳು. ಮಂಜ ನಕ್ಕ ; ಪ್ರಮಾದ ವಾಗಿದೆಯೆಂದು ತಿಳಿದು ವಿಷಯ ಬದಲಿಸಿ ತಾನು ಬಂದ ಕಾರಣ ತಿಳಿಸಲು ಉದ್ಯುಕ್ತ

ನಾದ. "ಶ್ರೇಷ್ಠಿಯವರ ಮನೆ ಶಿವಲಿಂಗಪ್ಪನವರ ಹತ್ರ ಕೆಲಸಿತ್ತು, ಬಂದೆ. ಆದರ ಸಂಗ್ತಿಗೇ ನಿಮ್ಮ ಹತ್ರ ಆಡು—ಅಲ್ಲ ಹಾಡು...."

"ಆಡು ಕುರಿ ಎಲ್ಲ ಕುರುಬರ ಮನ್ಯಾಗೆ ಕಣೋ ಭಾಡ್ಯಾ, ಹೋಗು ಅದೇನೋ ಹೇಳ್ತಾರಲ್ಲ, ನಾಯಿಗೆ ಸಲಿಗೆ ಕೊಟ್ರೆ ನಡುಮನೆಗೆ ಬಂದಿತ್ತಂತೆ" ಅಂತ ಒಂದು ಗಾದೆ ಯನ್ನೂ ಸೇರಿಸಿದಳು. ಅವನು ಮುಖ ಸಣ್ಣದು ಮಾಡಿಕೊಂಡು ಸೈಕಲ್ ಹತ್ತುವುದ ರಲ್ಲಿದ್ದಾಗ, "ಅದೆಂಥದಪ್ಪ ನಿನಗೆ ಸಿವಲಿಂಗಪ್ಪನ ಹತ್ರ ಕೆಲಸ ? ನಿಮ್ಮಂಥೋರ ಗೆಣೆಕಾರ್ತನ ಮಾಡೇ ಸಿವಲಿಂಗಪ್ಪ ಹಾಳಾದ. ಹೋಗು, ಹೋಗು" ಅಂದಳು.

ಅದೆಷ್ಟೇ ಅವಮಾನವಾಗಿದ್ದರೂ ಸಾವಂತ್ರಿಯ ಕಡೆ ತಿರುಗಿ ಆತ ತುಟಿ ಬಿರಿಸದೆ ಇರಲಿಲ್ಲ. ಇದು ಗೊತ್ತಾದ್ದರಿಂದ ರಂಗವ್ವ ಎದ್ದು ಮೂಲೆಯಲ್ಲಿ ಬಿದ್ದಿದ್ದ ಕಸಮರಿಗೆ ತೆಗೆದುಕೊಂಡು "ಏನೇ ಬೋಸುಡಿ" ಎಂದು ಹೊಡೆಯಲು ಸಿದ್ಧತೆ ಮಾಡಿಕೊಂಡಳು. ಆದರೆ ಸಾವಂತ್ರಿ ಬೆಳೆದ ಹುಡುಗಿಯಾದ್ದರಿಂದ ಅವ್ವನ ಹೊಡೆತದಿಂದ ತಪ್ಪಿಸಿಕೊಳ್ಳ ತೊಡಗಿದಳು. ಅವ್ವ ಹಿಡಗೋಲು ಎತ್ತಿದೊಡನೆ ಕಂಬದ ಮರೆಗೆ ಹೋಗುವಳು ; ಏಟು ಕಂಬಕ್ಕೆ ಅರ್ಧ ತನಗೆ ಅರ್ಧ ಬಿದ್ದೊಡನೆ ಅವ್ವನಿಗೂ ತೃಪ್ತಿಯಾಗಲೆಂದು ಪೂರ್ತಿ ಏಟು ಬಿದ್ದಂತೆ ನಟಿಸುತ್ತ ಪಕ್ಕದ ಮನೆಯವರಿಗೆ ಕೇಳಿಸದಷ್ಟು ಆದರೆ ಅವ್ವನಲ್ಲಿ ಕರುಣೆ ಉಕ್ಕುವಷ್ಟು ಗಟ್ಟಿಯಾಗಿ ಅಳುತ್ತ "ಇಲ್ಲವ್ವ. ಬ್ಯಾಡವ್ವ, ಇನ್ನು ಮಾಡಲ್ಲವ್ವ" ಎಂದು ಮೊರೆಯಿಡುವಳು. ಇದು ಹಿತ್ತಿಲವರೆಗೂ ಸಾಗಿ ಹುಲ್ಲುಚಾರಿ, ತಿಪ್ಪೆಯ ಸುತ್ತ ನಡೆಯಿತು ; ಪಕ್ಕದ ಮನೆಯ ನಿಂಗವ್ವ ಇದನ್ನು ಕೇಳಿ ರಂಗವ್ವ ತನ್ನ ಮಗಳನ್ನು ಎಷ್ಟು ಹದ್ದುಬಸ್ತಿನಲ್ಲಿಡುತ್ತಿದ್ದಾಳೆ ಎಂದು ಮೆಚ್ಚಿ ತನ್ನ ಮಗಳಿಗೂ ನಾಲ್ಕು ಕೊಟ್ಟಳು.

ಮಗಳು ತಪ್ಪೊಪ್ಪಿಕೊಂಡು ಕಂಬನಿ ಸುರಿಸಿದರೂ ತೃಪ್ತಳಾಗದೆ ರಂಗವ್ವ ಅವೊತ್ತೆಲ್ಲ ಸರ್ಪಗಾವಲಿಟ್ಟಳು. ಕರಿಯನಿಗೆ ಬರಹೇಳಿ ಬರೀ ಆಶ್ವಾಸನೆ ಮಾತ್ರ ಕೊಡದೆ. ಚಿಗಳಿ, ಚಕ್ಕುಲಿ, ಹುರಿಟ್ಟು ಕೊಟ್ಟು ಮಂಜ ಇವತ್ತು ಎಲ್ಲೆಲ್ಲಿ ಹೋಗುತ್ತಾನೆ ನೋಡಲು ಹೇಳಿದಳು. ಕರಿಯ ಏನೂ ತಿಳಿಯದೆ, "ಯಾಕೆ ?" ಅಂದ.

"ಯಾಕೆ ಅಂದ್ರೆ ನಿನ್ನ ಮೂತಿಗೆ ಮಂಗ್ಯಾರ್ತಿ ಎತ್ತಾಕೆ, ಯಾಕಂತೆ ಯಾಕೆ, ಒಳ್ಳೇ ಮಾತಿಂದ ಹೋಗು" ಎಂದಷ್ಟೇ ಹೇಳಿದಳು. ಕರಿಯ ತನ್ನ ಕೆಲಸ ಆರಂಭಿಸಿದ ; ಮಂಜ ನಿಗೂ ಕರಿಯನ ವರ್ತನೆ ಕಂಡು ಅನುಮಾನ ಬಂತು. ಕರಿಯ ಆತ ಹೋದಲ್ಲೆಲ್ಲ ನಾಲ್ಕು ಮಾರು ದೂರದಿಂದ ಹಿಂಬಾಲಿಸುತ್ತಿದ್ದ. ಮೊದಮೊದಲು "ಹುಚ್ಚು ಸೂಳೆ

ಮಗ" ಎಂದುಕೊಂಡು ತನ್ನ ಕೆಲಸ ತಾನು ಮಾಡಿದ ; ಶಿವಲಿಂಗಪ್ಪನನ್ನು ಕಂಡು ಪಿಸು ಗುಟ್ಟಿದ ; ಇಬ್ಬರೂ ಬಹಳ ಹೊತ್ತು ಚರ್ಚಿಸಿದರು ; ಅವರಿಬ್ಬರ ಕೈಸನ್ನೆ, ನಗೆ ಮತ್ತು ಹಣ ಕೊಟ್ಟು ತೆಗೆದುಕೊಳ್ಳುವುದು ಮಾತ್ರ ಗೋಚರಿಸುತ್ತಿದ್ದುದರಿಂದ ಕರಿಯ ದೂರ ದಲ್ಲಿ ತೇರಿನ ಪಕ್ಕದಲ್ಲಿ ಕೂತು ಮಂಜನ ಬಗ್ಗೆ ಏನೇನೋ ಕಲ್ಪಿಸಿಕೊಂಡು, ದೊಡ ವ್ಯಾಪಾರ ಇರಬಹುದೆಂದು ಯೋಚಿಸಿದ. ಮಾತು ಮುಗಿಸಿದ ಮೇಲೆ ಮಂಜ ಏನೂ ತಿಳಿಯದವನಂತೆ ತೇರಿನ ಹತ್ತಿರ ಹೋಗಿ ಕರಿಯನನ್ನು ಗಬಕ್ಕನೆ ಹಿಡಿದುಕೊಂಡ. ಕರಿಯ ಕೊಸ್ಸರಿಸಿಕೊಂಡು ಓಡಲು ಯತ್ನಿಸಿದರೂ ಬಿಡಲಿಲ್ಲ. ಹೆದರಿಕೊಂಡು ಬೆವರು ತ್ತಿದ್ದ. ಇವನಿಗೆ ನಾಲ್ಕು ತಪರಾಕಿ ಕೊಟ್ಟರೆ ಒಳ್ಳೆಯದೆಂದು ನಾಲ್ಕು ಬಿಟ್ಟ ; ಕರಿಯ "ಹೊಡಿಬ್ಯಾಡಪ್ಪೋ—" ಅಂದ.

"ಏನೋ—ಯಾಕೋ ನನ್ನ ಬೆನ್ನ ಅತ್ತೀದೀ ?" ಅಂದ ಮಂಜ. ಮತ್ತೆರಡು ಬಿಗಿದ.

"ಹೇಳ್ತೇನಪ್ಪೋ" ಅಂದು ಕರಿಯ ಎಲ್ಲವನ್ನೂ ಹೇಳಿದ. ಮಂಜ ಯೋಚಿಸಿದ. "ನೋಡು ಕರಿಯ. ಈ ನಾಲ್ಕಾಣೆ ತಕೋ" ಎಂದು ಕೊಟ್ಟ. ಎರಡು ಕಡೆಯಿಂದಲೂ ಬಂದ ಲಾಭಕ್ಕೆ ಹಿಗ್ಗುತ್ತ ಕರಿಯು ಮುಖ ಮುಖ ನೋಡಿದ. ಮಂಜ ಅಲ್ಲಿಯೇ ಕೂತು ಒಂದು ಸುಂದರ ಪ್ರೇಮಪತ್ರ ರಚಿಸಿ ಅವನ ಕೈಗೆ ಹಾಕಿ, "ನೋಡು, ಇದನ್ನ ರಂಗವ್ವನ ಕಣ್ಣಿಗೆ ಬೀಳದಂಗೆ ಸಾವಂತ್ರೀಗೆ ತಲುಪಿಸಬೇಕು. ತಿಳೀತಾ ?"

"ತಿಳೀತು."

"ಏನು ತಿಳೀತು ಹೇಳು."

"ರಂಗವ್ವ ಸಂಜೇಕಡೆ ಹಲ್ಲರ್ ತಾವ ಹೋಗ್ತಾಳೆ. ಅವಾಗ ಸಾವಂತ್ರೀಗೆ ಕೊಡ್ತೀನಿ".

"ಭಲೆ" ಎಂದು ಕರಿಯನ ಬೆನ್ನು ಚಪ್ಪರಿಸಿ ತಾನು ನಾಳೆ ಹೊರಡಲು ಮಾಡಿಕೊಳ್ಳ ಬೇಕಾದ ಸಿದ್ಧತೆ ಮಾಡಿಕೊಳ್ಳಲು ಸೈಕಲ್ ಹತ್ತಿ ಹೋದ ಮಂಜ.

ಸಂಜೆ ಮನೆಯಲ್ಲಿದ್ದು ಕಾಲಿಗೆ ಜವ್ವು ಬಂದಿದ್ದರಿಂದ ರಂಗವ್ವ ಹಲ್ಲರ್ ಕಡೆಗೆ ಹೋಗಿ ಹರಟಿದಳು ; ಮನೆಗೆ ಬರುವಾಗ ಆಗಲೇ ನಸುಕಾಗಿತ್ತು. ಬಾಗಿಲು ತೆಗೆದು ಒಳಗೆ ನೋಡುತ್ತಾಳೆ, ಮಗಳಿಲ್ಲ. ಹಿತ್ತಲಿಗೆ ಹೋಗಿ ನೋಡುತ್ತಾಳೆ, ಮಗಳಿಲ್ಲ. ಭಯ ವಾಯಿತು ; ಏನು ಮಾಡುವುದೆಂದು ತೋಚದಾಯಿತು. ಪಕ್ಕದ ಮನೆಯ ನಿಂಗವ್ವನ ಬಾವಿಗೆ ಹೋಗಿ ನೋಡಿದಳು ; ಇರಲಿಲ್ಲ. ಗೊಳೋ ಎಂದು ಅಳುತ್ತ ಬೀದಿಗೆ

ಬಂದಳು. ಜನ ಏನಾಯ್ತು ಏನಾಯ್ತು ಎಂದು ಕೇಳಿದರು ; ಉತ್ತರ ಕೊಡದೆ ಕೇರಿ ಯುದ್ದಕ್ಕೂ ಅಳುತ್ತ ಯಾರಿಗೆಂದು ಅರ್ಥವಾಗದಂತೆ ಶಾಪ ಹಾಕುತ್ತಾ ಶ್ರೇಷ್ಠಿಯವರ ಮನೆಗೆ ಬಂದಳು. ಮೊದಲು ಶಿವಲಿಂಗಪ್ಪನನ್ನು ಕಂಡು ಮುಖದ ಮೇಲಿನ ನೀರಿಳಿಸ ಬೇಕೆಂದು ಆಶೆಯಾಗಿತ್ತು. ಅವರಿಂದಲೇ ಊರಿಗೆ ಎಲ್ಲ ಪಿಶಾಚಿಗಳು ಗಂಟುಬೀಳುತ್ತಿವೆ ಯೆಂದು ತಿಳಿದಿದ್ದಳು. ತನ್ನ ಮಗಳು ಕೈಯಿಂದ ಜಾರಿದಳೆಂಬುದೂ ರಂಗವ್ವನಿಗೆ ಅಷ್ಟೇ ಗ್ಯಾರಂಟಿಯಾಗಿತ್ತು. ಆದರೆ ಅವಳ ಜಾಣತನ ಅವಳ ಕೈಬಿಡಲಿಲ್ಲ. ಶ್ರೇಷ್ಠಿಯವರು ಶಾಸ್ತ್ರಿಯವರ ಕೂಡ ನಡುಮನೆಯಲ್ಲಿ ಕೂತದ್ದು ನೋಡಿದಳು ; ಇನ್ನೂ ಗಟ್ಟಿಯಾಗಿ ಅಳುತ್ತ ಮಂಜನ ಅಕೃತ್ಯ ತಿಳಿಸಿ ಕಾಲುಕಟ್ಟಿಕೊಂಡಳು.

ಶಾಸ್ತ್ರಿಯವರು ಅಂದರು, "ಅಲ್ಲವ್ವ, ನಿನ್ನ ಮಗಳು ಗಂಡು ಹುಡುಗರ ಜೊತೆಗೆ ಹೋಗದೆ ನೀನು ಹೋಗಾಕಾದೀತ ? ಯಾಕೆ ಹೀಗೆ ರಂಪ ಮಾಡ್ತಿ, ಬರ್ತಾಳೆ ಬಿಡು. ಇನ್ನೇನು ಬಂದುಬಿಡ್ತಾಳೆ. ಎಲ್ಲೊ ಮಾತಾಡ್ತಾ ನಿಂತಿರಬಹುದು".

"ಏನಪ್ಪಾ ಶಾಸ್ತ್ರಿ, ನೀನೂ ಹಿಂಗ್ಯಾಕೆ ಮಾತಾಡ್ತಿ ? ಮೈನೆರೆದ ಹುಡುಗಿ ಕಣ್ಣುತಪ್ಪಿಸಿ ಕೊಂಡಿದಾಳೆ ಅಂದ್ರೆ ಮನಸಿಗೆ ಬಂದದ್ದು ಮಾತಾಡ್ತೀಯಲ್ಲ" ಎಂದು ರಂಗವ್ವ ಏಕ ವಚನದಲ್ಲಿ ಶಾಸ್ತ್ರಿಯವರಿಗೆ ಬೈದಳು.

"ಸರಿ, ಈಗೇನವ್ವ ?" ಅಂದರು ಶಾಸ್ತ್ರಿಗಳು ; ಅವಳು ಅಳುತ್ತಲೇ ಇದ್ದಳು.

"ಹಿಂಗಾತು ಅಂತ ಯಾರಿಗೂ ಹೇಳಬ್ಯಾಡ, ಬಾಗಿಲು ಹಾಕ್ಕೊಂಡು ಮಗಳು ಮನೇಲೇ ಇದಾಳೆ ಅನ್ನೋ ಥರ ಇರು. ರಾತ್ರಿ ಆಕೆ ಬಂದ್ಮೇಲೆ ಹುಡುಗೀನ ಹಿಡ್ಕೊಳ್ಳಾಕೆ ಹೋಗಿದ್ದ ಅಂತ—" ಎಂದು ಶಾಸ್ತ್ರಿಗಳು ಸೂಚಿಸಿದೊಡನೆ ರಂಗವ್ವ ಉತ್ಸಾಹ ಭರಿತಳಾದಳು.

"ಅಂತ ?" ಎಂದು ಮುಂದಿನದನ್ನು ಕೇಳಲು ಹಾತೊರೆದಳು. ಶಾಸ್ತ್ರಿಗಳು ಯೋಚಿಸಿ ದರು.

"ಅಂತ ಏನ್ಬಂತು ? ದಂಡ ಹಾಕೋದು" ಅಂದರು.

ಆದರೆ ಅದರಿಂದ ರಂಗವ್ವನಿಗೆ ತೃಪ್ತಿಯಾಗುವಂತಿಲ್ಲ : ದಂಡದ ಮಾತು ಬಂದೊಡನೆ ಎಷ್ಟು, ಯಾರಿಗೆ ಆ ದುಡ್ಡು ಹೋಗುತ್ತೆ ಎಂದು ಮನಸ್ಸಿನಲ್ಲೇ ಹಲುಬತೊಡಗಿದಳು.

ಮತ್ತಷ್ಟು ದುಃಖ ತುಂಬಿ ಅತ್ತಳು; ತನ್ನ ಯಜಮಾನರು ಕಾಲರಾದಲ್ಲಿ ಸತ್ತು ಹೋಗದೆ ಜೀವಂತವಾಗಿದ್ದರೆ ಇಷ್ಟೆಲ್ಲ ಆಗುತ್ತಿತ್ತೆ ಎಂದು ಕೇಳುತ್ತ ರಾಗರಾಗವಾಗಿ ಅತ್ತಳು. ಇದು ಗೊತ್ತಾಗಿ ಶಾಸ್ತ್ರಿಗಳು,

"ನೋಡವ್ವ ನೂರು ದಂಡ ಹಾಕಿದರೆ ಅರ್ಧ ನಿನಗೆ ಬರುತ್ತೆ, ಇನ್ನರ್ಧ ಊರಿಗೆ ಸೇರುತ್ತೆ. ತಿಳೀತಾ ? ನಿನ್ನ ಮಗಳು ನಿನ್ನ ಹದ್ದುಬಸ್ತಲ್ಲಿರಬೇಕು" ಎಂದು ತಮ್ಮ ಮಾತಿಗೆ ತಾವೇ ನಕ್ಕರು.

ರಂಗವ್ವ ಮನೆಗೆ ಹೋಗಿ ಮುಂಚೆ ಬಾಗಿಲು ಮುಚ್ಚಿಕೊಂಡು ಕಾಯತೊಡಗಿದಳು.

* * * *

ಇತ್ತ ಸಾವಂತ್ರಿ ಮತ್ತು ಮಂಜ ಸಂಜೆಯ ಮಬ್ಬು ಆರಂಭವಾಗುವಾಗ ರೈಲು ರಸ್ತೆಯ ಲೆವೆಲ್ ಕ್ರಾಸಿಂಗ್ ಹತ್ತಿರ ಸಂಧಿಸಿ ಹಾರ್ನಳ್ಳಿಯ ಟೆಂಟ್ ಸಿನಿಮಾಕ್ಕೆ ಹೋಗುವುದೆಂದು ಗೊತ್ತಾಗಿತ್ತು. ಸಾವಂತ್ರಿಗೆ ಪುಕ್ಕಲು; ಗಂಡಸಿನ ಜೊತೆಗೆ ಹೊರಗೆ ಹೋಗು ತ್ತಿರುವುದು ಇದೇ ಮೊದಲು. ಅವ್ವ ಹಲ್ಲರ್ ಹತ್ತಿರಕ್ಕೆ ಹೋಗಿದ್ದಳು; ಕುಂಬಳ ಗೆರೆಯ ಜನ ಹಿಟ್ಟು ಮಾಡಿಸುವುದಕ್ಕೆ ಬರುವ ಜಾಗ ಭರ್ಮಣ್ಣನ ಹಲ್ಲರ್; ಅಲ್ಲಿ, ಆಕೆಯ ಸಾಲಿಗರೆಲ್ಲ ಬರುತ್ತಾರೆ—ಬಡ್ಡಿ ಕೊಡುತ್ತಾರೆ ಅಥವ ಸಬೂಬು ಹೇಳುತ್ತಾರೆ. ಅವ್ವ ಹಲ್ಲರಿಗೆ ಹೋಗದಿದ್ದರೇ ಒಳ್ಳೆಯದೆಂದು ಆಕೆಗೆ ಕೆಲ ಗಳಿಗೆ ಅನ್ನಿಸಿತ್ತು. ಹಾಗೆ ಹೋಗದಿದ್ದರೆ ಅದೇ ನೆಪದಲ್ಲಿ ಮನೆಯಲ್ಲಿ ಇರಬಹುದಿತ್ತು. ಈಗ ಹೋಗಬೇಕು ಕಿತ್ತೂರು ಚೆನ್ನಮ್ಮ ಸಿನಿಮಾ ನೋಡುವ ಚಪಲ ಬೇರೆ; ಊರ ಎಷ್ಟೋ ಜನ ನೋಡಿ ಬಂದಿದ್ದಾರೆ. ಹಾಗಾಗಿ, ಅವ್ವ ಅತ್ತ ಹೋದೊಡನೆ ಬಾಗಿಲು ಮುಂದು ಮಾಡಿಕೊಂಡು ಸುತ್ತ ಜನ ಯಾರೂ ಇಲ್ಲ ಎಂದು ಖಾತ್ರಿಪಡಿಸಿಕೊಂಡು ರೈಲು ರಸ್ತೆಯ ಕಡೆ ಹೊರಟಳು. ಮಂಜ ಸೈಕಲ್ ಜೊತೆಗೇ ಕಾಯುತ್ತ ನಿಂತಿದ್ದ; ಅಲ್ಲಿಂದ ಹಿಂದಕ್ಕೆ ಓಡಿಬಿಡಬೇಕೆನ್ನಿಸಿತು. ಆದರೆ ಅವ್ವನ ಜಿಪುಣತನ ಮತ್ತು ರಂಪಾಟದಲ್ಲಿ ತಾನು ಏನನ್ನೂ ಎಂದೂ ನೋಡುವುದು ಸಾಧ್ಯವಿರಲಿಲ್ಲ. ಹೆಜ್ಜೆ ಎತ್ತಿ ಎತ್ತಿ ಇಟ್ಟು ಅವನ ಹತ್ತಿರ ಬಂದಳು, ಆತ ನಗುತ್ತಿದ್ದ. ಇದರಲ್ಲಿ ಮಂಜ ತೀರ ಅನುಭವಿ ಎಂದು ಅವಳ ಪಶುತ್ವ ಸೂಚಿಸಿತು.

"ಸೈಕಲ್ ಅತ್ತೀಯೋ—ನಡಿಯೋಣವೋ ?"

"ಅತ್ತೀಯೋ ಅಲ್ಲ—ಹತ್ತೀಯೋ ; ತಿಳೀತಾ ? ನಾನು ಏನ್ನೂ 'ಅತ್ತಲ್ಲ'. ಹಿಂದಕ್ಕೆ ಹೋಗ್ತೀನಿ".

"ಅಲ್ಲವ್ವ ಮಾತಾಯಿ, ನನಗೇ ಕಲಿಸಾಕ್ಬರ್ತೀಯಲ್ಲ. ನಿನ್ನ ಕಾಗದದಾಗೆ ಎಷ್ಟು ತಪ್ಪಿದ್ವು ಗೊತ್ತ ?"

"ನಿನ್ಹಂಗೆ ನಾನು ಒಂದೇ ಕ್ಲಾಸಿನಾಗೆ ಹತ್ತು ಸಲ ಪಲ್ಟಿ ಹೊಡೆದಿಲ್ಲ."

"ಸರಿ ಈಗೇನು ಏಳು—ಹೇಳು. ನಡದ್ರೆ ಸಿನಿಮಾ ಸಿಗಲ್ಲ, ಯಾವುದಾದರೊಂದು ಹೇಳು. ಇಲ್ಲದಿದ್ದರೆ ಸುಮ್ಮನೆ ಒಂಟೋಗಾನ ಮನೀಗೆ."

ಮಂಜ ಅವಳಿಗೆ ಸರಿಯಾಗಿ ಸವಾಸೇರಾಗಿದ್ದ. "ಗಟ್ಯಾಗಿ ಹಿಡ್ಕೋ" ಎಂದು ಕ್ಯಾರಿಯರ್ ಮೇಲೆ ಹತ್ತಿದಳು ; ಅವನು ಸರ್, ಸರ್ ಎಂದು ನೂಕಿ ಸೈಕಲ್ ಏರಿದ ಜೋಲಿ ಜೋರಾಗಿತ್ತು, ಕೈ ಎಲ್ಲಿಟ್ಟುಕೊಳ್ಳುವುದೆಂದು ಗೊತ್ತಾಗದೆ ಸೀಟನ್ನು ಹಿಡಿದಳು ; ಅವನ ಪೃಷ್ಠ ಬೆಚ್ಚಗೆ ತಾಗಿ ರೋಮಾಂಚನವಾಗಿ ದಿಗಿಲಾಯಿತು. ಸೀಟಿನ ಕೆಳಭಾಗ ಹಿಡಿದುಕೊಂಡಳು. ರೈಲು ರಸ್ತೆಯ ಪಕ್ಕದಲ್ಲಿ, ಜಲ್ಲಿಗಳ ಮಗ್ಗುಲ ಎರಡಡಿ ಜಾಗದಲ್ಲಿ ಸೈಕಲ್ ತೂರಾಡುತ್ತ ಹೋಗುತ್ತಿತ್ತು. "ಜೋಲಿ ಕೊಡಬ್ಯಾಡ" ಅಂದ. ಅವಳು ಎಷ್ಟೇ ಪ್ರಯತ್ನಿಸಿದರೂ ಜೋಲಿ ಕೊಡುತ್ತಿದ್ದಳು ; ಸೈಕಲ್ ಒನೆದಾಡುತ್ತ ಹೋಗುತ್ತಿತ್ತು. ಕತ್ತಲು ಬೇರೆ ಎಲ್ಲೆಲ್ಲೂ ಮುಚ್ಚಿಕೊಳ್ಳುತ್ತಿತ್ತು. "ಜೋಕೆ" ಎನ್ನುತ್ತಿದ್ದಳು. ಅವನು ಪ್ರಯತ್ನಿಸಿದ ; ನೇರ ಮಾಡಿದ. ಬ್ಯಾಂಕಿನ ಎತ್ತರ ಜಾಗದಲ್ಲಿ ತೀರಾ ನಿಧಾನಕ್ಕೆ ಜೋಪಾನವಾಗಿ ಹೋಗುತ್ತಿದ್ದ ; ಆದರೆ ಸಮತಟ್ಟು ಜಾಗದಲ್ಲಿ ರೈಲುರಸ್ತೆ ಸಾಗಿದಾಗ ಜೋರಾಗಿ ಹೋಗುತ್ತಿದ್ದ. "ಏಯ್, ಏಯ್" ಅಂದಳು ; ಆದರೆ ಸೈಕಲಿನ ಮುಂಗಾಲಿ ಕಲ್ಲಿಗೆ ತಾಗಿ ಜಲ್ಲಿಯ ರಾಶಿಗೆ ಹೊಡೆದು ಅತ್ತಿತ್ತ ಒನೆದಾಡಿ ಇಬ್ಬರನ್ನೂ ಬೀಳಿಸಿತು ; ಆತ ಸೈಕಲಿನಿಂದ ಆಚೆ, ಮುಂಭಾಗಕ್ಕೆ ಬಿದ್ದ. ಸಾವಿತ್ರಿ ರಸ್ತೆಗೆ ದೂರಕ್ಕೆ ಬಿದ್ದಳು. ಇಬ್ಬರೂ ಕೂಗಾಡುತ್ತಿದ್ದರು ; ಬಿದ್ದ ಮೇಲೆ ಏನು ಮಾಡುವುದೆಂದು ತೋಚದೆ ಇದ್ದರು. ಮಂಜ ಮೇಲಕ್ಕೆದ್ದ. "ಥೂ" ಅಂದಳು ಸಾವಿತ್ರಿ ; "ಸೈಕಲ್ ಬಿಡೋಕೆ ಬರದ ಮ್ಯಾಲೆ—" ಎಂದು ಗೊಣಗುತ್ತ ಬಿದ್ದಿದ್ದಳು. ಮಂಜ ಇದ್ದಕ್ಕಿದ್ದಂತೆ ನಕ್ಕ. ಏಳು, ಏಳು ಎಂದು ಹೇಳಿ ಕೈಚಾಚಿದ. ಅವಳು ಕೈ ಹಿಡಿದುಕೊಳ್ಳದೆ ಎದ್ದಳು ; ಖಿನ್ನಳಾದಂತಿತ್ತು. "ನೋಡು. ನೀನು ಮುಂದೆ ಕಂಬಿ ಮೇಲೆ

ಕೊತ್ರೆ ಎಲ್ಲ ಸರಿಹೋಗುತ್ತೆ" ಅಂದ. ಅವಳು ಮರುಮಾತಾಡದೆ ಕಂಬಿಗೆ ತನ್ನ ಜಘನ ಏರಿಸಿದಳು. ಅವನು ಸೀಟಿನ ಮೇಲೆ ಕೂತು ಸೈಕಲ್ ಬಿಡಹತ್ತಿದ; ಸಾವಂತ್ರಿಯು ಹರಯದ, ಕತ್ತಲಲ್ಲೂ ಮಿರುಗುವ ಇಡೀ ದೇಹ ಅವನ ಬಾಹುವಿನಲ್ಲಿತ್ತು. ಜೊತೆಗೆ ಆತ ಕೈಗಳಿಂದ ತನ್ನ ಬಗಲು ಮತ್ತು ಮೊಲೆಯ ಅಂಚನ್ನು ಒತ್ತುತ್ತಿದ್ದಂತಿತ್ತು. ಒಂದು ಸಲ ಸಂದೇಹ ಬಂತು; ಆದರೆ ಅದೇ ಮುಂದುವರಿದಾಗ ಆತ ಬೇಕೆಂತಲೇ ಹಾಗೆ ಮಾಡುತ್ತಿಲ್ಲ ಅನ್ನಿಸಿತು. ಈ ಸಲ ಬಿದ್ದರೆ ಅವನ ಕೈಯ್ಯಲ್ಲೇ ಸಿಕ್ಕಿಹಾಕಿಕೊಳ್ಳು ತ್ತೇನೆ—ಎಂದುಕೊಂಡಳು. ರಸ್ತೆ ಏರುತ್ತಿದ್ದಾಗ ಅವನ ಕತ್ತು ಸಾವಂತ್ರಿಯು ಕತ್ತಿನ ಹತ್ತಿರ ಬಂದು ಕೆನ್ನೆಕೆನ್ನೆಗೆ ತಾಗಿತೇನೋ ಅನ್ನಿಸುತ್ತಿತ್ತು. ಹೀಗೇ ಹಾರ್‍ನಹಳ್ಳಿ ಸೇರಿ ಕಿತ್ತೂರು ಚೆನ್ನಮ್ಮ ಸಿನಿಮಾ ನೋಡುವಾಗಲೂ ಅಷ್ಟೆ; ಪಕ್ಕದಲ್ಲಿ ಮರ್ಯಾದಸ್ಥನಂತೆ ಕೂತಿದ್ದ; ಅವನೂ ಸಿನಿಮಾ ನೋಡುತ್ತಿದ್ದ; ಯುದ್ಧ, ಹಾಡು ಎಲ್ಲಕ್ಕೂ ಖುಷಿ ಗೊಂಡಿದ್ದ. ಆದರೆ ಕೆಲವು ಸಂದರ್ಭಗಳಲ್ಲಿ ಕೈಯೊಂದು ಸೊಂಟದ ಆಯಕಟ್ಟಿನ ಜಾಗ ದಲ್ಲಿ ಸವರುತ್ತಿದ್ದಂತೆ ಭಾಸವಾಗುತ್ತಿತ್ತು. ಸಿನಿಮಾ ಜೋರಾಗಿದ್ದಾಗ ಸುಮ್ಮನಿದ್ದು ಆಮೇಲೆ ನೋಡಿಕೊಳ್ಳುವ ಅಂದರೆ, ಆಮೇಲೆ ಆ ಕೈ ಅಲ್ಲಿರುತ್ತಿರಲಿಲ್ಲ. ಅದೇನನ್ನೋ ತೋರಿಸುವ ನೆವದಲ್ಲಿ ಎಡಗೈಯನ್ನು ಭುಜದ ಮೇಲೆ ಹಾಕಿ ಬಲಗೈಯನ್ನು ಎದೆಯ ಮೇಲೆ ಸವರಿದ. ಅವಳಿಗೆ ರೇಗಿತು. ಅದೇ ಕೋಪ ಸಿನಿಮಾದಿಂದ ಹೊರಗೆ ಬಂದಾ ಗಲೂ ಇತ್ತು. "ಈ ಸೈಕಲ್ ತಾವಿರು" ಅಂತ ಆತ ಅಂಗಡಿಗೆ ಹೋಗಿ ಬಂದ; ಚೀಲ ದೊಂದಿಗೆ ಬಂದವನೇ "ಅತ್ತು" ಅಂತ ಕಂಬಿಯ ಮೇಲೆ ಮತ್ತೆ ಕೂರಿಸಿ ಊರ ಕಡೆಗೆ ಬಿಟ್ಟ. ಇನ್ನೇನು ಊರು ಬಂತು ಅನ್ನುವಾಗ ಸೈಕಲ್ ನಿಲ್ಲಿಸಿದ, ಸುತ್ತ ಕಾಡು, ಕತ್ತ ಲಲ್ಲಿ ತೇಲುವ ಮಿಣುಕು ಹುಳುಗಳು. ಚೀರೋ ಎಂದು ಜೀವರಾಶಿಗಳ ಸದ್ದು. ಮಂಜ ಯಾಕೆ ಸೈಕಲ್ ನಿಲ್ಲಿಸಿದ ಎಂದು ಗೊತ್ತಾಗದೆ ನಿಂತಳು; ಆತ ಸ್ಟ್ಯಾಂಡ್ ಹಾಕಿದ. ಕತ್ತಲಲ್ಲಿ ಮುಖ ಸರಿಯಾಗಿ ಕಾಣುತ್ತಿರಲಿಲ್ಲ. ಹತ್ತಿರ ಬಂದ. "ನನ್ನ ಕಣ್ಣು ಕಾಣಸ್ತ ವೆಯಾ ?" ಅಂದ. ಅವಳು ಕತ್ತಲ್ಲಾಡಿಸಿದಳು. ಅವಳಿಗೆ ಯೋಚನೆ ಮಾಡಲು ಕೂಡ ಕಾಲ ಕೊಡದೆ ಸೊಂಟದ ಸುತ್ತ ಕೈಹಾಕಿ, ಕುತ್ತಿಗೆ ಎಳೆದು ಮುತ್ತಿಟ್ಟ. ಕೊಸರಿದಳು; ಆತ ಬಿಡಲಿಲ್ಲ. ಅದು ಎಷ್ಟು ಹೊತ್ತಾಯಿತೋ—ಥಟ್ಟನೆ ಎಚ್ಚೆತ್ತಂತೆ ಶಕ್ತಿಯನ್ನೆಲ್ಲ ಕೂಡಿಸಿ ನೂಕಿ ಕೆನ್ನೆಗೆ ಗಟ್ಟಿಯಾಗಿ ಬಾರಿಸಿದಳು. ಅದು ಎಷ್ಟು ಗಟ್ಟಿ ಪಟೆಂದರೆ ಮಂಜ ತತ್ತರಿಸುತ್ತ ಪಕ್ಕಕ್ಕೆ ಹೋಗಿ ಬಿದ್ದ. ಸಾವಂತ್ರಿಯು ಸೆರಗು ಎದೆಯಿಂದ ಜಾರಿ ಬಿದ್ದು ನೆಲ ಮುಟ್ಟುತ್ತಿತ್ತು. ಕೋಪ ಅಥವ ಗೊಂದಲದಿಂದ ನಡುಗುತ್ತಿದ್ದಳು. "ಹಲ್ಕ ಹಾದರಗಿತ್ತಿ ಮಗನೆ" ಅಂತ ಅವಡುಗಚ್ಚಿದ ಆಕೆ ಏದುಸಿರುಬಿಟ್ಟಳು; ಅವನ ತಲೆ ಸುತ್ತುತ್ತಿತ್ತು. ಬೇಕಾದ್ದಕ್ಕಿಂತ ಹೆಚ್ಚು ಗಟ್ಟಿಯಾಗಿ ನರಳಿದ; ಅವಳು ಎತ್ತಬಹು ದೆಂದು ತಿಳಿದು ಸೈಕಲ್ ಹತ್ತಿರ ಬಿದ್ದಿದ್ದ. ಆದರೆ ಹೊಲ ದಾಟಿದರೆ ಊರು; ಸಾವಂತ್ರಿ ಸೆರಗು ಸರಿಪಡಿಸಿಕೊಂಡಳು; ಜಾಕೆಟ್ಟಿನ ಭುಜ ಕಿತ್ತಂತಿತ್ತು—ಕಣ್ಣಿಗೆ ಗಾಳಿ

ನೆಕ್ಕುತ್ತಿತ್ತು. ಓಡಹತ್ತಿದ್ದಳು, ಭಾರವಾದ ತೊಡೆ ಎತ್ತಿ ಎತ್ತಿ ಕತ್ತಲಿಗೆ ಹುಚ್ಚು ಹಿಡಿಯುವಂತೆ ಮೊಲೆ ಗಾಳಿಯಲ್ಲಿ ಚಿನ್ನಾಟವಾಡುತ್ತಿರಲು ಓಡಿದಳು. ಅವನು ಸೈಕಲ್ ಏರಿದ.

*　　　*　　　*　　　*

ರಂಗವ್ವ ಕಾಯುತ್ತಿದ್ದಾಳೆ. ಬಾಗಿಲ ಮೇಲೆ ಕಣ್ಣು ನೆಟ್ಟಿವೆ. ಯಾರಾದರೂ ತಾನು ಕಾಯುತ್ತ ಕೂತಿದ್ದನ್ನು ನೋಡುತ್ತಿದ್ದಾರೋ ಎಂದು ಅಂಜಿ ಹೊರಗೆ ಎರಡು ಸಲ ಹೋಗಿ ಇಲ್ಲವೆಂದು ನೃಥಪಡಿಸಿಕೊಂಡಿದ್ದಾಳೆ.

ಬೀದಿಯಲ್ಲಿ ಕಾಲ ಸಪ್ಪಳ. ಕೈಗೆ ಕಡಗೋಲು ಎತ್ತಿಕೊಂಡಿದ್ದಾಳೆ.

ಅವಳು ಅದನ್ನು ಎತ್ತಿ ಬಾರಿಸುವುದಕ್ಕೆ ಕೂಡ ವೇಳೆ ಕೊಡದೆ ಬಾಗಿಲು ತೆರೆದುಕೊಳ್ಳುತ್ತದೆ. ಆತ ನುಗ್ಗುತ್ತಾನೆ. ಕಾಲ ಹತ್ತಿರ ಕೈಯಲ್ಲಿ ತಂದದ್ದು ಇಡುತ್ತಾನೆ. ಅವಳ ಮುಖದ ಭಾವನೆ ನೋಡಲು ನಿಮಿಷ ಮಾತ್ರ ನಿಂತು ಮೆತ್ತಗೆ ಹಿಂಜರಿಯುತ್ತ ಬಾಗಿಲು ಸೇರಿ ಮಾಯವಾಗುತ್ತಾನೆ. ಸಾವಂತ್ರಿ ಅವ್ವನ ಕಣ್ಣು ಆ ವಸ್ತುವಿನ ಮೇಲಿದ್ದಾಗ ಮೆಲ್ಲಗೆ ಒಳಗೆ ನುಸುಳುತ್ತಾಳೆ.

ಕಣ್ಣುಕಣ್ಣಿನ ಸೀರೆ. ನಸುಗೆಂಪು ; ಒಡಲು ವಿಚಿತ್ರ ಚಿತ್ರಗಳಿಂದ ಕೂಡಿದೆ. ಅಂಚಿನಲ್ಲಿ ಜರಿ ಇದೆ. ರೇಷ್ಮೆ.

ರಂಗವ್ವ ಊಟ ಮಾಡಿರಲಿಲ್ಲ. ಕಡಗೋಲು ತೆಗೆದು ಮೂಲೆಗೆ ಎಸೆದಳು : ಮಂಜ ತಾನು ಕೊಟ್ಟ ಸೀರೆಯ ಬಗ್ಗೆ ಹೆಚ್ಚು ರಾಮಾಯಣ ಮಾಡದೆ, ಏನನ್ನೂ ಹೇಳಿಕೊಳ್ಳದೆ ಹೊರಟುಹೋಗಿದ್ದ. ಮುಂದೆ ಏನು ಮಾಡುವುದೆಂದು ತೋಚದೆ, ಸಾವಂತ್ರಿ ಒಳಗೆ ಪಾತ್ರೆಪಡಗಗಳೊಂದಿಗೆ ಗದ್ದಲ ಆರಂಭಿಸಿದ್ದು ಗಮನಿಸಿ ಕೂತಳು. ತನ್ನ ಗಂಡ ಇದ್ದಿದ್ದರೆ ! ಆತ ಸಾವಂತ್ರಿಗೆ ಬೈಯುತ್ತಿದ್ದ ; ನಾಲ್ಕು ತಪಾರಕಿ ಕೊಡುತ್ತಿದ್ದನೋ ಏನೋ ! ಈ ವಿಚಾರದಲ್ಲಿ ತೀರಾ ಕ್ರೂರಿ ಆತ ! ಆದರೆ ತಾನು ಬಿಡಿಸಿಕೊಳ್ಳಲು ಹೋಗುತ್ತಿದ್ದೆ. ಬಿಡಿಸಿಕೊಳ್ಳಲು ಹೋದಷ್ಟೂ ಜೋರಾಗಿ ಹೋರಾಡುತ್ತ ಮಗಳಿಗೆ ಹೊಡೆಯಲು ಯತ್ನಿಸುತ್ತಿದ್ದ ; ಆಗ ತಾನು ಅವನ ಹೆಂಗಸು ಶಿವಿಯ ಹೆಸರು ಹೇಳಿ ಮೀಸೆಗೆ ಕೈಹಾಕಿ ಬಗ್ಗಿಸುತ್ತಿದ್ದೆ.

ಸಾವಂತ್ರಿ ಸುಮ್ಮನೆ ಕೂತಿದ್ದ ಅವ್ವನ ಹತ್ತಿರ ಬಂದು ನಿಂತಳು. ಅವಳು ಕತ್ತೆತ್ತಿದಾಗ,

"ದೇವ್ರಾಣೆ—ಅವ್ವ……."

"ಏನು ?" ಅಂದಳು ರಂಗವ್ವ.

"ದೇವ್ರಾಣೆಗೂ ಆತ ನನ್ನ……."

ಸೀರೆ ಎದುರಿಗೆ ತೆರದೇ ಇತ್ತು; ಒಡಲು, ಕಣ್ಣು. ದಡಿ, ಮುಸುಕು : ಅದರ ಕಡೆ ರಂಗವ್ವನ ಗಮನ ಹೋಗಲಿಲ್ಲ. ಅಥವಾ ಹೋದದ್ದು ತೋರಿಸಿಕೊಳ್ಳಲಿಲ್ಲ. ಮಗಳನ್ನು ನಂಬಿದಳು. ಯಾಕೋ ಈ ಇಡೀ ಪ್ರಕರಣ ಸಂತೋಷ ಕೊಡುತ್ತಿತ್ತು. ಅದನ್ನು ತೋರಿಸಿಕೊಳ್ಳಲಿಲ್ಲ. ಎದ್ದಳು ; "ಹಡಬೆ ಮುಂಡೆ ನಿನ್ನ ನಂಬಿಕೋಡು ನಾನು ಗಂಡು ಹುಡುಕ್ತ ಕುತಿದೇನಿ ; ನೀಸು—" ಎಂದು ಮುಂತಾಗಿ ಯಥಾಪ್ರಕಾರ ಗೊಣಗುತ್ತ ರಾದ್ಧಾಂತ ಮಾಡಿದ ಹಾಗೆ ನಟಿಸುತ್ತ……..ಸಾವಂತ್ರಿ ಅವ್ವನ ಎದುರು ನಿಲ್ಲಲಾಗದೆ ನಡುಮನೆಯ ಕಂಬಕ್ಕೆ ಒರಗಿ ಓರೆಗಣ್ಣಿನಿಂದ ನೋಡುತ್ತಿದ್ದಳು ; ರಂಗವ್ವ ಸೀರೆ ಮಡಿಸಿ ಅದು ಕಸವೆಂಬಂತೆ ಮೂಲೆಗೆ ಎಸೆದು ತನ್ನ ಬೈಗುಳ ಸಾಗಿಸಿದಳು. ಸಾವಂತ್ರಿಗೆ ಸೈಕಲ್, ಹೊರಗಿನ ಗಾಳಿ, ಕಿತ್ತೂರು ಚೆನ್ನಮ್ಮ—ಎಲ್ಲ ನೆನಪಿಗೆ ಬಂದವು ; ಕತ್ತಲ ಆಸರೆಯಲ್ಲಿ ಕೊಂಚ ಕೊಂಚ ಕಂಡಿದ್ದ, ತಾಕಿದ್ದ, ಅದೆಷ್ಟು ಹೊತ್ತೋ ತನ್ನ ತುಟಿಗೆ, ಒಳಕ್ಕೆ, ಕತ್ತಿನ ಮೇಲೆ ಸಾಗಿದ್ದ ಮುಖ ನೆನೆದಳು. ಊಟ ಮಾಡದೆ ಹಾಸಿಗೆಗೆ ಬಿದ್ದು ತಲೆದಿಂಬಿನಲ್ಲಿ ಮುಖವಿಟ್ಟು ಯೋಚಿಸಹತ್ತಿದಳು.

ಹೀಗೆ ಯೋಚಿಸುತ್ತಿದ್ದಾಗ ಮುಂಚೆ ಬಾಗಿಲು ತೆರೆದ ಸದ್ದಾಯಿತು. ಶಾಸ್ತ್ರಿಗಳು ಬಂದದ್ದು ಅವರ ಧ್ವನಿಯಿಂದ ಗೊತ್ತಾಯಿತು. ಶಾಸ್ತ್ರಿಗಳೆಂದರೆ ಸಾವಂತ್ರಿಗೂ ಗೌರವ ಭಾವನೆಯಿದ್ದುದರಿಂದ ಅವರ ಮಾತುಗಳನ್ನು ಬಹಳ ಎಚ್ಚರದಿಂದ ಕೇಳುತ್ತಿದ್ದಳು.

"ಏನು ರಂಗವ್ವ. ಪಂಚಾಯ್ತಿ ಮಾಡಬೇಕು, ದಂಡ ಹಾಕಬೇಕು ಅಂದೆ" ಅಂದರು. ಅವರ ಧ್ವನಿಯಲ್ಲಿ ನಗೆಯಿತ್ತು.

"ಯಂತ ದಂಡ ಹಾಕೋದು ಬಿಡ್ರೀ. ಹಾಳು ಮುಂಡೇವು" ಎಂದು ರಂಗವ್ವ ಮಾತು ತೇಲಿಸಿದಳು.

"ಹಾಗಂತ ಬಿಡೋಕಾದೀತ ? ಆ್ಞ" ಎಂದು ಇನ್ನಷ್ಟು ತುಂಟತನದಿಂದ ಶಾಸ್ತ್ರಿ ಹೇಳಿದರು.

"ಬಿಡಾಕಾಗದೆ ಇನ್ನೇನಾದೀತು ? ನೀವು ಯಾಕೆ ಬಾಯಿ ಮುಚ್ಕಂಡು ನಿಮ್ಮ ಕೆಲಸ ನೋಡ್ಕಂಡು ನಮ್ಮ ಹಾರ್ತಕ್ಕೆ ನಮ್ಮ ಬಿಡಬಾರದು ?" ಅಂದಳು ಅವ್ವ.

ಅವಳನ್ನು ಸಂತೋಷಪಡಿಸಬೇಕೆಂದು ಶಾಸ್ತ್ರಿಗಳು ವಿಷಯ ಬದಲಿಸಿ, "ನೋಡವ್ವ, ನಾ ಶಾಸ್ತ್ರ ಹೇಳೋದು ಬಾಳ ದಿನಕ್ಕೊಂದು ಸಲ, ಇವತ್ತು"— ಎಂದು ಅವರು ಹೇಳಿದೊಡನೆ ರಂಗವ್ವ ಚಟುವಟಿಕೆಯಿಂದ ಎದ್ದು ದೀಪ ದೊಡ್ಡದು ಮಾಡಿ ಕೂತಳು.

ಸಾವಂತ್ರಿಯ ಕಣ್ಣು ಹತ್ತತೊಡಗಿದವು. ಯಾವ ಶಾಸ್ತ್ರವೂ ಆಕೆಗೆ ಅಷ್ಟೊಂದು ಕುತೂಹಲ ಕೆರಳಿಸುವ ಸಾಧ್ಯತೆ ಇವತ್ತಿರಲಿಲ್ಲ, ಮೈ ಕುಲುಕಾಡಿತ್ತು.

"ಯಂಥ ಶಾಸ್ತ್ರಪ್ಪ. ಹೇಳಂಗಿದ್ರ ಹೇಳ್ರಿ" ಎಂದು ರಂಗವ್ವ ತನಗೆ ಆಸಕ್ತಿ ಇಲ್ಲವೆಂಬಂತೆ ಮತ್ತು ಆಸಕ್ತಿ ತೋರಿಸಿದರೆ ದಕ್ಷಿಣೆ ಇಡಬೇಕೆಂಬ ಭಯದಿಂದ ಮಾತಾಡಿದಳು. ಶಾಸ್ತ್ರಿ ಅವಳ ನಿಲುವು ಗಮನಿಸದವರಂತೆ, "ನೋಡವ್ವ. ನೀನು ಮುಟ್ಟಿದ್ದಕ್ಕೆ ತಟ್ಟಿದ್ದಕ್ಕೆ ನನ್ನ ಹತ್ರ ಬರಾಕಾಗೋಲ್ಲ, ನಾನು ಇವತ್ತು ಈ ಊರಾಗೆ ನಾಳೆ ಇನ್ನೊಂದು ಊರಾಗೆ. ಅದಕ್ಕೇ ಹೇಳ್ತೇನೆ ನೋಡು. ನಿನ್ನ ಲೆಕ್ಕ ನೋಡಿಕಳ್ಳೋಕೆ ಒಬ್ಬ ಹುಡುಗ ಸಿಗ್ತಾನೆ ನಿಂಗೆ....ಭಾಳ ಒಳ್ಳೇ ಹುಡುಗ, ತಿಳೀತ ?" ಅಂದರು.

ಹಲ್ಲರಿನ ಭರ್ಮಣ್ಣನ ಲೆಕ್ಕಾಚಾರದಲ್ಲಿ ಹಲವಾರು ರೂಪಾಯಿ ಕಳೆದುಕೊಂಡ ಅನುಮಾನ ಬಂದಿದ್ದ ರಂಗವ್ವ ತುಂಬ ಸಂತೋಷದಿಂದ ಮತ್ತೆ ಮತ್ತೆ ಪ್ರಶ್ನಿಸಿದಳು. ಆ ಹುಡುಗ ವಕ್ಕಲುತಂದವನೇ ಕಾಟಗರವನೇ ಎಂದು ಮುಂತಾಗಿ ಪ್ರಶ್ನಿಸಿದಳು. ಶಾಸ್ತ್ರಿ ಅವಳ ಒಂದೊಂದು ಮಾತಿಗೂ ನಕ್ಕರು : ಹೆಚ್ಚು ಹೇಳಲು ಹೋಗದೆ ಮಂಜನಂಥ ಒಬ್ಬ ಹುಡುಗನನ್ನು ವರ್ಣಿಸಿ ಅವಳ ಮನಸ್ಸು ಕೊಂಚ ಫಲವತ್ತಾಗುವಂತೆ ಮಾಡಿದರು. ಮತ್ತು ಇದ್ದಕ್ಕಿದ್ದಂತೆ ಅಂದರು, "ನೀನು ಸುಖಪಡ್ತೀ ರಂಗವ್ವ, ನಿನ್ನನ್ನ ನೋಡಿದರೆ ನನಗೆ ಶಾಸ್ತ್ರ ಹೇಳುತ್ತೆ—ನೀನಿನ್ನ ಸುಖಪಡ್ತೀ." ರಂಗವ್ವ ನಿಜಕ್ಕೂ ತನ್ನ ನಲವತ್ತು ವರ್ಷಗಳನ್ನು ದಾಟಿ ಗಂಡಸಿನ ಕಣ್ಣಿಗೆ ಹುಚ್ಚು ಹಿಡಿಸುತ್ತಿದ್ದಳು.

ರಾತ್ರಿ ಕನಸಿನಲ್ಲಿ ಬೆಕ್ಕು ಪಾತ್ರೆ ಬೀಳಿಸಿದಂತಾಗಿ ಸಾವಂತ್ರಿ ಎದ್ದಳು ; ನಿಜಕ್ಕೂ ಪಾತ್ರೆ ಬಿದ್ದ ಸದ್ದಾಗಿತ್ತು. ಎದ್ದು ನೀರು ಕುಡಿಯಲು ಹೋದಾಗ ನೆರಕೆಯಿಂದ ಬರುತ್ತಿದ್ದ ಚಂದ್ರನ ಬೆಳಕಿನಲ್ಲಿ ನೋಡುತ್ತಾಳೆ—ಅವ್ವ ಶಾಸ್ತ್ರಿಗಳ ತೋಳಲ್ಲಿ ಮಲಗಿದ್ದಾಳೆ. ಒದ್ದು ಬಿಡಬೇಕೆಂದು ಕೋಪ ; ತಾನು ಸಂಜೆ ತಪ್ಪೊಪ್ಪಿಕೊಳ್ಳಬಾರದಿತ್ತೆಂಬ ಪಶ್ಚಾತ್ತಾಪ ; ಜೊತೆಗೆ ಅವ್ವ ಮಲಗಿರುವ ರೀತಿ ನೋಡಿ ಎಂಥವರೂ ಕಲಿಯಬಹುದೆಂಬ ಮೆಚ್ಚಿಕೆ.

ಹಾಸಿಗೆಯಲ್ಲಿ ಬಿದ್ದು ಬಹಳ ಹೊತ್ತು ನಿದ್ರಿಸಲಾಗದಿದ್ದರೂ ಬೆಳಗ್ಗೆ ಎದ್ದಾಗ ಲವಲವಿಕೆಯಿಂದ ತುಂಬಿದ್ದಳು ಸಾವಂತ್ರಿ. ಶಾಸ್ತ್ರಿಗಳ ಸುಳಿವಿರಲಿಲ್ಲ. ಅವ್ವ ನಿತ್ಯದ ಹಾಗೆ ಎಮ್ಮೆ, ಆಕಳು, ಹಾಲು, ಹೈನು ನೋಡಿಕೊಂಡು ಗೊಣಗಾಡುತ್ತಿದ್ದಳು. ಸಾವಂತ್ರಿಗೆ ತಾನು ಕಂಡದ್ದು ಕನಸೋ ನಿಜವೋ ಪತ್ತೆಹಚ್ಚಬೇಕೆಂದು ಮನಸ್ಸಾಯಿತು. ಮುಂದೆ ಜಗಳವಾದಾಗ ಮಾತ್ರ ಈ ವಿಷಯ ಎತ್ತಬಹುದೆಂದು ನಿಶ್ಚಯಿಸಿ 'ಹೇ ನನ ರಮಣ' ಎಂದು ಗಟ್ಟಿಯಾಗಿಯೇ ಹೇಳತೊಡಗಿದಳು. (ಸಶೇಷ)

●

ಶುಭ ಸಂದೇಶ

ಕೆ. ಜಿ. ರಂಗಯ್ಯ

ಕೆರೆಯಂ ಹಿಂದಿನ ನಮ್ಮ
ತೋಟದಲ್ಲೊಂದು ದಿನ
ಬಾನ ನಿಲುವಿಗೆ ಬೆಳೆದ
ಅಡಕೆ ಮರದಡಿಯಲ್ಲಿ
ಸರಸ ಸಲ್ಲಾಪದಲ್ಲಿ
ಕುಳಿತಿರಲು ಬಳಿ ಬಳಿಯೊ–
ಳೊಂದುಗೂಡಿ,
ಸುರಿಯಿತಡಕೆಯ ಮರವು
ನಮ್ಮ ತಲೆಗಳ ಮೇಲೆ
ಹೊಡೆಯಕ್ಕಿ ಹೊಂಬಾಳೆ
ಹೂವುಗಳನು.

ಮೇಲೆ ನೋಡಲು ಬೆಚ್ಚಿ
ಹೀಚು ಕಾಯನು ಕಚ್ಚಿ
ಕೇಕೆ ಹಾಕುತಲಿತ್ತು
ಪುಟ್ಟ ಇಣಚಿ.

ಎಂದೆ ನಾನಾಕ್ಷಣವೆ—
“ಅದಿಗೊ ! ವೇದದ ಘೋಷ,
ಇದೊ ! ಇಲ್ಲಿ ಅಕ್ಷತೆಯು,
ಆಯಿತಲ್ಲವೆ ಚೆಲುವೆ
ನಮ್ಮ ಮದುವೆ ?”

ಉತ್ತರಕೆ ಬದಲಾಗಿ
ನೀನು ತಲೆಯನು ಬಾಗಿ
ನಿಂತಿರಲು ನಾ ತಿಳಿದೆ
‘ಹೌದೆಂದೆ’ ಯೆಂದು.

ಅಳಿಲು ನಕ್ಕಿತು ಪುನಃ
ಸರಿದು ದೂರಕೆ ನೀನು
ಕದ್ದು ನನ್ನನು ನೋಡಿ
ಕಾಲ್ಬೆರಳ ತುದಿಯಿಂದ
ನೆಲದ ಹಾಳೆಯ ಮೇಲೆ
ಬರೆದ ಲಿಪಿಯನು ಕಂಡು
ಅರ್ಥವಾಗದ ಅದನು
ನಾನೂಹಿಸಿದೆ ; ನೀನು
“ನಿಮ್ಮೂಹೆ ನಿಜ” ವೆಂದು
ಬರೆದೆಯೆಂದು.

ಎರಡು ಕವನಗಳು

ಬರಗೂರು ರಾಮಚಂದ್ರಪ್ಪ

೧. ಬೆನ್ನ ಹಿಂದೆ

ಕಿಲ್ಲೆ ಕಿಮ್ಮತ್ತುಗಳ ಹೊತ್ತ ಗೋರಿ–
ಗಳು ತೀಡಿ ತೀಡಿ ಕಿಚ್ಚು ಹುಚ್ಚೆದ್ದು ಹೋರಿ ;
ದಕ್ಕಿಸಿಕೊಳ್ಳುವೆನೆಂದು ದಾಪುಗಾಲು
ಹಾಕುತ್ತಿದ್ದೇನೆ ಕಣೇ ಲೈಲಾ.

ಹಾರುವ ಹದ್ದು ಸುತ್ತ ಸಂಕೀರ್ಣ ಸದ್ದು
ಮೂಳೆಗಳ ಕೂಳೆ ಮೇಲೆ ಕಾಲು
ಹಾಕಿ
ಆಟ ಆಡುತ್ತಿದ್ದೇನೆಂದು ಅನ್ನಿಸಿದರೂ
ನಿನ್ನ ಉಬ್ಬು ತಗ್ಗು ಹಳ್ಳ ಕೊಳ್ಳಗಳಲ್ಲಿ
ಕಾವೇರಿ
ಯಾಗಿ
ಹರಿದು ನನ್ನಲ್ಲಿ ನಿನ್ನ ಮುಳುಗು–
ಗೊಳಿಸಬೇಕೆಂಬ ನೆರೆ ಮೊಳಗು
ನಾನು ಮಜ್ನು—ಬರುತ್ತಿದ್ದೇನೆ ಕಣೇ
ನಿನ್ನ ಮರೀಚಿಕೆ ಮೈಗಾಗಿ.

೨. ಭಾವುಕ

ಯಕ್ಷಿಣಿ ಚಾಪೆಯ ಮೇಲೆ ಗಾಳಿಯಲ್ಲಿ ಗಾಳಿಯಾಗಿ
ಕಾಲು ಬಡಿಯುವ ಸಾಹಸ.
ಕಬ್ಬಂಡೆಯಲ್ಲೂ ಕಮಲದ ಕಂಪು ಕಾಣುವ ಕಾತರ.
ಆದರ್ಶ ಆನಂದ ಇತ್ಯಾದಿ ಅನಂತ ದತ್ತುಗಳ ಮಧ್ಯೆ
ಬಂದ ಕಿಂಡಿ ಕಿಂಡಿ ಬೆಳಕಲ್ಲೂ ಕಡಲು ಕಂಡು
ಹಡಗಿನ ಪಯಣವನಂಡು
ತೀರ ತಲಪುವ ತವಕ.
ನಿಜದಲೆಗಳಬ್ಬರಕ್ಕೆ ನಿಬ್ಬೆರಗಾಗುವಾಗಲೆ
ಬರ್ನಾದರೆ ಬಲ್ಬು
ಪಾತಾಳಕ್ಕೆ ಹಡಗು ;
ಮುನಿದ ಮುಗಿಲಲ್ಲಿ ಸಿಡಿಲು ಗುಡುಗು.

ಕುಪ್ಪಣ್ಣ

ನಾ. ಮೊಗಸಾಲೆ

ಹೆಗಲೇರಿದ್ದಕ್ಕೆ ಕೆಳಕ್ಕಿಳಿಯೆಂದು ಜಗ್ಗಿದರು
ಇಳಿಯದ ಭೀತಿ, ಹೆಗಲು ಕೊಟ್ಟಿದ್ದೇನಲ್ಲ ಇವನಿಗೆ—
ಎಂಬ ತೃಪ್ತಿಯಲ್ಲಿದ್ದಕ್ಕಿದ್ದಂತೆ ಹಾಡೇ ಹಗಲು ಸುದ್ದಿ :
ಕುಪ್ಪಣ್ಣ ಸತ್ತ !

ಬಗೆದನೆ—ಇಲ್ಲ ; ಅವನೇ ಇಳಿದನೇ—ಊಹ್ಞೂಂ ;
ಸಾಯುವುದು ಪರಕೀಯ ಅನುಭವವೆ ? ಬರೆ ಅನ್ನಿಸಿಕೆಯೆ ?
ಅಥವಾ ಸತ್ತ ಕುಪ್ಪಣ್ಣ ಮತ್ತೂ ಮತ್ತೂ ಭಾರವಾಗುತ್ತಿದ್ದಾನೆಯೇ ?
ಸತ್ತಿಲ್ಲವೇ ಎಂದು ಹೆಗಲನ್ನೆ ಮುಟ್ಟಿಮುಟ್ಟಿ ನೋಡಿದೆ.

ಯಾವುದೂ ನಿಶ್ಚಯವಾಗಲಿಲ್ಲ : ಸಾಯುವುದು ಮತ್ತು ಬದುಕುವುದು—
ಎರಡಕ್ಕೂ ದಾಖಲೆ ಇದೇ ಎಂದು ಹೇಗೆ ಹೇಳಲಿ ? ಹೇಳದುಳಿದ-
ಷ್ಟೂ ಅಡಿಗ-
ಡಿಗೆ 'ಕಾಡುತ್ತಿವೆ ಭೂತಕಾಲದ ಭ್ರೂಣಗೂಢಗಳು' :

ಬರುತ್ತಿದ್ದವ ನಮ್ಮನೆಗೆ ಆಗಾಗ ಕುಪ್ಪಣ್ಣ-
ನಿಗೆ ಬಾಯಿತುಂಬ ನಾಲಗೆ ; ಹಲ್ಲಿಲ್ಲ. ಪಾಪಾಸುಕಳ್ಳಿ ಗಡ್ಡ.
ಹೊತ್ತಿನ ಮುಖಕ್ಕೆತ್ತಿ ಹಿಡಿದ ಶಿಖೆ—ಶ್ರೀಮಂತ—
ಸೊಂಟ ಬಾಗಿದರೂ
ಆಟಕ್ಕೆ ಹತ್ತಿದರೆ ನಡುರಾತ್ರಿಯ ವರೆಗೂ ಎಕ್ಕ ರಾಜ ರಾಣಿ

ಗುಲಾಮು. ಹೆಂಡತಿ ಮುಟ್ಟಾದಾಗ ಮುಟ್ಟಿ
ಹೊಳೆಯಲ್ಲಿ ದಿನಕ್ಕೆರಡು ಬಾರಿ ಮುಳುಗಿ ತೇಲಿಸಿದ ಜೊಟ್ಟು.
ಅಹ್ಮದ್ ಕುಟ್ಟಿ ಬತ್ತಿದೆಮ್ಮೆ ವ್ಯಾಪಾರಕ್ಕೆ ಬಂದಾಗ
ಬಾಲ ಎತ್ತಿ ನೋಡು ಎಂದು ಹೇಳಿದ
ಮೀನಾಕ್ಷಿ ಭವನದಲ್ಲಿ ಕಾಫಿ ಕುಡಿಯುವಾಗ ಕುರುಕ್ಷೇತ್ರ-
ದ ಕತೆ ವರ್ಣಿಸುತ್ತ ಮೇಜುಗುದ್ದಿ ಮುರಿದ.
ಇವೆಲ್ಲ ವ್ಯಕ್ತಿತ್ವ ಕಳಕೊಂಡು ತಿರುಗುಮುರುಗು ಪಾದಗಳಾದಾವೆ ?
ಅಥವಾ ಸತ್ತಾವೇ ?

ಪಾಪ ; ಕುಪ್ಪಣ್ಣನಿಗೆ ಮಕ್ಕಳಿಲ್ಲ.
ಮುಂಜಾನೆ ಚಳಿಗೆ ಮೈತುಂಬ **ಕುರಿಯ ಕಂಬಳಿ** ಹೊದ್ದು
ಊರ ಬೇಲಿ ಹರಿದುಕೊಂಡ ಎಮ್ಮೆಗಳನ್ನೋಡಿಸುತ್ತ
ಹೊಟ್ಟೆ ಹುಣ್ಣಿನಿಂದ ಹಿಂಡಿ ಹಣ್ಣಾದರೂ
ಹುಳಿಯೆಮ್ಮೆ ಮಜ್ಜಿಗೆ ಅಪಥ್ಯವಾದರೂ ಬಿಡದೆ ಕುಡಿಯುತ್ತಿದ್ದವ
ಕವಳ ಪೂತ್ಕರಿಸಲು ಹೊರಗೆ ಹೋದ ಹಾಗೆ—
ಹೋದ—ಊರಲ್ಲೆಲ್ಲ ಸುದ್ದಿ.

ಎಲ್ಲ ನೆನಪುಗಳ ಒಜ್ಜೆಗೆ ಹೆಗಲೇ ಮುರಿದು
ಇನ್ನೇನು ಕುಸಿಯುತ್ತೇನೆಂದರೂ ಒಗೆಯಲಾರೆ ; ಇಳಿಯಲಾರ.
ಕಣ್ಣು ಕತ್ತಲೆ ಬಂದು ಕಂಡಲ್ಲೆಲ್ಲ ಓಡಿದೆ. ಓಡಿ ಮನೆಯೊಳಗೆ
ಹೆಗಲನ್ನೆ ಹಾಸಿಗೆಗೊಗೆಯುತ್ತೇನೆಂದು—ಓಡಿದೆ.

ಕೊನೆಗೂ ಸಿಕ್ಕಿತು ಮನೆ, ಬಾಗಿಲು ತಟ್ಟಿದರೆ—
ರೋಸಿ—

ನನ್ನ ಮನೆಯಲ್ಲೆ ? ಅಥವಾ ನಾನು ರೋಸಿ ಮನೆಗೆ ಬಂದೆನೆ ?
ಅನಿಶ್ಚಿತತೆಯಲ್ಲಿ ರೋಸಿ ಹಾಸಿಗೆಗೆಳೆದಿದ್ದಳು.
ಕುಪ್ಪಣ್ಣಾs ಬಿಡಿಸುs ಬಿಡಿಸುs
ಚೀರಿದಷ್ಟೂ ಬಂಧ ಬಿಗಿಯಾಗಿ ಹೆಗಲು ಹಗುರಾಗಿ
ಕೊನೆಗೆ ಹೆಗಲೇ ಇಲ್ಲದ್ದಕ್ಕೆ ಹೆದರಿ ಚೀರಹತ್ತಿದೆ.

ಬೆಳದಿಂಗಳು

ಊರ್ಮಿಳಾ ಸೋಮಯಾಜಿ

ಶಶೀ,
ನೀನೇನೊ ಒದ್ದೆ ಮಣ್ಣು ಹಿಂಡಿ ಬರುವ ನೀರಂತೆ ಕಷ್ಟಪಟ್ಟು
ಆದರ್ಶದ ಲೈಟು ಉರಿಸಿ ದೊಡ್ಡ ಕಟ್ಟಡಗಳ ಸುತ್ತ ಗಸ್ತು ಹೊಡೆಯುತ್ತೀಯ
ಈಚೀಚೆಗೆ ಕಡಲ ಗಾಳಿಯಲ್ಲಿ ಹೂತಿಟ್ಟ ಮೀನ ವಾಸನೆ ತುಂಬಿ ಸ್ವರ್ಗ ನೆನಪಿಸುತ್ತೀಯ
ನಿನಗೆಲ್ಲ ತೀರ ನಾಚಿಕೆಯಾದರೆ ಅಮೇರಿಕಾಗೊ ಇಂಗ್ಲಾಂಡಿಗೊ ಹೊರಟುಬಿಡುತ್ತೇವೆ
ನಿನ್ನ ಅಮೃತಶಿಲೆಯ ಕಲ್ಲನ್ನೆಲ್ಲ ಹೃದಯ ರಚಿಸಲು ತಂದಿದ್ದೇವೆ
ಯಾರಿರಬಹುದು ಪುಣ್ಯವಂತ !
ನಿನ್ನ ನಗೆಗಾಗಿ ತಾಪಸಿಯಾಗಿದ್ದೇವೆ. ನಮ್ಮೂರ ಬಂಡೆಕಲ್ಲೆಲ್ಲ ಚೂರು
ಚೂರಾಗಿದೆ ರಸ್ತೆಯಲ್ಲಿ
ರಿಯಾಯತಿ ಇದೆಯಾ ಅಂದರೆ
ನೀರು ಹಾಕಿದರೆ ಕಾಫಿ ಅದಾದರೆ ಅನ್ನ ಸಾರು ಪಾಯಸವೆಲ್ಲ ಬೇಕೆನಿಸುತ್ತೆ ಅಂದೀಯಾ
ನೋಡು
ಈ ಭಾರತ ಹೋಟೇಲಿನ ಬೆಳದಿಂಗಳನ್ನು ನಾವು ರಾಷ್ಟ್ರೀಕರಿಸಿದ್ದೇವೆ.
ಹೋಗಲಿ ಬಿಡು ನೀರಿಲ್ಲದ ಕಣ್ಣಲ್ಲಿ ದುಃಖವೇಕೆ ಈಗ ಬಿಡು
ನಿನ್ನ ಕಲ್ಲು ಮಣ್ಣೆಲ್ಲ ಅಗೆಯಲಿ ಬಿಡು ಅವರ ಮಕ್ಕಳಾಟಿಕೆಗೆ ಚಂದ್ರಮಣ್ಣು ಬೇಡವೆ ?
ಅಶ್ವತ್ಥಮರದಡಿಯ ದೀಪದಲ್ಲಿ ತಮ್ಮ ಬೀಡಿ ಸಿಗರೇಟು ಉರಿಸಲಿ ಬಿಡು
ಇಂಥ ಬಂಗ್ಲಾ ನಿರಾಶ್ರಿತರು ಮಧ್ಯಾಹ್ನದ ಸೆಖೆ ತಡೆಯಲಾರದೆ ಕಾಶ್ಮೀರ ಹುಡುಕುತ್ತಾರೆ
ಮೊನ್ನಿನ ದುಂಡು ಮೇಜಿನ ಪರಿಷತ್ತಿನಲ್ಲಿ ಹಲವಾರು ಒಳದಾರಿ ಕಂಡುಹಿಡಿದಿದ್ದೇವೆ

ಕ್ಷಮಾಪತ್ರಗಳನ್ನು ಹೇಗೆ ಪೋಸ್ಟ್ ಆಫೀಸಿನಲ್ಲಿ ಹಂಚುವಾ
ಯಾವ ಟೆಲಿಫೋನ ತಂತಿಯ ಮೂಲಕ ವೈತರಣಿಯನ್ನು ಇತ್ಯಾದಿ ಇತ್ಯಾದಿ
ಆದರೂ ಈ ರಾತ್ರಿಯೆಲ್ಲ
ನಾಯಿ ಬಾಗಿಲಲಿ ಮೈತಿಕ್ಕುತ್ತ ಕೊರಳೆತ್ತಿ ಅರಚುವ ಇಡೀ ರಾತ್ರಿಯ
ಕ್ಯಾಬರೇ ನೋಡಿದ್ದೇವೆ
ತಿಂಗಳ ಅನುಭವಿಸಲು ನಮ್ಮ ಮೇಲೆಲ್ಲ
ಮಂಜಿನ ಹನಿಯೆಲ್ಲ ಸೊಂಪಾಗಿ ನಿದ್ರಿಸಿವೆ
ನಾವೆಲ್ಲ ಬರೀ ಪುಕ್ಕಲೇನು ಸರಿ
ನಾಳೆ ಪ್ಯಾಂಟು ಕನ್ನಡ ರಕ್ತ ಕನ್ನಡ ಎಂದವರೂ
ಈ ಬೆಳದಿಂಗಳಲ್ಲಿ ಗಮ್ಮತ್ತಾಗಿ ನಿದ್ರೆ ಹೊಡೆಯುತ್ತಾರೆ
ಏನು ಮಾಡುವಾ ನಾವು
ನಾಳೆ ನಮ್ಮ ಪ್ಯಾಂಟು ಹರಿಯುತ್ತದೆ
ರಕ್ತ ಹೆಪ್ಪುಗಟ್ಟುತ್ತದೆ.

ಅಮ್ಮ ಮತ್ತು ಮರ

ಕೆ. ಎಸ್. ಮಧುಸೂದನ

ಗಾಳಿ ಸರಸರ
ಮೈಗೆ ಕಚಗುಳಿ
ಗಮಲು ಘಮಗಮ
ಈ ಅನುಭವ
ಬೆಚ್ಚಗೆ, ಹಚ್ಚಗೆ

ವಂಕಿಲ್ಲ ಕೊಂಕಿಲ್ಲ
ಅಷ್ಟುದ್ದ ಇಷ್ಟಗಲ
ನೆಟ್ಟಗೆ
ಈಕೆ.

ಹಸಿರು ಸೆರಗು
ತಲೆ ತುಂಬ ಹೂ
ಎಲೆ ಎಲೆ ಬಳೆ ಝಣ ಝಣ,
ಚೌಕಾಸಿ ಇಲ್ಲದೆ ಚೆಲ್ಲಿದ ಜಡೆ ನೆರಳಡಿ
ನಾನು ನಿಶ್ಚಿಂತ, ವಿಶ್ರಾಂತ.

ತಬ್ಬಿ ಮುಗಿಲ
ಹಬ್ಬಿ ಬಯಲ
ಸದ್ದಿಲ್ಲದೆ ಗದ್ದಲವಿಲ್ಲದೆ
ನಿಂತಿರುವ ನಿಲುವಿನೆದುರು
ನಾನು ಮಗು, ಮೂಗ.

ಕೊಡೈಕಾನಾಲ್‌ನಲ್ಲಿ

ಟಿ. ಆರ್. ಮೋಹನ

ಈ ಊರು
ಹಗಲಿರುಳ ಹೆಗಲು
ಹತ್ತಿ ಕೂತಿದ್ದಲ್ಲ.
ಹಿಮಪಾತದೊಡಲಲ್ಲಿ
ಛಳಿಯುಸಿರು
ಇಲ್ಲ.
ಆಕಾಶಮುಖಿ,
ಗಾಳಿಯಲೆಗುಲಿವ
ಮತ್ತೆ ಮೌನವಾಗಿ ಮರಗಟ್ಟುವ
ನೀಲಗಿರಿಗಳ ಕೆಳಗೆ
ಮಿಟುಕಾಣಿ
ನಾನು

ಕೊಕ್ಕೈನ್ ಕೊಟ್ಟು ಕೂಡಿಸುವ
ಛಳಿಯಲ್ಲೂ
ಹೊತ್ತಾರೆ ಹೊಂಗನಸು
ನಿನ್ನ ನೆನಪು !
ಆದರೆ ಇಲ್ಲಿನ ಛಳಿ
ನಿನ್ನ ದೇಹದ ಸುಳಿ
ಗೂ ಮಿಗಿಲು,

ಕೊಳ್ಳಿ ಕರಗುವ ಗಳಿಗೆ
ಗಳ ನಡುವೆ.
ಹೆಪ್ಪುಗಟ್ಟಿದ ಹಿಮ
ಕರಗೀ, ಕರಗೀ ಹರಿದು,
ಹರಿದು ಮರೆಯಾದಂತೆ
ನೀನು.
ಹಾತೊರೆದು ತಡಕಾಡುತ್ತೇನೆ :
ಕೆನ್ನಾಲಗೆಯ ಚಾಚಲೊದಗುವ,
ಜ್ವಾಲೆ ಮಾಲೆಯ ಬೆಸವ,
ಆ ಚೂರು
ಚಕಮುಕಿಗಾಗಿ.

ಹ್ಞೂಂ.... ಈಗ ಅನ್ನಿಸುತ್ತದೆ :
ಕಂಡದ್ದು ಕಾಣೆಯಾದಂತೆ ;
ಇದ್ದದ್ದು ಇಲ್ಲವಾದಂತೆ
ಕೊನೆಗೆ,
ನನ್ನ ನಾನೇ ಕಳಕೊಂಡಂತೆ.

THOUGHT ☐ EXPERIENCE

sākshi

NUMBER 15 APRIL 1972
QUARTLY KANNADA JOURNAL
PUB: AKSHARA PRAKASHANA
PRINT: SAGARA MUDRANA
BOTH AT SAGAR MYSORE STATE
SCHEDULE: OCT JAN APR JUL
SUBSCRIPTION ANNUAL RS 12

PROF. GOPALAKRISHNA ADIGA
EDITOR